(SRI H. SIDDAVEERAPPA.)

they have felt that this system has not been working quite satisfactorily. That is what I said. Even now I have no objection to inform the Government of India that there is a section of opinion like that. What may be the result of that, is a different matter. It is my experience also during this short period that telephones are used now in a more business-like manner than earlier. Opinions may differ.

In view of this and in view of the fact that my Hon'ble friend's opinion does not seem to commend universally to the House, I would request him to withdraw his resolution, and leave the matter to me. I shall intimate the Government of India that there is a feeling like that.

Sri T. MARIAPPA (Mysore City — North).—We shall wait for some time—some six months.

Mr. SPEAKER.—Government have promised to bring this matter to the notice of the Government of India after six months. What does the Hon'ble Member want to do with the Resolution ?

Sri Mulka GOVINDA REDDY.—I beg leave to withdraw the resolution, Sir.

The Resolution was, by leave, withdrawn.

RESOLUTIONS.

Mr. SPEAKER.—Now Resolutions will be taken up. I want to bring to the notice of this Hon'ble House, there are a large number of resolutions ; we have to cover as many resolutions as possible. I therefore request Hon'ble Members to be beief in their speeches. Only one or two members will speak on the Resolutions and the Minister concerned will reply.

First resolution stands in the name of Sri C. T. Hanumanthaiya.

No. 1. Amount to be earmarked for Depressed Class Amelioration.

ಶ್ರೀ ಸಿ. ಟಿ. ಹನುಮಂತಯ್ಯ (ಪಾವಗಡ-ಅನುಸೂಚಿತ ಜಾತಿಗಳು).—ಸ್ವಾಮಿ, ಈ ನಿರ್ಣಯವನ್ನು ಸಭೆಯ ಮುಂದೆ ಮಂಡಿಸಲಕ್ಕೆ ಸಭೆಯವರ ಅನುಮತಿಯನ್ನು ಬೇಡುತ್ತೇನೆ :—

"ನಿಮ್ನ ವರ್ಗದವರು ಮನೆಗಳನ್ನು ಕಟ್ಟಿ ಕೊಳ್ಳುವುದಕ್ಕೆ, ಮನೆಯ ನಿವೇಶನಗಳನ್ನು ಕೊಂಡುಕೊಳ್ಳುವುದಕ್ಕೆ ಮತ್ತು ತಮ್ಮ ಗೃಹ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸಿಕೊಳ್ಳುವುದಕ್ಕೆ ಮತ್ತು ಆ ಮೂಲಕ ತಮ್ಮ ಆರ್ಥಿಕ, ಸಾಮಾಜಿಕ, ನೈತಿಕ ಪರಿಸ್ಥಿತಿಯನ್ನು ಉತ್ತಮಗೊಳಿಸುವುದಕ್ಕೆ, ಅನುಕೂಲವನ್ನು ಕಲ್ಪಿಸುವುದಕ್ಕೆ ಮತ್ತು ವಿದ್ಯಾರ್ಥಿ ವೇತನಗಳನ್ನು ಕೊಡಲು ಅವಕಾಶ ಕಲ್ಪಿಸುವುದಕ್ಕೆ ಈ ಸಾಲಿನ ಬಜೆಟ್ಟಿನಲ್ಲಿ ಎಪ್ಪತ್ತೈದು ಲಕ್ಷ ರೂಪಾಯಿಗಳನ್ನು ಮೀಸಲಾಗಿಡಬೇಕೆಂದು ಈ ಸಭೆಯವರು ಅಭಿಪ್ರಾಯಪಡುತ್ತಾರೆ."

10 A.M.

ಸ್ವಾಮಿ, ಈ ನಿರ್ಣಯವನ್ನು ಸಭೆಯ ಮುಂದಿಡುತ್ತಾ ಕೆಲವು ಅಂಶಗಳನ್ನು ಸರ್ಕಾರದ ಗಮನಕ್ಕೆ ತರುತ್ತೇನೆ. ಪ್ರತಿವರ್ಷವೂ ಹರಿಜನರ ಅಭಿವೃದ್ಧಿಗಾಗಿ ಸರ್ಕಾರದವರು ಹತ್ತೊಂಭತ್ತು ಲಕ್ಷ ರೂಪಾಯಿಗಳನ್ನು ಮಾತ್ರ ಮೀಸಲಾಗಿಡುತ್ತಿದ್ದಾರೆ. ಅದೂ ಕೂಡ ಸರಿಯಾಗಿ ವಿನಿಯೋಗವಾಗುತ್ತಿಲ್ಲ. ಅದರಲ್ಲಿ ಕೊಂಚ ಭಾಗವನ್ನು ಮನೆ ಕಟ್ಟಿಕೊಳ್ಳುವುದಕ್ಕಾಗಿ ಹರಿಜನರಿಗೆ ಸೌಲಭ್ಯಗಳನ್ನೊದಗಿಸಲು ವಿನಿಯೋಗಿಸುತ್ತಾರೆ. ಮನೆ ಕಟ್ಟಲು ಮುನ್ನೂರು ರೂಪಾಯಿಗಳನ್ನು ಕೊಡಬೇಕೆಂದು ನಿಯಮಾವಳಿ ಇದೆ. ಕೆಲವು ಕಡೆ ಅದನ್ನೂ ಕೊಡುತ್ತಿಲ್ಲ. ಅದಕ್ಕೆ ಬದಲಾಗಿ 150, 200, 225 ರೂಪಾಯಿಗಳನ್ನು ಮಾತ್ರ ಕೊಡುತ್ತಿದ್ದಾರೆ. ಏಕೆ ಹೀಗೆ ಮಾಡುತ್ತೀರಿ ಎಂದು ಕೇಳಿದರೆ ಬಾಕಿಯಾದುದನ್ನು ಬೇರೆಯವರಿಗೆ ಕೊಡುತ್ತೇವೆಂದು ಹೇಳುತ್ತಾರೆ. ಆದರೆ ಮುನ್ನೂರು ರೂಪಾಯಿಗಳು ಪೂರ್ತಿಯಾಗಿ ಪಾವತಿಯಾಗದಿದ್ದರೆ ಮನೆ ಕಟ್ಟಲು ಸಾಧ್ಯವಿಲ್ಲ. ಹೆಂಚು, ತೀರು, ಇವುಗಳಿಗೆ ಕೆಲವು ಕಡೆ ಸಹಾಯ ಮಾಡುತ್ತಾರೆ. ಕೆಲವು ಕಡೆ ಮನೆಯ ಕಟ್ಟಲು ಕಟಕಿ, ಬಾಗಿಲು ಕೊಡುತ್ತಾರೆ. ಪೂರ್ಣವಾಗಿ ದೊರೆಯಬೇಕಾದ ಸಹಾಯ ದೊರೆಯದಿದ್ದರೆ ಮನೆ ಪೂರ್ಣವಾಗುವುದಿಲ್ಲ. ಒಟ್ಟಿಗೆ ಮುನ್ನೂರು ರೂಪಾಯಿಗಳನ್ನು ಪಾವತಿ ಮಾಡದೆ ಕಂತುಗಳ ಪ್ರಕಾರ ಮೊದಲು ನೂರು ಆಮೇಲೆ ಎಪ್ಪತ್ತೈದು ಹೀಗೆಲ್ಲಾ ಕೊಡುತ್ತಾರೆ. ಮನೆಯ ಕೆಲಸ ಆದ ಹಾಗೆಲ್ಲಾ ಕೊಡುತ್ತಾ ಬರುತ್ತೇವೆಂದು ಹೇಳುತ್ತಾರೆ. ಇದರಿಂದ ಸರ್ಕಾರ ಸಹಾಯ ನೀಡಿದರೂ ಹರಿಜನರಿಗೂ ಸರಿಯಾದ ಸಹಾಯವಾಗುತ್ತಿಲ್ಲ. ಅವರು ಸಾಲ ಮಾಡಬೇಕಾದ ಪರಿಸ್ಥಿತಿ ಬರುವೆ. ಹಳೆಯ ಮನೆಗಳನ್ನು ಬಿಟ್ಟುಬಿಟ್ಟರು. ಹೊಸ ಮನೆ ಕಟ್ಟಲು ಅನುಕೂಲ ಸಾಕಾದಷ್ಟು ದೊರೆಯುತ್ತಿಲ್ಲ. ಕಟ್ಟಿರುವ ಮನೆಗಳೂ ಕೂಡ ಎಷ್ಟೋ ಕಡೆ ಬಿದ್ದುಹೋಗಿವೆ. ಒಂದು ಸಾಲನಲ್ಲಿ ಸ್ವಲ್ಪ ಹಣ ಕೊಟ್ಟಿರುತ್ತಾರೆ. ಆ ಸಾಲನಲ್ಲಿ ಪುನಃ ಕೊಡಲು ಹಣ ಮುಗಿದುಹೋಯಿತೆಂದು ಹೇಳುತ್ತಾರೆ. ಮುಂದಿನ ಸಾಲನಲ್ಲಿಯಾದರೂ ಕೊಡಿ ಎಂದು ಕೇಳಿದರೆ ಹಾಗೆ ಕೊಡಲು ಸಾಧ್ಯವಿಲ್ಲವೆಂದು ಹೇಳುತ್ತಾರೆ. ತಾಲ್ಲೂಕು ಕಛೇರಿಗಳಿಗೆ ಹಣ

ಪಡೆಯಲು ಬಹಳವಾಗಿ ಅರಿಯಬೇಕಾಗಿದೆ. ರೆವಿನ್ಯೂ ಇನ್‌ಸ್ಪೆಕ್ಟರು ಜಾಗ್ರತೆ ಮಹಜರು ಮಾಡುವುದಿಲ್ಲ. ಎಸ್ಪಿಮೇಟಿಲ್ಲ, ಲೇಔಟ್ ಇಲ್ಲ, ಡೈರೆಕ್ಷನ್ ಇಲ್ಲ, ಪ್ಲಾನ್ ಇಲ್ಲ, ಹಣ ಸಕಾಲದಲ್ಲಿ ದೊರೆಯುವುದಿಲ್ಲ. ಇದರಿಂದ ತಕ್ಕ ಅನುಕೂಲ ದೊರೆಯುತ್ತಿಲ್ಲ. ಜುಲೈನಲ್ಲಿ ಹಣ ಕೊಟ್ಟರೆ ಡಿಸೆಂಬರ್‌ವರೆಗೆ ಮಳೆಗಾಲ ಆದ್ದರಿಂದ ಗೋಡೆಗಳು ಬಿದ್ದುಹೋಗುತ್ತವೆ. ಮಾರ್ಚ್ ಕೊನೆಯಲ್ಲಿ ಹಣ ಕೊಟ್ಟರೆ ಕೆಲಸಮಾಡಿ ಮುಂದಿನ ಕಂತನ್ನು ವರ್ಷದ ಅಜ್ಜೆರಿನೊಳಗಾಗಿ ಪಡೆಯಲು ಸಾಧ್ಯವಾಗದೆ ಒದಗಿಸಿರುವ ಹಣ ಉಳಿತಾಯವಾಗುತ್ತದೆ. ಮನೆ ಕಟ್ಟಲು ಮೊದಲು ಜಾಗ ಕೊಂಡುಕೊಳ್ಳಬೇಕು. ಆ ಜಾಗದ ಮಾಲೀಕರಿಗೆ ಹಣ ಕೊಡಬೇಕಾದರೆ ಹಣ ವಿರುವುದಿಲ್ಲ. ಇದಕ್ಕಾಗಿ ಸರ್ಕಾರದವರು ಮುಂಚೆ ಸ್ವಲ್ಪ ಹಣವನ್ನು ಮಾಸಲಾಗಿಡಬೇಕು. ಕೆಲವು ತಾಲ್ಲೂಕುಗಳಲ್ಲಿ ಮನೆಯ ಜಾಗವನ್ನು ಕೊಂಡು ಕೊಳ್ಳುವುದಕ್ಕಾಗಿ ಪ್ರತ್ಯೇಕವಾಗಿ ಹಣ ಮಾಸಲಾಗಿರುತ್ತದೆ, ಇನ್ನು ಕೆಲವು ಕಡೆ ಇರುವುದಿಲ್ಲ. ಬೇಗ ರಿಕಾರ್ಡ್ ಆಗುವುದಿಲ್ಲ. ಹದಿನೇಳನೆಯ ಸೆಕ್ಷನ್ ಪ್ರಕಾರ ಮನೆ ಕಟ್ಟಲು ಬೇಗ ಜಾಗ ಕೊಡಬೇಕು. ಸಂಬಂಧಪಟ್ಟ ರಿಕಾರ್ಡ್ ಸಬ್‌ಡಿವಿಜ್ ಆಫೀಸರಿಗೆ ಹೋಗಬೇಕು ಎಂದಿದ್ದರೂ ಅಲ್ಲಿಗೆ ಜಾಗ್ರತೆ ರಿಕಾರ್ಡ್ ಬರುವುದಿಲ್ಲ. ಆದ್ದರಿಂದ ಜಾಗವನ್ನೊದಗಿಸುವ ವಿಷಯದಲ್ಲಿ ನಿಧಾನವಾಗದಂತೆ ತಕ್ಕ ಕ್ರಮ ಕೈಕೊಳ್ಳಬೇಕೆಂದು ಪ್ರಾರ್ಥನೆ ಮಾಡುತ್ತೇನೆ. ಸಕಾಲದಲ್ಲಿ ಗ್ರಾಂಟನ್ನು ಪೂರ್ಣವಾಗಿ ಕೊಟ್ಟು ಅದು ಉಳಿತಾಯ ಆಗದಂತೆ ನೋಡಿಕೊಳ್ಳಬೇಕಾದುದು ಅವಶ್ಯಕ.

ವಿದ್ಯಾರ್ಥಿವೇತನಕ್ಕಾಗಿ ನಿಮ್ನ ವರ್ಗದವರಿಗೆ ಓದೀ ರಾಯನ ಕಾಲದಲ್ಲಿ ಕೊಡುತ್ತಿದ್ದ ಪೊಬಲಗನ್ನೇ ಕೊಡುತ್ತಿದ್ದಾರೆ. ಈಗಿನ ಕಾಲಕ್ಕೆತಕ್ಕಂತೆ ವಿದ್ಯಾರ್ಥಿಗಳು ಹೆಚ್ಚಿದ ಹಾಗೆಲ್ಲಾ ಒದಗಿಸುವ ಹಣವೂ ಕೂಡ ಹೆಚ್ಚಬೇಕು. 1918 ನೆಯ ಇಸವಿಯಲ್ಲಿ ಏನು ಅನುಕೂಲ ಕಲ್ಪಿಸಿ ಕೊಟ್ಟಿದ್ದರೋ ಬಹಳ ದಿವಸವಾದರೂ ಅದನ್ನೇ ಮುಂದುವರಿಸಿಕೊಂಡು ಬರುತ್ತಿದ್ದಾರೆ. ನಿಮ್ನ ವರ್ಗದವರ ಆರ್ಥಿಕ, ಸಾಮಾಜಿಕ, ನೈತಿಕ ಪರಿಸ್ಥಿತಿ ಉತ್ತಮಗೊಂಡು ಅವರು ವಿದ್ಯಾವಂತರಾಗಲು ತಕ್ಕ ಅನುಕೂಲ ಕಲ್ಪಿಸಬೇಕಾದದ್ದು ಅಗತ್ಯ. ಶ್ರೀಮಾನ್ ಸಿ. ಆರ್. ರೆಡ್ಡಿಯವರು ಇದ್ದಾಗ ಸ್ಕಾಲರ್‌ಷಿಪ್‌ನನ್ನು ಮಾಫಿಮಾಡಿಸಿ ಬಟ್ಟೆಬರೆ ಪುಸ್ತಕಗಳು ವಗೈರೆ ಉಚಿತವಾಗಿ ಒದಗಿಸುವಂತೆ ಏರ್ಪಾಡು ಮಾಡಿದರು. ಅವರ ಅನುಕೂಲತೆಯಿಂದ ಈ ದಿವಸ ಕೆಲವರು ಮುಂದುವರಿದಿದ್ದಾರೆ ಹೊರತು ಅಲ್ಲಿಂದೀಚೆಗೆ ಸಾಕಷ್ಟು ಪ್ರೋತ್ಸಾಹ ದೊರೆತಿಲ್ಲ. ಕಾಂಗ್ರೆಸ್ ಸರ್ಕಾರ ಬಂದ ಮೇಲೆ ಇನ್ನೂ ಹೆಚ್ಚಿನ ಅವಕಾಶ ದೊರೆಯುತ್ತದೆಂದೂ ಹರಿಜನರ ಕಷ್ಟವೆಲ್ಲಾ ನಿವಾರಣೆಯಾಗುತ್ತದೆಂದೂ ನಂಬಿದ್ದೆವು. ಆದರೆ ಏನು ಹೆಚ್ಚಿನ ಅನುಕೂಲವೂ ಈಚೆಗೆ ದೊರೆಯುತ್ತಿಲ್ಲವೆಂದು ಮುಚ್ಚು ಮರೆಯಿಲ್ಲದೆ ತಿಳಿಸಬೇಕಾಗಿದೆ. ಕೊಟ್ಟಿರುವ ಕೇವಲ 19 ಲಕ್ಷ ರೂಪಾಯಿಗಳಲ್ಲೂ ಕೂಡ ಉಳಿತಾಯ ಮಾಡಿದರೆ ನಾವು ಉದ್ಧಾರವಾಗುವುದು ತಾನೆ ಹೇಗೆ? ಕೊಡುವುದೇನೋ ಉದಾರವಾಗಿ ಕೊಡುತ್ತೀರಿ. ಆದರೆ ಅದೆಲ್ಲವೂ ಪೂರ್ಣವಾಗಿ ಖರ್ಚಾಗಬೇಕು. ಊಟಕ್ಕಿಟ್ಟು ಕೈತಿಡಿದುಕೊಂಡರೆ ಹೊಟ್ಟೆ ತುಂಬುತ್ತದೆಯೇ? ಎಣ್ಣೆ ಗಾಣಿಗಿತ್ತಿಯನ್ನು ನೆನೆಸಿಕೊಂಡರೆ ತಂಪಾಗುತ್ತದೆಯೇ? ಹೀಗಾಗಿದೆ ನಮ್ಮ ಪರಿಸ್ಥಿತಿ. ರಾಜ್ಯಾಂಗದ ಪ್ರಕಾರ 10 ವರ್ಷದಲ್ಲಿ ಹರಿಜನರಿಗೆ ಫಂಡಮೆಂಟರ್ ರೈಟ್ಸ್ ಎಲ್ಲವೂ ದೊರೆಯಬೇಕಾಗಿದೆ. 15,000 ಹಳ್ಳಿಗಳಲ್ಲಿರುವ ಹರಿಜನರಿಗೆ ಮನೆ ಕಟ್ಟಲು ಈ ರೀತಿ ಆದರೆ ಸಾಧ್ಯವೇ? ಪಂಚವಾರ್ಷಿಕ ಯೋಜನೆಯಲ್ಲಾದರೂ ಒಂದು ಸ್ಕೀಂ ಹಾಕಿ ಜಾಗ್ರತೆ ಮನೆಕಟ್ಟಿ ಕೊಳ್ಳಲು ಅವಕಾಶವಾಗದಿದ್ದರೆ ಪ್ರಯೋಜನವಿಲ್ಲ. ಅಳುವವರಿಗೆ ಕಣ್ಣೊರೆಸುವುದು ಬೇಡ. ಸ್ಪೆಷಲ್ ಆಫೀಸರ್ ನೇಮಕ ಮಾಡಿದ್ದರೂ ಅವರಿಗೆ ಆಫೀಸಿಲ್ಲ, ಜವಾನರಿಲ್ಲ. ಅವರು ಎಲ್ಲಿ ಕೆಲಸ ಮಾಡಬೇಕು? ಜನರು ಎಲ್ಲಿ ಹೋಗಿ ಅವರನ್ನು ಕಂಡು ತಮ್ಮ ಕುಂದು ಕೊರತೆಗಳನ್ನು ಹೇಳಿಕೊಳ್ಳಬೇಕು? ನಿರ್ದಿಷ್ಟವಾಗಿ ಅವರಿಗೊಂದು ಕಛೇರಿ ಬೇಡವೇ? ಅವರಿಗೆ ಸಾಕಾದಷ್ಟು ಅಧಿಕಾರವಿಲ್ಲ. ಸ್ಪೆಷಲ್ ಆಫೀಸರೆಂದು ಹೇಳಿದ ಮೇಲೆ 5 ಎಕರೆ ಜಮೀನು ಕೊಡುವ ಅಧಿಕಾರವನ್ನಾದರೂ ಅವರಿಗೆ ಕೊಡಬೇಡವೇ! 50 ರೂಪಾಯಿ ಗ್ರಾಂಟು ಕೊಡುವ ಅಧಿಕಾರ ಸಹ ಅವರಿಗಿಲ್ಲ. ನೋಡಿ ಸಿಫಾರಸು ಮಾಡಬಹುದು. ಇಂಥ ಸ್ಪೆಷಲ್ ಆಫೀಸರು, ರೆವಿನ್ಯೂ ಇನ್‌ಸ್ಪೆಕ್ಟರು ಇದ್ದರೆ ಏನುತಾನೆ ಪ್ರಯೋಜನವಾದೀತು?

ಗೃಹ ಕೈಗಾರಿಕೆ ವಿಚಾರವೂ ಕೂಡ ಈ ನಿರ್ಣಯದಲ್ಲಿ ಅಡಕವಾಗಿದೆ. ಚರ್ಮ ಹದ ಮಾಡುವುದು, ನೂಲುವುದು, ನೇಯುವುದು, ಕಬ್ಬಿಣದ ಕೆಲಸ, ಮರಗೆಲಸ ಇವುಗಳಲ್ಲೆಲ್ಲಾ ನಮ್ಮವರು ಮುಂದುವರಿದಿದ್ದಾರೆ. ಆದರೆ ಹಣದ ಸೌಕರ್ಯವಿಲ್ಲ. ಹೀಗೆ ಎಷ್ಟೋ ಜನರು ಕೈಯಿಂದಲೇ ನೂಲನ್ನು ತೆಗೆದು, ನೆಯ್ದು, ಬಟ್ಟೆ ಮಾಡಿ ಉಪಯೋಗಿಸುತ್ತಾರೆ. ಕುಲುಮೆಗಳನ್ನಿಟ್ಟುಕೊಂಡು ಕೆಲಸಮಾಡುವುದು, ಚಪ್ಪಲಿಗಳನ್ನು ತಯಾರಿಸುವುದು ಮುಂತಾದ ಕೆಲಸಗಳನ್ನು ಮಾಡುತ್ತಾರೆ. ಕೆಲವು ಕಂಪನಿಗಳಲ್ಲೂ ನಮ್ಮವರೇ ಇದ್ದಾರೆ. ಈ ಕೈಗಾರಿಕೆಗಳಿಗೆ ಪ್ರೋತ್ಸಾಹ ನೀಡಿ ತಕ್ಕ ಹಣ ಸಹಾಯವನ್ನು ಒದಗಿಸಿ ಅನುಕೂಲಪಡಿಸಬೇಕು. ಇಲ್ಲದಿದ್ದರೆ ಅವಕ್ಕೆ ಧಕ್ಕೆ ಬಂದು ತೊಂದರೆ ಆಗುತ್ತದೆ. ಇದನ್ನು ಗಮನಿಸಿ ಸರ್ಕಾರದವರು ಉಪಯುಕ್ತವಾದ ಗೃಹ ಕೈಗಾರಿಕೆಗಳಿಗೆ ಹೆಚ್ಚು ಸಹಾಯ ನೀಡಬೇಕು. ಶಿರಾ ತಾಲ್ಲೂಕಿನಲ್ಲಿ ಚರ್ಮದ ಕೈಗಾರಿಕೆ ಇತ್ತು. ಈಗ ಅದು ನಿಂತು ಹೋಗಿದೆ. ಅದಕ್ಕೆ ಪ್ರೋತ್ಸಾಹ ನೀಡಿ ಆ ಕಸುಬಿನಿಂದ ಜೀವನ ಮಾಡುವ ಹರಿಜನರಿಗೆ ಅನುಕೂಲ ಕಲ್ಪಿಸಬೇಕು. ಚಾಪೆ ಹೆಣೆಯುವುದಕ್ಕೆ ಬೇಕಾದ ಈಚಲು ಗಿಡಗಳು ಅನೇಕ ಕಡೆ ಇವೆ. ಅಲ್ಲಿ ಹರಿಜನರು ಗರಿಗಳನ್ನು ತಂದು ಚಾಪೆ ಹೆಣೆಯಲು ಮಾಫಿಲೈಸೆನ್ಸನ್ನು ಮುಂಜೂರು ಮಾಡಬೇಕೆಂದು ಸಲಹೆ ಮಾಡುತ್ತೇನೆ. ಕೆಲವು ಕಡೆ ಹರಿಜನರಿಗಾಗಿ ಮೀಸಲಾಗಿಟ್ಟಿರುವ ವಿದ್ಯಾರ್ಥಿ ವೇತನಗಳು ಲ್ಯಾಪ್ಸ್ ಆಗಿ ಅದನ್ನು ಇತರರಿಗೆ ಕೊಡುತ್ತಿದ್ದಾರೆ. ಅದಕ್ಕೆ ಅವಕಾಶವಿಲ್ಲದಂತೆ ನೋಡಿಕೊಳ್ಳಬೇಕಾದದ್ದು ಅವಶ್ಯಕ. ಇಷ್ಟು ಹೇಳಿ ಈ ನಿರ್ಣಯಕ್ಕೆ ಸರ್ವರೂ ಬೆಂಬಲ ಕೊಡಬೇಕೆಂದು ಪ್ರಾರ್ಥಿಸಿ ಇದನ್ನು ನಭೆಯ ಮುಂದೆ ಮಂಡಿಸುತ್ತೇನೆ.

Mr. SPEAKER.—Motion moved :

"That this Assembly is of the opinion that 75 lakhs of rupees be set apart in the current year's budget for the Depressed Classes to enable them to construct houses, to purchase house sites and to improve their cottage industries thereby to improve their economic, social, moral condition and also to make provision for scholarships."

(MR. SPEAKER.)

Now, the House will adjourn for lunch and meet at 10-40.

The House adjourned for Lunch at Ten Minutes past Ten of the Clock and reassembled at Forty Minutes past Ten of the Clock.

[MR. SPEAKER in the Chair.]

*ಶ್ರೀ ಬಿ. ರಾಚಯ್ಯ (ಎಳಂದೂರು—ಅನುಸೂಚಿತ ಜಾತಿಗಳು).—ಸ್ವಾಮಿ, ಶ್ರೀಮಾನ್ ಹನುಮಂತಯ್ಯನವರು ತಂದಿರುತಕ್ಕಂಥ ಈ ನಿರ್ಣಯವನ್ನು ಸಮರ್ಥಿಸುತ್ತಾ ಈ ಸಭೆಯ ಗಮನಕ್ಕೆ ಮತ್ತು ಸರ್ಕಾರದ ಗಮನಕ್ಕೆ ನಿಮ್ಮ ತರಗತಿಯವರ ಅಭಿವೃದ್ಧಿಯ ವಿಷಯದಲ್ಲಿ ಎಷ್ಟರಮಟ್ಟಿಗೆ ಕೆಲಸ ಕಾರ್ಯಗಳು ನಡೆದು ಕೊಂಡು ಬರುತ್ತಿವೆ, ಮುಂದೆ ಏನೇನು ಕಾರ್ಯಗಳು ಕೈಗೊಂಡು ಕೆಲಸಮಾಡಿದರೆ ಅದರ ಅಭಿವೃದ್ಧಿ ಹೆಚ್ಚಿನ ರೀತಿಯಲ್ಲಿ ಆಗುತ್ತದೆ ಎಂಬುದನ್ನು ತರಲು ಇಚ್ಛಿಸುತ್ತೇನೆ. ಮೈಸೂರು ಸರ್ಕಾರದವರು ಹಿಂದಿನಿಂದಲೂ ಕೂಡ ಈ ಹಿಂದುಳಿದ ಪಂಗಡದವರ ಅಭಿವೃದ್ಧಿಗಾಗಿ ಶ್ರಮಿಸುತ್ತಾ ಬಂದಿದ್ದಾರೆ. ಆದರೆ ನಮ್ಮ ನಿರೀಕ್ಷಣೆಯಂತೆ ಒಷ್ಟರ ಮಟ್ಟಿಗೆ ಈ ದಾರಿಯಲ್ಲಿ ಮುನ್ನೋಟ ಹೋಗಬೇಕಾಗಿತ್ತೋ ಅಷ್ಟಾಗಿಲ್ಲ ಎಂಬುದನ್ನು ತಾವೆಲ್ಲರೂ ಒಪ್ಪುವವರಾಗಿದ್ದೀರಿ. ಆದರೆ ಈ ಬಾಬಿನಲ್ಲಿ ನಿಮ್ಮ ವರ್ಗದವರಿಗೆ ಸರ್ಕಾರದ ಹಣಕಾಸಿನ ಪರಿಸ್ಥಿತಿ ಉತ್ತಮವಾಗಿಲ್ಲದಿದ್ದರೂ ಕೂಡ ಸಾಕಷ್ಟು ಹಣವನ್ನು ಒದಗಿಸಿಕೊಂಡು ಬರುತ್ತಲೇ ಇದ್ದೇವೆಂದು ಸರ್ಕಾರದವರು ಹೇಳುತ್ತಿದ್ದರು. ನಾವೂ ಕೂಡ ಅದನ್ನು ತಿಳಿದುಕೊಂಡಿದ್ದೆವು. ಆದರೆ ರಾಜ್ಯಾಂಗದ ಸಂವಿಧಾನದಲ್ಲಿ ತಿಳಿಸಿರುವಂತೆ ಅವರ ಸಾಮಾಜಿಕ ಮತ್ತು ಆರ್ಥಿಕ ಮಟ್ಟವನ್ನು ಹೆಚ್ಚಿಸಲು ಸ್ವಲ್ಪ ಸ್ಪೆಷಲ್ ಸೇಫ್‌ಗಾರ್ಡ್ಸ್ ಕೊಡಬೇಕೆಂದು ಕೂಡ ಇದ್ದೇ ಇದೆ. ನಮ್ಮ ಮೈಸೂರು ಸರ್ಕಾರದವರಾದರೂ ಕೂಡ ಆ ನೀತಿಯನ್ನೇ ಅನುಸರಿಸಿಕೊಂಡು ಬರುತ್ತಿದ್ದಾರೆ. ಈಗ ಕೆಲವಾರು ವರ್ಷಗಳಿಂದಲೂ ಪಂಚವಾರ್ಷಿಕ ಯೋಜನೆಯಲ್ಲಿ ಒಂದು ಕೋಟಿ ಪೆಚ್ಚಿದಲ್ಲಿ ನಾನಾ ಅಭಿವೃದ್ಧಿ ಕಾರ್ಯಗಳನ್ನು ಮಾಡಲು ಮನಸ್ಸು ಮಾಡಿದ್ದಾರೆ. ಮನೆಗಳನ್ನು ಕಟ್ಟಿಸಿಕೊಡುವುದು, ನಿವೇಶನಗಳನ್ನು ಉಚಿತವಾಗಿ ಒದಗಿಸುವುದು, ಸಣ್ಣ ಪುಟ್ಟ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸುವುದು, ಎಲ್ಲಾ ಮಕ್ಕಳಿಗೂ ಫೀಸಿಲ್ಲದೆ ವಿದ್ಯಾಭ್ಯಾಸವನ್ನು ಕೊಡುವುದು ಮುಂತಾದುವನ್ನು ಆ ಯೋಜನೆಯಲ್ಲಿ ಅಡಕಮಾಡಿ ಅದರಂತೆ ಒಂದು ನೀತಿಯನ್ನು ಅನುಸರಿಸಿಕೊಂಡು ಬರುತ್ತಿದ್ದಾರೆ. ಕಳೆದಸಾಲಿನಲ್ಲಿ ಮತ್ತು ಅದರ ಹಿಂದಿನ ಸಾಲಿನಲ್ಲಿ ಕೊಟ್ಟಿರುವ ಹಣವನ್ನು ನೋಡಿದರೆ ಪ್ರತಿವರ್ಷವೂ ಸ್ವಲ್ಪ ಗ್ರಾಂಟನ್ನು ಹೆಚ್ಚಿಸುತ್ತಿದ್ದಾರೆಂದು ಕಂಡು ಬರುತ್ತದೆ. ಈಗ ಡಿಪ್ರೆಸ್ಡ್ ಕ್ಲಾಸ್ ಕಮೀಷನ್ ಎಂದು ಪ್ರತ್ಯೇಕವಾದ ಇಲಾಖೆಯನ್ನು ಮಾಡಿದ್ದರೂ ಆ ಇಲಾಖೆಯ ಕೆಲಸ ಕಾರ್ಯಗಳನ್ನು ಡಿಪ್ರೆಸ್ಡ್ ಕ್ಲಾಸ್ ಕಮೀಷನರಾಗಲ ಅಥವಾ ಅವರ ಕೈಕೆಳಗಿರುವ ಸ್ಪೆಷಲ್ ಆಫೀಸರಾಗಲ ಸರಿಯಾಗಿ ನಿರ್ವಹಿಸಲು ಅವರಿಗೆ ಯಾವ ವಿಧವಾದ ಅಧಿಕಾರ ಕೂಡ ಇಲ್ಲವೆಂದು ಹೇಳಬೇಕಾಗಿದೆ. ಒಬ್ಬ ಅಮಲ್ದಾರರಿಗೆ ಗ್ರಾಂಟು ಕೊಡಲು ಎಷ್ಟು ಅಧಿಕಾರವಿದೆಯೋ ಅಷ್ಟು ಅಧಿಕಾರ ಸಹ ಅವರಿಗಿಲ್ಲ. ಲೈಸೆನ್ಸಿಂಗ್ ಆಫೀಸರಿದ್ದ ಹಾಗೆ ಅವರು ಇದ್ದಾರೆಂದು ಹೇಳಬಹುದು.

ನಾವು ಆ ಹುದ್ದೆಯನ್ನು ಕಲ್ಪಿಸಿಕೊಡಿ ಎಂದು ಕೇಳಿದಾಗ, ಅವರೂ ಒಬ್ಬರು ಸ್ಪೆಷಲ್ ಆಫೀಸರಾಗಿರುತ್ತಾರೆಂದು ತಿಳಿದುಕೊಂಡಿದ್ದೆವು. ಅವರಿಗೆ ಡಿಪ್ರೆಸ್ಡ್ ಕ್ಲಾಸಿನವರಿಗೆ ಸಂಬಂಧಪಟ್ಟ ಹಣವನ್ನಾದರೂ ಹಂಚುವ ಅಧಿಕಾರವನ್ನಾದರೂ ಕೊಡುತ್ತಾರೆಂದು ನಂಬಿದ್ದೆವು. ಆದರೆ, ಈಗ ನೋಡಿದರೆ, ಅವರು ದರಖಾಸ್ತು ಕೊಡುವುದಕ್ಕೇ ಆಗಲ, ಅಕ್ಸಿಸಿಷ್ಟ್ ರಿಕಾರ್ಡ್‌ಗಳನ್ನು build up ಮಾಡುವುದಕ್ಕೇ ಆಗಲ ಯಾವ ಅಧಿಕಾರವನ್ನೂ ಹೊಂದಿಲ್ಲ. ಆದ್ದರಿಂದ ಇನ್ನಾದರೂ ಅವರಿಗೆ ಸೂಕ್ತವಾದ ಅಧಿಕಾರಗಳನ್ನು ಕೊಟ್ಟು ಕೆಲಸಕಾರ್ಯಗಳನ್ನು ತ್ವರಿತವಾಗಿ ಮಾಡುವುದಕ್ಕೆ ಏನೇನು ಮಾಡಬೇಕೋ ಅದನ್ನು ಮಾಡಬೇಕೆಂದು ಹೇಳುತ್ತೇನೆ. ಈ ರೀತಿ ಆ ಆಫೀಸರುಗಳಿಗೂ ಅಧಿಕಾರ ಕೊಟ್ಟರೆ ಸರ್ಕಾರದಲ್ಲಿ parallel ಅಧಿಕಾರಿಗಳನ್ನು ಕೊಟ್ಟಂತಾಗುತ್ತದೆ, duplication of work ಆದಂತಾಗುತ್ತದೆ ಎಂದು [illegible] ಅಭಿಪ್ರಾಯಪಡುತ್ತಾರೆ. ಆದರೆ, ಈ ಅಧಿಕಾರಗಳನ್ನಾದರೂ ಕೊಡದೆ ಹೋದರೆ, ಯಾವ ಉದ್ದೇಶದಿಂದ ಈ ಅಧಿಕಾರಿಗಳನ್ನು ನೇಮಿಸಿದ್ದೀರೋ ಆ ಉದ್ದೇಶ ಸಫಲವಾಗುವುದಿಲ್ಲ. ಆದ್ದರಿಂದ ಇವರಿಗೂ ಕೆಲವು ಅಧಿಕಾರಗಳನ್ನು ಕೊಟ್ಟು, ಇವರ ಮೇಲಿನ ಅಧಿಕಾರವನ್ನು ಡಿಪ್ರೆಸ್ಡ್‌ಕ್ಲಾಸ್ ಕಮೀಷನರಿಗೋ, ಅಥವಾ ರೆವಿನ್ಯೂ ಕಮೀಷನರಿಗೋ ಕೊಡುವುದು ಒಳ್ಳೆಯದೆಂದು ನನ್ನ ಸೂಚನೆ.

ನಿಮ್ಮ ತರಗತಿಯವರಿಗೆ ಮನೆಗಳನ್ನು ಕಟ್ಟುವುದಕ್ಕಾಗಿ ಎರಡು ಲಕ್ಷ ಒದಗಿಸಿದ್ದೀರಿ. ಇದಲ್ಲದೆ ಡಿಪ್ರೆಸ್ಡ್‌ಕ್ಲಾಸ್ ಅಮಿಲಯೊರೇಷನ್ ಫಂಡಿನಲ್ಲಿ ನಿವೇಶನವನ್ನು ಕೊಂಡುಕೊಳ್ಳುವುದಕ್ಕೆ 17 ಲಕ್ಷ ರೂಪಾಯಿಗಳನ್ನು ಒದಗಿಸಿದೆ. ಈ ಹಣವನ್ನು ನಿಮ್ಮ ತರಗತಿಯವರ ವಿದ್ಯಾರ್ಥಿಗಳಿಗೆ ಹಾಸ್ಟಲುಗಳನ್ನು ಕಟ್ಟುವುದಕ್ಕಾಗಿ ಉಪಯೋಗಿಸಬಹುದೆಂದು ಪಾಲಸಿ ಕಮಿಟಿಯಲ್ಲಿ ಹೇಳಿದೆವು. ಆ ರೀತಿ ಹೇಳುವುದರಲ್ಲಿ ನಮ್ಮ ಮುಖ್ಯ ಉದ್ದೇಶವಾದರೂ ನಮ್ಮ ವಿದ್ಯಾರ್ಥಿಗಳಿಗೆ ಹೆಚ್ಚಿನ ವಿದ್ಯಾನುಕೂಲತೆಗಳನ್ನು ಒದಗಿಸಿಕೊಡುವುದೇ ಆಗಿದೆ. ಸಾಮಾನ್ಯವಾಗಿ ಯಾವ ಹಾಸ್ಟಲುಗಳನ್ನು ಕಟ್ಟಿಕೊಡಬೇಕಾದರೂ ¼ ಭಾಗವನ್ನು ಆಯಾ ಸಂಸ್ಥೆಗಳವರು ಕೊಡಬೇಕೆಂದಿದೆಯೆಂದು ಹೇಳಿ ವಿದ್ಯಾಭ್ಯಾಸ ಇಲಾಖೆಯವರು ಅಷ್ಟು ಹಣವನ್ನು ನಮ್ಮ ಹಾಸ್ಟಲುಗಳ ಬಗ್ಗೆ ಕೊಡಬೇಕೆಂದು ನಮ್ಮ ಮೇಲೆ ಹೊರಸಿದ ಕಾರಣ, ನಮಗೆ ಶೇಕಡ 25 ರಷ್ಟು ಕೊಡುವುದಕ್ಕಾಗುವುದಿಲ್ಲ, outright grantನ್ನು ಕೊಡಬೇಕೆಂದು ಕೇಳಿದ್ದೆವು. ಸರ್ಕಾರದವರು ಅದನ್ನು ಕೊಡುವುದಕ್ಕಾಗುವುದಿಲ್ಲವೆಂದು ಹೇಳಿದ್ದರ ಮೇಲೆ ಈ ಹಣವನ್ನು ಡಿಪ್ರೆಸ್ಡ್‌ಕ್ಲಾಸ್ ಅಮಿಲಯೋರೇಷನ್ ಫಂಡಿನಿಂದ ತೆಗೆದುಕೊಳ್ಳಬೇಕೆಂದು ನಾವು ಹೇಳಿದ್ದೇವೆ. ಅಂದಮಾತ್ರಕ್ಕೆ ಡಿಪ್ರೆಸ್ಡ್‌ಕ್ಲಾಸ್ ಅಮಿಲಯೊರೇಷನ್ ಫಂಡಿನಿಂದಲೇ ಪೂರಾ ಹಣ ತೆಗೆದುಕೊಳ್ಳದೆ, ಶೇಕಡ 25 ಮಾತ್ರ ಇದರಿಂದ ತೆಗೆದುಕೊಂಡು ಉಳಿದ ಶೇಕಡ 75ನ್ನು ವಿದ್ಯಾಭ್ಯಾಸದ ಫಂಡಿನಿಂದಲೇ ಕೊಡಬೇಕೆಂದು ಹೇಳುತ್ತೇನೆ.

ಎರಡನೆಯದಾಗಿ, ಈಗ ಸರ್ಕಾರದವರು ಕೆಲವು ಬೋರ್ಡಿಂಗ್ ಹೋಂಗಳನ್ನು ತೆರೆದಿದ್ದಾರೆ. ಅದಕ್ಕಾಗಿ ನಾನು ಅವರನ್ನು ಅಭಿನಂದಿಸುತ್ತೇನೆ. ಆದರೆ, 1917 ನೆಯ ಇಸವಿಯಲ್ಲಿ, ನರಸಿಂಹರಾಜಾ ಹಾಸ್ಟಲು,

ಹಾಸನ, ಚಿತ್ರದುರ್ಗ, ಮೈಸೂರುಗಳಲ್ಲಿರುವ ಹಾಸ್ಟಲುಗಳಲ್ಲಿ ಎಷ್ಟು ಸಂಖ್ಯೆಗೆ ಅವಕಾಶ ಮಾಡಿದ್ದರೋ ಈಗಲೂ ಅಷ್ಟೇ ಇದೆ. ಹಾಗೆಯೇ, ಆಗ ಊಟಕ್ಕೆ ಎಷ್ಟು ಕೊಡುತ್ತಿದ್ದರೋ ಈಗಲೂ ಅಷ್ಟೇ ಕೊಡುತ್ತಿದ್ದಾರೆ. ಇನ್ನೊಂದು ವಿಷಯವೇನೆಂದರೆ, ಮೈಸೂರು ಸೆಂಟ್ರಲ್ ಆದಿಕರ್ಣಾಟಕ ಪಾಠಶಾಲೆಯಲ್ಲಿ ಹಿಂದೆ ವೃತ್ತಿಶಿಕ್ಷಣಕ್ಕೂ ಅವಕಾಶ ಮಾಡಿದ್ದಿದ್ದಾದ್ದು ಈಗ ಬರೀ ಪಾಠ ಹೇಳಿಕೊಡುವ ಶಾಲೆಯಾಗಿದೆ. ಈ ಪಾಠಶಾಲೆಯಲ್ಲಿ ತರಹೇತಾದ ಹುಡುಗರಿಗೆ ಮುಂದೆ ತಾವೇ ಸ್ವಂತವಾಗಿ ಹೇಗಾದರೂ ಜೀವನ ಹೊರೆದುಕೊಳ್ಳುವುದಕ್ಕೆ ಅವಕಾಶವಿತ್ತು. ಬೆತ್ತ ನೇಯುವುದು, ಮಣ್ಣು ಕೆಲಸ, ಮರಗೆಲಸ ಮುಂತಾದುವುಗಳನ್ನು ಓದುವಾಗಲೇ ಕಲತುಕೊಳ್ಳುತ್ತಿದರು. ಈಗ ಅದನ್ನು ತೆಗೆದಿರುವುದು ಬಹಳ ತೊಂದರೆಯಾಗಿದೆ. ಇದನ್ನು restore ಮಾಡಬೇಕೆಂದು ಹೇಳುತ್ತೇನೆ.

ವಿದ್ಯಾರ್ಥಿಗಳಿಗೆ ಫ್ರೀ ಬೋರ್ಡಿಂಗ್ ಹೋಂ ಮತ್ತು ಏಡೆಡ್ ಹಾಸ್ಟಲುಗಳ ಅನುಕೂಲತೆಗಳನ್ನು [illegible]ಬೇಕು. ಊಟಕ್ಕೆ ಕೊಡತಕ್ಕ ಗ್ರಾಂಟು 6 ರೂಪಾಯ್ಗೆ ಕೊಡುವುದನ್ನು ಜಾಸ್ತಿ ಮಾಡಬೇಕು.

ಸ್ಕಾಲರ್‌ಷಿಪ್ಪುಗಳನ್ನು ಕೊಡುವುದರಲ್ಲಿ ಹೈಸ್ಕೂಲು ಮತ್ತು ಮಿಡಲ್ ಸ್ಕೂಲುಗಳಿಗೆ ಹಿಂದೆ ಎಷ್ಟು ಕೊಡುತ್ತಿತ್ತೊ ಈಗಲೂ ಅದನ್ನೇ ಕೊಡುತ್ತಿದೆ. ಒಂದೊಂದು ಡಿಸ್ಟ್ರಿಕ್ಟಿಗೂ 2-3 ಸಾವಿರ ಅಪ್ಲಿಕೇಷನ್‌ಗಳು ಬಂದರೆ ಎರಡು ಮೂರು ಅಪ್ಲಿಕೇಷನ್‌ಗಳಿಗೆ ಮಾತ್ರ ಸ್ಕಾಲರ್‌ಷಿಪ್ ಕೊಡುವುದಾದರೆ ಏನು ಸಹಾಯ ಮಾಡಿದಂತಾಯಿತು? ವಿದ್ಯಾ ಇಲಾಖೆಯವರು ವಿಶೇಷ ವಿದ್ಯಾನಿಲಯದಲ್ಲಿರುವ ನಿಮ್ನತರಗತಿಯವರಿಗಾಗಿ ಕೊಡುತ್ತಿರತಕ್ಕ ಹಣ ಪ್ರತಿ ವರ್ಷವೂ ಉಳಿತಾಯವಾಗುತ್ತಿದೆ. ಆ ದುಡ್ಡನ್ನಾದರೂ ಹೈಸ್ಕೂಲು ಮತ್ತು ಮಿಡಲ್ ಸ್ಕೂಲುಗಳಲ್ಲಿರುವ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ವಿದ್ಯಾರ್ಥಿವೇತನ ಕೊಡುವುದಕ್ಕೆ ರೀಅಪ್ರೋಪ್ರಿಯೇಟ್ ಮಾಡಬೇಕೆಂದು ಹೇಳಿ ಕಳೆದ ಎರಡು ಅಧಿವೇಶನದಿಂದಲೂ ಕೇಳುತ್ತಲೇ ಬಂದಿದ್ದೇವೆ. ಸರ್ಕಾರದವರು ಆ ಬಗ್ಗೆ ಯಾವ ಕಾರ್ಯಕ್ರಮವನ್ನೂ ಕೈಕೊಳ್ಳದಿರುವುದು ವಿಷಾದಕರ.

ಕೈಗಾರಿಕೆಯ ವಿಷಯದಲ್ಲಿ, ಶ್ರೀಮಾನ್ ಹನುಮಂತಯ್ಯನವರು ಹೇಳಿದ ಹಾಗೆ, educated unemployedಗಳಿಗೆ ಗ್ರಾಂಟನ್ನು ಕೊಡುವುದಕ್ಕೂ, ಡೈರಿ ಫಾರಂಗಳೇ ಮುಂತಾದ ಕೈಗಾರಿಕೋದ್ಯಮಗಳನ್ನು ಕೈಕೊಳ್ಳುವುದಕ್ಕೂ ಸರ್ಕಾರದವರು ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ. ಈ ಸಂಬಂಧದಲ್ಲಿ ಡಿಪ್ರೆಸ್ಡ್ ಕ್ಲಾಸ್ ಕಮಿಷನರಾದ ಶ್ರೀಮಾನ್ ಎನ್. ಎಸ್. ಹಿರಣ್ಣಯ್ಯನವರು ಒಂದು ಸ್ಕೀಮ್‌ಮಾಡಿ ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದಾರೆ. ಅದರ ಪ್ರಕಾರ ಯಾವ ಯಾವ ಇಲಾಖೆಯಲ್ಲಿ ಸಾರ್ವಜನಿಕ ಆರ್ಥಿಕಾಭಿವೃದ್ಧಿಗಾಗಿ ಖರ್ಚುಮಾಡುವುದಕ್ಕೆ ದುಡ್ಡು ಕೊಟ್ಟಿದ್ದರೊ ಅದರಲ್ಲಿ ಶೇಕಡ ಒಂದು ಭಾಗವನ್ನು ಡಿಪ್ರೆಸ್ಡ್‌ಕ್ಲಾಸ್ ಅಮಿಲಿಯೋರೇಷನ್ ಫಂಡಿಗೆಂದು ಮಾಸಲಾಗಿಡಬೇಕು, ಆ ಹಣವನ್ನು ಡಿಪ್ರೆಸ್ಡ್ ಕ್ಲಾಸ್ ಕಮಿಷನರು operate ಮಾಡುವಂತೆ ಅಧಿಕಾರ ಕೊಡಬೇಕೆಂದು ಹೇಳಿದ್ದಾರೆ. ಆ ರೀತಿ ಮಾಡುವುದು ಸೂಕ್ತ. ಏಕೆಂದರೆ ಈಗ ಈ ಫಂಡಿನಲ್ಲಿರುವ 17 ಲಕ್ಷ ರೂಪಾಯಿಗಳಲ್ಲಿ 21 ಹಾಸ್ಟಲುಗಳಿಗೆ ಕೊಟ್ಟು ಉಳಿಯುವ ಹಣ ಕೇವಲ 8-10 ಲಕ್ಷ ರೂಪಾಯಿಗಳು; ಮನೆ ಕಟ್ಟುವ ಸ್ಕೆಟುಗಳ ಅಕ್ವಿಸಿಷನ್ನಿಗೆ ಬಹಳ ಕಡಿಮೆ ಯಾಗುತ್ತದೆ. ಆದ್ದರಿಂದ, ನಾವು ನಿರೀಕ್ಷಿಸಿರುವಂತೆ ಎಷ್ಟು ಸ್ಕೆಟುಗಳನ್ನು ತೆಗೆದುಕೊಳ್ಳಬೇಕೆಂದಿದ್ದೇವೋ ಎಷ್ಟು ಮನೆಗಳನ್ನು ಕಟ್ಟಬೇಕೆಂದಿದ್ದೇವೋ ಅದು ಮುಗಿಯುವುದಿಲ್ಲ. ಈ ಬಗ್ಗೆ ಒಂದು ನಿರ್ಣಯವನ್ನು ಕೂಡ ನಾವು ಕಳುಹಿಸಿಕೊಟ್ಟಿದ್ದೇವೆ. ಇದುವರೆಗೆ ಎಷ್ಟು ಕೆಲಸ ನಡೆದಿದೆ, ಸರ್ಕಾರದವರು ನಿಮ್ನತರಗತಿಯವರಿಗಾಗಿ ಮಾಡಬೇಕೆಂದಿರುವ ಕೆಲಸಗಳೇನು ಎಂಬುವುಗಳ ಬಗ್ಗೆ ಒಂದು comprehensive ರಿಪೋರ್ಟನ್ನು ತಯಾರುಮಾಡಿ, ಇಷ್ಟು ವರ್ಷದೊಳಗಾಗಿ ಅವರನ್ನು ಅಭಿವೃದ್ಧಿಗೆ ತರಬೇಕೆಂದು ಹೇಳಿ, ಅವರ ಅಭಿವೃದ್ಧಿಗೆ ಇಷ್ಟಿಷ್ಟು ಹಣ ಇಡಬೇಕೆಂದು ಹೇಳಿ, ಒಂದು ಸ್ಕೀಂ ತಯಾರಿಸಬೇಕೆಂದು ಹೇಳಿದ್ದಾರೆ. ಇದೇ ಸಂದರ್ಭದಲ್ಲಿ ಗುಡ್ಡಗಾಡಿನ ಜನರ ಅಭಿವೃದ್ಧಿಗಾಗಿ ಇಂಡಿಯಾ ಸರ್ಕಾರದವರು ಕೊಟ್ಟಿರುವ 35 ಲಕ್ಷ ರೂಪಾಯಿಗಳು ಬೇರೆ ಇವೆ. ಕಳೆದ ಸಾರಿ ಈ ಹಣವನ್ನು ವರ್ಷದ ಕೊನೆಯಲ್ಲಿ ಕೊಟ್ಟು ಮಾರ್ಚ್ 31 ನೆಯ ತಾರೀಖಿನೊಳಗಾಗಿ ಮುಗಿಸಬೇಕೆಂದು ಆರ್ಡರ್ ಹೊರಡಿಸಿದ್ದರು. ಇದರಿಂದಾಗಿ ಯಾವ ಉದ್ದೇಶಕ್ಕಾಗಿ ಆ ಹಣವನ್ನು ಕೊಟ್ಟಿತ್ತೋ ಆ ಉದ್ದೇಶವನ್ನು ನೆರವೇರಿಸುವಂತೆ ಕೆಲಸ ಮಾಡಲಾಗಲಿಲ್ಲ. ಈ ದೃಷ್ಟಿಯಿಂದ ಇಂಡಿಯಾ ಸರ್ಕಾರದವರೇ ಆಗಲಿ ಮೈಸೂರು ಸರ್ಕಾರದವರೇ ಆಗಲಿ ಅವರು ಕೊಡಬೇಕಿರುವ ದುಡ್ಡನ್ನು ಮೇ ಜೂ ತಿಂಗಳಲ್ಲೇ ಬರುವಂತೆ ಮಾಡಬೇಕೆಂದು ಹೇಳುತ್ತೇನೆ.

Mr. SPEAKER.—That point has been raised and urged by the Mover. Therefore let there be no repetition.

ಶ್ರೀ ಬಿ. ರಾಚಯ್ಯ.—ಆಮೇಲೆ ಅಸ್ಪೃಶ್ಯತಾ ನಿವಾರಣೆಗಾಗಿ ಇಂಥಿಂಥ ಪ್ರೊಗ್ರಾಂಗಳನ್ನು ಹಾಕಿಕೊಂಡಿದ್ದೇವೆಂದು ಹೇಳಿ ಒಂದು ಕಾರ್ಯಪಟ್ಟಿಯನ್ನು ಕೊಂಡಿದ್ದಾರೆ. "Issue of pamphlets and journals, observation of Harijan day, construction of houses, construction of wells, aid to cottage industries, aid to voluntary agencies, aid under agricultural farming and dairy, inter-caste dinners, community centres and radio" ಎಂದೆಲ್ಲಾ ಹೇಳಿದ್ದಾರೆ. ಇಷ್ಟು ದುಡ್ಡಿನಲ್ಲಿ ಸಂಸ್ಥಾನಾದ್ಯಂತ ಅಸ್ಪೃಶ್ಯತಾ ನಿವಾರಣೆ ಮಾಡುತ್ತೇವೆಂದು ಕಾರ್ಯಕ್ರಮ ಇಟ್ಟುಕೊಂಡಿದ್ದಾರಲ್ಲಾ, ಈ ಉದ್ದೇಶ ಅವ್ಕಾಗಿ ಸಫಲವಾಗಲಾರದೆಂದು ನಾನು ಭಾವಿಸುತ್ತೇನೆ. ಈ ಬಾಬಿನಲ್ಲಿ ಖರ್ಚಾಗುವ ಹಣ ಬಹುಮಟ್ಟಿಗೆ ಅವರ ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸುವುದಕ್ಕಾಗಿ ಉಪಯೋಗಿಸಲ್ಪಡಬೇಕೆಂದು ಹೇಳುತ್ತೇನೆ. Observation of Harijan day, Pamphlets ಗಳನ್ನು ಹಂಚುವುದು. ಇಂಥವುಗಳಿಗೆ ಖರ್ಚುಮಾಡುವುದರಿಂದ ಏನೂ ಪ್ರಯೋಜನವಿಲ್ಲ. ಅಂಥವುಗಳನ್ನು ಬೇಕಾದರೆ ಸರ್ಕಾರದವರು ಏರ್ಪಡಿಸಲಿ, ಏಕೆಂದರೆ, ಈಗ ತಾವು ಯಾವ ಹಳ್ಳಿಯನ್ನು ನೋಡಲು ಆದಿಕರ್ಣಾಟಕರ ಕೇರಿಗಳೇ ಕೊಳಕಾಗಿರುವುದು. ಅವರು ಕೊಳಕಾಗಿರುವುದರಿಂದಲೇ ಅವರನ್ನು ದೂರ ಮಾಡುತ್ತಿದ್ದೇವೆಂದು ಶ್ರೀಮಾನ್ ನರಸಿಂಹರೆಡ್ಡಿಯವರೂ ಕೂಡ ಹೇಳಿದರು. ಆದಿಕರ್ಣಾಟಕರನ್ನು ಈ ಪರಿಸ್ಥಿತಿಗೆ ಬರುವಂತೆ ಮಾಡಲು ಸರ್ಕಾರದವರು ಕಾರಣರೋ ಸಾರ್ವಜನಿಕರು ಕಾರಣರೋ ನೀವೇ ಹೇಳಬಹುದು. ಯಾವ

(ಶ್ರೀ ಬಿ. ರಾಚಯ್ಯ.)

ವಿಲೇಜ್ ಪಂಚಾಯತಿಯಲ್ಲೇ ಆಗಲಿ, ಡ್ರೈನೇಜ್ ಮೊದಲುಗೊಂಡು ಯಾವ improvement ಕೆಲಸವನ್ನು ಮಾಡಿಸಬೇಕಾದರೂ ಕೊಳಕಾಗಿರುವ ಆ ಭಾಗಕ್ಕೆ ಮೊದಲು ಮಾಡಬೇಕೆಂದು ಮಾಡಿಲ್ಲ. ಆದ್ದರಿಂದ ಈಗ ಮೊದಲು ಮುಖ್ಯವಾಗಿ ಎಲ್ಲೆಲ್ಲಿ village extensionಗಳು ಮಾಡಿಕೊಡಬೇಕು, ಎಲ್ಲೆಲ್ಲಿ ಡ್ರೈನೇಜ್ ಮಾಡಿಕೊಡಬೇಕು, ಎಲ್ಲೆಲ್ಲಿ ಹರಿಜನರಿಗೆ ಮನೆಕಟ್ಟಿ ಕೊಡಬೇಕೆಂಬುದನ್ನು ನೋಡಿ ಸರಿಯಾದ ವ್ಯವಸ್ಥೆಯನ್ನು ಮಾಡಿಕೊಡಬೇಕಾಗಿದೆ. ಈಗ ಸಾಮಾನ್ಯವಾಗಿ ಗ್ರಾಮಪಂಚಾಯತಿಗಳಿಗೆ ಯಾವ ಹಣವನ್ನು ಕೊಡಲಿ ಅದನ್ನು ಸವರ್ಣ ಹಿಂದುಗಳ ಕೇರಿಗಳ ಉಪಯೋಗಕ್ಕೇ ಮಾಡಿಕೊಳ್ಳುತ್ತಿರುತ್ತಾರೆ. ಹರಿಜನ ಕೇರಿಗಳಿಗೆ ಎಲ್ಲಿಯೂ ವ್ಯವಸ್ಥಿತವಾದ ಚರಂಡಿಗಳನ್ನು ಮಾಡಿರುವುದು ಅಪರೂಪ. ಆದ್ದರಿಂದ ಆ ಜನ ಶುದ್ಧವಾಗಿರುವಂತೆ ಮಾಡಬೇಕಾದರೆ, ಅವರನ್ನು ಸವರ್ಣಗಳ ಮಟ್ಟಕ್ಕೆ ತರಬೇಕಾದರೆ, ಅವರಿಗೂ ತಕ್ಕ ಸನ್ನಿವೇಶ ಕಲ್ಪಿಸಿಕೊಡಬೇಕು. ಊರಿನ ಗ್ರಾಮಪಂಚಾಯತಿಯವರು, ಶ್ಯಾನುಭೋಗ ಪಟೇಲರುಗಳು ಅಸ್ಪೃಶ್ಯತಾ ನಿವಾರಣೆಗೆ ಏನೇನು ಅನುಕೂಲಮಾಡಿದೆ ಯೆಂಬುದನ್ನು ಪ್ರಚಾರ ಮಾಡುವಂತೆ ಮಾಡಬೇಕು. ಸಂಸ್ಕೃತಿ ಪ್ರಚಾರದವರೂ ಕೂಡ ಇದನ್ನು ಮಾಡುವುದು ಅಗತ್ಯ. ಸಾಮಾನ್ಯವಾಗಿ ಅಸ್ಪೃಶ್ಯತಾ ನಿವಾರಣೆಗೆ ಏನೇನು ಮಾಡಬೇಕಾಗಿದೆಯೋ ಅದನ್ನು ಅಡ್ವೈಲಜ್ಯೆಸಿ ಕೌನ್ಸಿಲ್‌ನವರಿಗೂ ಮತ್ತು ಸಂಸ್ಕೃತಿ ಪ್ರಚಾರದವರಿಗೂ ವಹಿಸಿ ಅವರು ಹೆಚ್ಚಿನ ಶ್ರದ್ಧೆವಹಿಸಿ ಕೆಲಸಮಾಡಬೇಕೆಂದು ಹೇಳುತ್ತೇನೆ. ಕೊನೆಯದಾಗಿ ಸ್ಕಾಲರ್‌ಷಿಪ್ ಗ್ರಾಂಟನ್ನು, ಈಗ ಬಜೆಟ್ ಪಾಸಾಗಿದ್ದರೂ, ಹೇಗಾದರೂ ಮಾಡಿ ಸ್ವಲ್ಪ ಹೆಚ್ಚು ಮಾಡಿಕೊಟ್ಟರೆ ನಾನು ಇಷ್ಟು ಹೇಳಿದ್ದಕ್ಕೂ ಸಾರ್ಥಕವಾದಂತಾಗುತ್ತದೆಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

*ಶ್ರೀ ಎಂ. ಚಿಕ್ಕಲಿಂಗಯ್ಯ (ಮಳವಳ್ಳಿ—ಅನುಸೂಚಿತ ಜಾತಿಗಳು).—ಅಧ್ಯಕ್ಷರೇ, ಶ್ರೀಮಾನ್ ಹನುಮಂತಯ್ಯನವರು ತಂದಿರತಕ್ಕ ಈ ನಿರ್ಣಯವನ್ನು ನಾನು ಸಂಪೂರ್ಣವಾಗಿ ಅನುಮೋದಿಸುತ್ತಾ, ಸರ್ಕಾರದವರ ಗಮನಕ್ಕೆ ಕೆಲವು ಅಂಶಗಳನ್ನು ಮಾತ್ರ ತರಬಯಸುತ್ತೇನೆ. ಮಾನ್ಯಸ್ನೇಹಿತರು ತಮ್ಮ ನಿರ್ಣಯದಲ್ಲಿ ಎರಡು ಮೂರು ಅಂಶಗಳನ್ನು club ಮಾಡಿದ್ದಾರೆ. 75 ಲಕ್ಷ ರೂಪಾಯಿಗಳನ್ನು ಈ ವರ್ಷದ ಬಜೆಟ್ಟಿನಲ್ಲಿ ತೆಗೆದಿಡಬೇಕೆಂದು ಅವರು ಸೂಚಿಸಿದ್ದಾರೆ. ಆದರೆ ಶ್ರೀಮಾನ್ ರಾಚಯ್ಯನವರು ಹೇಳಿದಹಾಗೆ, ಈಗತಾನೆ ಬಜೆಟ್ಟು ತೀರ್ಮಾನವಾಗಿ 35 ಲಕ್ಷ ರೂಪಾಯಿಗಳನ್ನು ತೆಗೆದಿಡಬೇಕೆಂದು ಅದರಲ್ಲಿ ತೀರ್ಮಾನ ಮಾಡಿದ್ದಾರೆ. ಆದ್ದರಿಂದ ನಾನು 75 ಲಕ್ಷ ರೂಪಾಯಿಗಳನ್ನು ತೆಗೆದಿಡುವ ವಿಷಯಕ್ಕೆ ಹೋಗುವುದಿಲ್ಲ. ಆದರೂ ಈರೀತಿ 75 ಲಕ್ಷ ರೂಪಾಯಿಗಳನ್ನು ಕೊಟ್ಟದ್ದಲ್ಲಿ ಹರಿಜನರ ಸ್ಥಿತಿಗತಿಗಳು ಬಹಳಮಟ್ಟಿಗೆ ಉತ್ತಮವಾಗುತ್ತಿತ್ತೆಂದು ಮಾತ್ರಹೇಳಿ ಅಲ್ಲಿಗೆ ಬಿಡುತ್ತೇನೆ.

ಮುಖ್ಯವಾಗಿ ಸರ್ಕಾರದವರು 75 ಲಕ್ಷ ರೂಪಾಯಿಗಳಲ್ಲ, 75 ಕೋಟಿ ರೂಪಾಯಿಗಳನ್ನೇ ಕೊಡಲಿ, ಒಂದು ಸರಿಯಾದ ಯೋಜನೆಯನ್ನು ತಯಾರುಮಾಡಿ planned basis ಮೇರೆ, 5 ವರ್ಷದ್ದೋ ಅಥವಾ 10 ವರ್ಷದ್ದೋ ಒಂದು plan ಇಟ್ಟುಕೊಂಡು ನಿರ್ದಿಷ್ಟವಾದ ಕಾರ್ಯನೀತಿಯೊಂದನ್ನು ಅನುಸರಿಸಿದ ಹೊರತು ಏನೂ ಪ್ರಯೋಜನವಾಗುವುದಿಲ್ಲ. ಈಗ ನೀವು ಮೊದಲನೆಯ ಪಂಚವಾರ್ಷಿಕ ಯೋಜನೆಯೆಂದು ಮಾಡಿರುವುದರಲ್ಲಿ ಹರಿಜನರ ಸಮಸ್ಯೆಯನ್ನು ಅಷ್ಟಾಗಿ ಎದುರಿಸಲಿಲ್ಲ. ನಾವೂ ಪದೇಪದೇ ಹೇಳುತ್ತಿದ್ದೇವೆ, ಸರ್ಕಾರದವರಿಗೂ ಗೊತ್ತಿದೆ, ಹರಿಜನ ಸಮಸ್ಯೆಯೆಂಬುದು ಹರಿಜನರಿಗೆ ಮಾತ್ರ ಸಂಬಂಧಪಟ್ಟಿಲ್ಲ. ಇಲ್ಲಿರುವ ಪ್ರತಿಯೊಬ್ಬ ಸದಸ್ಯರೂ ಇದನ್ನು ಗಮನಿಸಬೇಕಾಗಿದೆ. ಪದೇಪದೇ ಬರುವ ಈ ಸಮಸ್ಯೆಯನ್ನು ಯಾವರೀತಿ ನಿರ್ಮೂಲಮಾಡಬೇಕೆಂಬುದನ್ನು ಒತ್ತಾಯಮಾಡಬೇಕೆಂಬುದೇ ನನ್ನ ಉದ್ದೇಶ. ಕೈಗಾರಿಕಾ ಭಾಗದಲ್ಲೂ, ವಿದ್ಯಾಭ್ಯಾಸದಲ್ಲೂ ಮೇಲಾಗಿ ರಾಜಕೀಯದಲ್ಲಿಯೂ ಅಧೋಗತಿಯಲ್ಲಿರುವ ಮತ್ತು ಸಂಖ್ಯೆಯಲ್ಲಿ 15 ಭಾಗದಷ್ಟಿರುವ ಈ ಜನಾಂಗವನ್ನು ಉತ್ತಮಪಡಿಸುವುದೂ ಕೂಡ ದೇಶದ ಅಭಿವೃದ್ಧಿಯ ದೃಷ್ಟಿಯಿಂದ ಬಹಳ ಮುಖ್ಯವಾದದ್ದು. ಅದಕ್ಕೇ ಇದನ್ನೂ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಬೇಕೆಂದು ಪದೇಪದೇ ಹೇಳುತ್ತಿದ್ದೇವೆ. ರಿಪೋರ್ಟಿನಲ್ಲಿ ನೋಡಿದರೆ ಪಂಚವಾರ್ಷಿಕ ಯೋಜನೆಯಲ್ಲಿ ಒಂದು ಕೋಟಿ ರೂಪಾಯಿಗಳನ್ನು ಇದಕ್ಕಾಗಿ ತೆಗೆದಿಟ್ಟಿದ್ದೇವೆಂದು ಹೇಳಿದ್ದಾರೆ. ಅದು ಖಂಡಿತ ಸರಿಯಲ್ಲ. ಖಂಡಿತವಾಗಿ ಒಂದು ಕೋಟಿ ರೂಪಾಯಿಗಳನ್ನು ತೆಗೆದಿಟ್ಟಿಲ್ಲ. ಇಂಡಿಯಾ ಸರ್ಕಾರದವರೂ ಕೂಡ ಮಾಡಿಲ್ಲ. ಅವರು ಮಾಡಿರುವುದಾದರೂ ಏನು ? ಎಲ್. ಎಸ್. ಶ್ರೀಕಾಂತ್ ಎಂಬ ಮಹನೀಯರನ್ನು ನೇಮಿಸಿ, ಅವರು ಇಂಡಿಯಾ ದೇಶವನ್ನೆಲ್ಲಾ ಸುತ್ತಿ ಒಂದು ಪುಸ್ತಕವನ್ನು ಪ್ರಿಂಟು ಮಾಡಿಸಿದ್ದಾರೆ, ಅಷ್ಟೆ. ಏತಕ್ಕೆಂದರೆ ಈ ಹರಿಜನರ ವಿಷಯ ಆ ಕಾಂಗ್ರೆಸ್ ಪಾರ್ಟಿಯಲ್ಲಿಯೂ ಕೂಡ ವಿಶೇಷ ಚರ್ಚೆಯಾಗಿದೆ. ಆದರೆ ಆ ಕೇಂದ್ರ ಸರ್ಕಾರದವರು ಈ ವಿಚಾರದಲ್ಲಿ ಸಂಸ್ಥಾನ ಸರ್ಕಾರಗಳು ಇಂಥ ರೀತಿಯಲ್ಲೇ ಇಂಥ ಮಾರ್ಗಗಳಲ್ಲೇ ಇದನ್ನು ಮುಂದು ವರಿಸಿಕೊಂಡು ಹೋಗಬೇಕೆಂಬುದನ್ನು ಅವರು ನಿರ್ಧರ ಮಾಡಿಲ್ಲ.

11 A.M.

ಇನ್ನು ಎರಡನೆಯದಾಗಿ ಈ ಹರಿಜನೋದ್ಧಾರದ ಬಗ್ಗೆ ನಾನು ಹಿಂದಿನಿಂದಲೂ ಅನೇಕಸಾರಿ ಅನೇಕ ಸಂದರ್ಭದಲ್ಲಿ ಈ ವಿಚಾರಗಳನ್ನೆಲ್ಲಾ ಒತ್ತಿಒತ್ತಿ ಹೇಳಿದ್ದೇನೆ. ಕೇಂದ್ರ ಸರ್ಕಾರದವರು ಈ ಅಸ್ಪೃಶ್ಯತಾ ನಿವಾರಣೆಗಾಗಿ ನಮ್ಮ ಸಂಸ್ಥಾನಕ್ಕೆ 5 ಲಕ್ಷ ಚಿಲ್ಲರೆ ರೂಪಾಯಿಗಳನ್ನು ಒದಗಿಸಲು ಆಶ್ವಾಸನ ನೀಡಿದ್ದಾರೆಂದು ಕೇಳುತ್ತೇನೆ. ಅದಕ್ಕೆ ನಮ್ಮ ಸರ್ಕಾರ ಸಹ ಮತ್ತಷ್ಟು ಪೊಬಲಗನ್ನು ಹಾಕಿ ಅದನ್ನು ಕೈಗೊಳ್ಳಬೇಕಾಗಿರುತ್ತೆಂದು ಅವರು ತಿಳಿಸಿದ್ದಾರೆಂದು ನಾನು ಕೇಳುತ್ತೇನೆ. ಮೊನ್ನೆತಾನೆ ನಡೆದ ನಮ್ಮ ಹರಿಜನ ಕಾರ್ಖಾರ್ಕೆಸಿನಲ್ಲಿ ಆ ದಿವಸ ಈ ಹರಿಜನಾಭಿವೃದ್ಧಿಗೆ ಸಂಬಂಧಪಟ್ಟ ಗೃಹನಿರ್ಮಾಣ, ಬಾವಿ, ಕೈಗಾರಿಕಾ ಸಹಾಯಗಳ ಬಗ್ಗೆ ಕೆಲವು ನಿರ್ಣಯಗಳನ್ನು ಮಾತ್ರ ಪಾಸ್‌ಮಾಡಲಾಯಿತು. ಕಾಲಾವಕಾಶವಿಲ್ಲದೆ ಇನ್ನೂ ಎಷ್ಟೋ ವಿಚಾರಗಳನ್ನು ಆ ದಿವಸ ಅಲ್ಲಿ ಚರ್ಚೆಗೆ ತೆಗೆದುಕೊಳ್ಳಲು ಸಾಧ್ಯವಾಗಲಿಲ್ಲ. ಈಗ ನಮ್ಮ ಸರ್ಕಾರದವರು ಈ ಹರಿಜನಾಭಿವೃದ್ಧಿಗಾಗಿ ಅನೇಕ ಕಾರ್ಯಗಳನ್ನು ನಡೆಸುತ್ತಿದ್ದಾರೆ. ಆದರೆ ಅವುಗಳನ್ನು ಕಾರ್ಯಾಚರಣೆಗೆ ತರುವ ಸಂಬಂಧವಾಗಿ ಯಾವ ಒಂದು ಮಾಡಿಫಿಕೇಷನ್ ಅನ್ನೂ ಕೂಡ ಇದುವರೆಗೂ ಮಾಡಿರುವುದಿಲ್ಲ. ಈ ಹರಿಜನಾಭಿವೃದ್ಧಿಕಾರ್ಯವನ್ನು ಇಂಥಿಂಥ ಒಂದು ನಿರ್ದಿಷ್ಟವಾದ ರೀತಿಯಲ್ಲಿ, ನಿರ್ದಿಷ್ಟವಾದ ಮಾರ್ಗದಲ್ಲೇ, ಇಂತಿಷ್ಟು ಕಾಲದಲ್ಲೇ ಇದು ಪರಿಪೂರ್ಣವಾಗತಕ್ಕಂಥ

ರೀತಿಯಲ್ಲಿ ನಡೆಸಬೇಕೆಂದು ನಿರ್ದಿಷ್ಟವಾದ ಯಾವ ಸಲಹೆಗಳನ್ನೂ ಸರ್ಕಾರದವರು ಸೂಚಿಸಿಲ್ಲ.

Mr. SPEAKER.—To set apart Rs. 75 lakhs, as the money set apart by the Government at present is not sufficient.

ಶ್ರೀ ಎಂ. ಚಿಕ್ಕಲಿಂಗಯ್ಯ.—ಸ್ವಾಮಿ, ಆದರೆ ಈ ನಿರ್ಣಯದಲ್ಲಿ ಅಡಕವಾಗಿರುವಂಥ ಅಭಿಪ್ರಾಯ ಕೇವಲ ಈ ಮೊಬಲಗನ್ನು ಜಾಸ್ತಿ ಮಾಡಬೇಕೆಂಬುದೇ ಅಲ್ಲ. ಈಗ ಕೊಟ್ಟಿರತಕ್ಕಂಥ ದುಡ್ಡು ಸಾಲದು, ಇದನ್ನು ಇನ್ನೂ ಸ್ವಲ್ಪ ಜಾಸ್ತಿ ಮಾಡಿಕೊಡಿ ಎಂದೇನೋ ಆ ನಿರ್ಣಯದ ಮಾನ್ಯ ಸೂಚಕರು ಹೇಳಿದ್ದಾರೆ. ಆದರೆ ಈ ಹರಿಜನಾಭಿವೃದ್ಧಿಗೆ ಕೇವಲ ಆ ಹಣವೊಂದೇ ಪ್ರಾಧಾನ್ಯವಲ್ಲ. ಈಗ ಮುಖ್ಯವಾಗಿ ಬೇಕಾಗಿರುವುದು ಇವರ ಅಭಿವೃದ್ಧಿಗೆ ಒಂದು ನಿರ್ದಿಷ್ಟವಾದಂಥ ಸಲಹೆಗಳು ಮತ್ತು ನಿರ್ದಿಷ್ಟವಾದ ಒಂದು ಕಾಲಾವಧಿ. ಆದುದರಿಂದ ಈ ನಿರ್ಣಯದಲ್ಲಿ ಕೇಳಿರತಕ್ಕಂಥ 75 ಲಕ್ಷ ರೂಪಾಯಿಗಳ ವಿಚಾರ ದೊಡ್ಡದಲ್ಲ. ಒಂದು ನಿರ್ದಿಷ್ಟವಾದ ಪಾಲಿಸಿಯನ್ನು ಈ ಹರಿಜನಾಭಿವೃದ್ಧಿಯ ಬಗ್ಗೆ ಹಾಕಬೇಕೆಂದು ಹೇಳುತ್ತೇನೆ.

ಅಧ್ಯಕ್ಷರು.—ಇರಬಹುದು. ಆದರೆ ಈ ನಿರ್ಣಯದಲ್ಲಿ ಅದಕ್ಕೆಲ್ಲಾ ಅವಕಾಶವಿಲ್ಲ. ಈಗ ನೀವು ನಿಮ್ಮ ಮಾತನ್ನು ನಿರ್ಣಯದಲ್ಲಿ ಅಡಕವಾಗಿರತಕ್ಕ ವಿಷಯಕ್ಕೆ ಸಮಂಜಸವಾಗಿರುವಂತೆ ಹೇಳಬೇಕೆ ಹೊರತು ಬಾಕಿ ವಿಚಾರಕ್ಕೆ ಇದರಲ್ಲಿ ಅವಕಾಶವಿಲ್ಲ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಸ್ವಾಮಿ, ತಮ್ಮಲ್ಲಿ ಮೊದಲೇ ಅರಿಕೆ ಮಾಡಿಕೊಂಡಿದ್ದೆ, ನಾನು ಈ ನಿರ್ಣಯದ ಬಗ್ಗೆ ಮಾತನಾಡುವಾಗ ಸ್ವಲ್ಪ ಇದರಲ್ಲಿ ಅಡಕವಾಗಿರತಕ್ಕಂಥ ವಿಷಯಕ್ಕೆ ಹೊರಗಡೆ ಹೋಗಿ ಕೆಲವು ವಿಚಾರಗಳನ್ನು ತಿಳಿಸಬೇಕಾಗಿರುತ್ತದೆ ಎಂದು. ಇಲ್ಲಿಯವರೆಗೂ ನಾನು ಹೇಳುತ್ತಿರುವಂಥ ರೀತಿಯಲ್ಲಿ ಈ ಕೆಲಸ ಕಾರ್ಯಗಳನ್ನು ಒಂದು ನಿರ್ದಿಷ್ಟವಾದ ರೀತಿಯಲ್ಲಿ ಮಾಡಿದ್ದರೆ, ಒಂದು ನಿರ್ದಿಷ್ಟವಾದಂಥ ಯೋಜನೆಯನ್ನು ಹಾಕಿಕೊಂಡು ಕೆಲಸಗಳನ್ನು ಮಾಡಿದ್ದರೆ, ಈ ಕಾರ್ಯಗಳು ಎಷ್ಟೋ ಸುಲಲಿತವಾಗಿ ಇಲ್ಲಿಯವರೆಗೆ ಮುಂದುವರೆಯಬಹುದಾಗಿತ್ತೆಂದು ನನಗೆನ್ನಿಸುತ್ತಿದೆ.

ಈಗ ತಾವು ಈ ಹರಿಜನಾಭಿವೃದ್ಧಿಯ ಬಗ್ಗೆ ಬಾವಿ, ಗೃಹನಿರ್ಮಾಣ, ಹರಿಜನ ದಿನಾಚರಣೆ, ಗೃಹಕೈಗಾರಿಕೆ, ಅಂತರ್ಜಾತಿಯ ಭೋಜನಗಳು ಇತ್ಯಾದಿ ಅನೇಕ ವಿಚಾರಗಳನ್ನು ಹೇಳಿದ್ದೀರಿ. ಆದರೆ ಈ ಹಿಂದೆ ನಾನು ಈ ವಿಚಾರವಾಗಿ ಕೆಲವು ನಿರ್ದಿಷ್ಟವಾದ ಸಲಹೆಗಳನ್ನು ತಿಳಿಸಿದ್ದೆನು. ಅವುಗಳನ್ನು ಆ ದಿವಸ ಮಾನ್ಯ ಮಂತ್ರಿಗಳು ನೋಟ್ ಮಾಡಿಕೊಂಡಿದ್ದರು. ಈ ದಿವಸ ಈ ಕೇಂದ್ರಗಳಲ್ಲಿ ಕೆಲವು ಕಡೆ ಚಾಪೆ, ಮಂದಲಿಗೆ, ಬೂಟ್ಸ್ ಇತ್ಯಾದಿಗಳನ್ನು ತಯಾರಿಸುತ್ತಿರಬಹುದು. ಆದರೆ ಇದು ಪ್ರಾಮುಖ್ಯವಾದ್ದಲ್ಲ. ಇದರಿಂದ ಯಾವ ಅಭಿವೃದ್ಧಿಯೂ ಆಗುವುದಿಲ್ಲ ; ಈ ವ್ಯತ್ತಿಗಳನ್ನೆಲ್ಲಾ ಶಿಕ್ಷಣದ ಜೊತೆಗೆ ಸೇರಿಸಿ ಹುಡುಗರಿಗೆ ಲಭಿಸುವಂತೆ ಮಾಡಬೇಕು. ಈ ಹಿಂದೆ ನಾನು ವಿದ್ಯಾರ್ಥಿಯಾಗಿದ್ದಾಗ ಹಾಗೆ ಮಾಡುತ್ತಿದ್ದರು. ಆ ರೀತಿ ಇದನ್ನು ಚಲಾವಣೆಗೆ ತರಬೇಕೇ ಹೊರತು ಎಲ್ಲೋ ಒಂದೆರಡು ಕಡೆ ನಾಲ್ಕಾರು ಚಾಪೆಗಳನು ಹೆಣೆದುಬಿಡುತ್ತಿದ್ದಾರೆಂದರೆ ಆಗುವುದಿಲ್ಲ. ಹೀಗೆಲ್ಲಾ ಮಾಡಿದರೆ ಈ ಹರಿಜನರ ಆರ್ಥಿಕಾಭಿವೃದ್ಧಿಯಾಗುವುದಿಲ್ಲ. ಹರಿಜನಾಭಿವೃದ್ಧಿಗಾಗಿ ಸಾಮುದಾಯಿಕ ಕೇಂದ್ರಗಳನ್ನು ಮಾಡುವುದಾಗಿ ಒಂದು ಕಾರ್ಯಕ್ರಮವನ್ನು ಕೈಗೊಂಡರು. ಆದರೆ ಅದರಲ್ಲಿ ಈ ಹರಿಜನರ ಅಭಿವೃದ್ಧಿ ಶೇಕಡ 25ರಷ್ಟು ಆಗಿಲ್ಲ. ಇನ್ನು ಈ ಹರಿಜನರಿಗೆ ಜಮೀನ್ ಕೊಡುತಕ್ಕಂಥ ವಿಚಾರ ತೆಗೆದುಕೊಂಡರೆ, ಹೇಳುವುದಕ್ಕೇ ಸಾಧ್ಯವಿಲ್ಲ. ಹರಿಜನರಿಗೆ ಉಚಿತವಾಗಿ ಜಮೀನ್ ಕೊಡುತ್ತೇವೆಂದು ಹೇಳಿ ಯಾವುದೋ ಕೆಲಸಕ್ಕೆ ಬಾರದಂಥ ಜಮೀನನ್ನು ಅಲ್ಲಿ ಎರಡೆಕರೆ ಇಲ್ಲಿ ಎರಡೆಕರೆಗಳಂತೆ ಅಲ್ಲಲ್ಲೇ ಕೊಡುತ್ತಿದ್ದಾರೆ. ಆದರೆ ಇದರಿಂದ ಅವರ ಅಭಿವೃದ್ಧಿ ಆದ ಹಾಗೆ ಆಗಲಿಲ್ಲ. ಇತ್ತೀಚೆಗೆ ವಿದ್ಯಾವಂತ ತರುಣರ ನಿರುದ್ಯೋಗ ಸಮಸ್ಯೆ ಬೇರೆ ದಿನದಿನಕ್ಕೂ ಜಾಸ್ತಿಯಾಗುತ್ತಿದೆ. ಆದುದರಿಂದ ಈ ಸಾಮುದಾಯಿಕ ಕಾಲೊನಿಗಳನ್ನು ಜಾಸ್ತಿಮಾಡಿ ಒಂದೊಂದು ಕಡೆಯಲ್ಲೂ 100ರಿಂದ 250 ಸಂಸಾರಿಗಳಿಗೆ ಅನುಕೂಲವಾಗುವಂತೆ ಏರ್ಪಾಡು ಮಾಡಬೇಕೆಂದು ಹೇಳುತ್ತೇನೆ. ಈ ಬಾಬಿನಲ್ಲಿಯೂ ಜನರಿಗೆ ಸಾಕಷ್ಟು ಪ್ರೋತ್ಸಾಹವನ್ನು ತಾವೀದಿವರೆ ನೀಡಿಲ್ಲ. ಈ ವಿಚಾರಕ್ಕೆ ಸರ್ಕಾರ ಹೆಚ್ಚಿನ ನಿಗಾ ಕೊಡಬೇಕೆಂದು ಹೇಳುತ್ತೇನೆ.

ಇನ್ನು ಹರಿಜನ ವಿದ್ಯಾರ್ಥಿಗಳ ಸಂಖ್ಯೆ ದಿನ ದಿನಕ್ಕೂ ಹೆಚ್ಚುತ್ತಿದೆ. ಇವರಿಗೆ ಕೊಡುತ್ತಿರುವ ವಿದ್ಯಾರ್ಥಿ ವೇತನದ ಮೊಬಲಗನ್ನು ಜಾಸ್ತಿಮಾಡಬೇಕೆಂದು ಆಗಿಂದಾಗ್ಗೆ ಪಾಲಿಸಿ ಸಮಿತಿಯವರು ಒತ್ತಾಯ ಮಾಡುತ್ತಲೇ ಬರುತ್ತಿದ್ದಾರೆ. ಆದರೆ ತಾವು ಇಲ್ಲಿಯವರೆಗೂ ಒಂದು ಪೈ ಕೂಡ ಜಾಸ್ತಿಮಾಡಿಲ್ಲ. ಇನ್ನು ಸರ್ಕಾರದವರು ಪಾಶ್ಚಾತ್ಯ ರಾಷ್ಟ್ರಗಳಿಗೆ ವಿಶೇಷ ಅಭ್ಯಾನಕ್ಕಾಗಿ ವಿದ್ಯಾರ್ಥಿಗಳನ್ನು ಈ ವ್ಯವಸಾಯ, ವೈದ್ಯಬಾಬು, ಇಂಜಿನಿಯರಿಂಗ್ ಇತ್ಯಾದಿಗಳಿಗೆ ಕಳುಹಿಸಿ ಕೊಡುತ್ತಿದ್ದಾರೆ. ಆ ಬಾಬಿನಲ್ಲಿ ಕನಿಷ್ಠಪಕ್ಷ ಅರ್ಧದಷ್ಟು ಅವಕಾಶವನ್ನು ಈ ಹರಿಜನ ವಿದ್ಯಾರ್ಥಿಗಳಿಗೆ ಕೊಟ್ಟು, ಇವರಿಗೆ ಹೆಚ್ಚಿನ ಸ್ಕಾಲರ್‌ಷಿಪ್ ಕೊಡತಕ್ಕ ವಿಚಾರಕ್ಕೆ ಸರ್ಕಾರ ತನ್ನ ಮುಖ್ಯ ಗಮನ ಕೊಡಬೇಕೆಂದು ಹೇಳುತ್ತೇನೆ.

ಇನ್ನು ಈ ಹರಿಜನರ ಸಾಮಾಜಿಕಾಭಿವೃದ್ಧಿಯ ಬಗ್ಗೆ ಕೇವಲ ಒಂದೆರಡು ಮಾತುಗಳನ್ನಾದರೂ ಹೇಳಲೇಬೇಕಾಗಿದೆ. ಇನ್ನು ನಿನ್ನೆತಾನೆ ಆ ಶೃಂಗೇರಿ ಮಠದ ವಿಚಾರ. . . . .

ಅಧ್ಯಕ್ಷರು.—ಈಗ ತಾವು ಈ ನಿರ್ಣಯಕ್ಕೆ ಸಂಬಂಧಪಟ್ಟ ಹಾಗೆ ಒಂದು ಅಂಶವನ್ನೂ ಹೇಳದೆ ಕೇವಲ ಹರಿಜನರ ಅಭಿವೃದ್ಧಿಯ ವಿಚಾರವನ್ನೇ ಕುರಿತು ಮಾತನಾಡುತ್ತಿದ್ದೀರಿ. ಹೀಗೆಯೇ ತಾವು ಭಾಷಣವನ್ನು ಮುಂದುವರಿಸಿದರೆ ತಮಗೆ ಅವಕಾಶವೀಯಲು ಹೇಗೆ ಸಾಧ್ಯವಾಗುತ್ತದೆ ?

ಶ್ರೀ ಎಂ. ಚಿಕ್ಕಲಿಂಗಯ್ಯ.—ಈಗ ಕೇಳಿರತಕ್ಕಂಥ 75 ಲಕ್ಷ ರೂಪಾಯಿಗಳು ಏತಕ್ಕೂ ಸಾಲುವುದಿಲ್ಲ. ಈ ಹರಿಜನರ ಅಭಿವೃದ್ಧಿಯಾಗಲೇಬೇಕೆಂಬುದಾಗಿ ತಮಗೆ ಇಚ್ಛೆ ಇರುವುದಾದರೆ ತಾವು ಈ ಬಾಬುಗಳಿಗೆಲ್ಲಾ ಹೆಚ್ಚಿನ ನಿಧಿಯನ್ನೊಳಗೊಂಡ ಒಂದು ಫಂಡನ್ನು ಮಾಡಬೇಕು. ಹೀಗೆ ಪ್ರತಿ ವರ್ಷವೂ ಬಜೆಟ್ಟಿನಲ್ಲಿ ಮಾಸಲಾಗಿಡತಕ್ಕಂಥ ಮೊಬಲಗನ್ನು ಆಯಾ ವರ್ಷವೇ ಖರ್ಚುಮಾಡಲು ನಿರ್ದಿಷ್ಟವಾದಂಥ ಯೋಜನೆಗಳ ಮೇಲೆ ಇವರ ಅಭಿವೃದ್ಧಿ ಕಾರ್ಯಗಳನ್ನು ನಡೆಸಬೇಕೆಂದು ಹೇಳಿ ಈ ನಿರ್ಣಯವನ್ನು ಅನುಮೋದಿಸಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿ (ಚಿಕ್ಕಮಗಳೂರು-ಮೂಡಿಗೆರೆ—ಅನುಸೂಚಿತ ಜಾತಿಗಳು).—ಸ್ವಾಮಿ, ಅಧ್ಯಕ್ಷರೆ, ನಿಮ್ಮ ವರ್ಗದ ಅಭಿವೃದ್ಧಿಗೆ ಭಾರತದಲ್ಲಿಯೂ ಮತ್ತು ನಮ್ಮ ಮೈಸೂರಿನಲ್ಲಿಯೂ ಹೆಚ್ಚು ಹೆಚ್ಚಾಗಿ ಸರ್ಕಾರದವರು ಸಹಾಯಗಳನ್ನು ನೀಡುತ್ತಲೇ ಬಂದಿದ್ದಾರೆ.

(ಶ್ರೀ ಜಿ. ಪುಟ್ಟಸ್ವಾಮಿ.)

ಆದಾಗ್ಯೂ ಇವರ ಅಭಿವೃದ್ಧಿಯು ಮಾತ್ರ ನಾವು ನಿರೀಕ್ಷಿಸಿದ್ದ ಮಟ್ಟದಲ್ಲಿ ನಡೆಯಲಿಲ್ಲವೆಂದು ಹೇಳಿದೆ ವಿಧಿಯಿಲ್ಲ. ನಮ್ಮ ಮೈಸೂರಿನಲ್ಲಿ ಸರ್ಕಾರದವರು ಅನೇಕ ರೀತಿಯ ಹರಿಜನಾಭಿವೃದ್ಧಿ ಕಾರ್ಯಗಳನ್ನು ಕೈಗೊಂಡಿದ್ದಾರೆ ಮತ್ತು ಇನ್ನು ಮುಂದೆಯೂ ಕೈಗೊಳ್ಳುವವರಾಗಿದ್ದಾರೆ. ಈ ಬಗ್ಗೆ ಇಲ್ಲಿಯವರೆಗೂ ಅನೇಕ ಈ ಮಾನ್ಯ ಸಭೆಯ ಸದಸ್ಯರುಗಳು ಉತ್ತಮ ರೀತಿಯ ಸಲಹೆಗಳನ್ನು ಈ ಹರಿಜನಾಭಿವೃದ್ಧಿಯ ಬಗ್ಗೆ ನೀಡಿದ್ದಾರೆ. ಅವುಗಳಲ್ಲಿ ಈಗಾಗಲೇ ಹಲವಾರು ಸಲಹೆಗಳನ್ನು ಸರ್ಕಾರದವರು ಕಾರ್ಯರೂಪಕ್ಕೆ ತರಲು ಹೊರಟಿದ್ದಾರೆ. ಈ ಹಿಂದೆ ಇದೇ ರೀತಿಯಾಗಿ ಅನೇಕ ನಿರ್ಣಯಗಳನ್ನು ಸದಸ್ಯರು ಈ ಮಾನ್ಯ ಸಭೆಯ ಮುಂದೆ ತಂದಿದ್ದಾಗ್ಗೆ ಸರ್ಕಾರದವರು ಈ ಕಾರ್ಯಕ್ಕೆ ಮತ್ತೂ ಹೆಚ್ಚಿನ ರೀತಿಯಲ್ಲಿ ಸಹಾಯ ನೀಡುವುದಾಗಿ ಭರವಸೆಗಳನ್ನು ನೀಡುತ್ತಲೇ ಬಂದಿದ್ದಾರೆ. ಕಳುಹಿಸಿರುವ ನಿರ್ಣಯಗಳನ್ನು ಪುರಸ್ಕರಿಸಿ ನಿಮ್ಮ ವರ್ಗದ ಕಮಿಷನರ್‌ರವರು ಅವುಗಳನ್ನೂ ಕೂಡ ಸಾಧ್ಯವಾದ ಮಟ್ಟಿಗೂ ಕಾರ್ಯರೂಪಕ್ಕೆ ತರುತ್ತಾರೆಂದು ನಾನು ನಂಬಿದ್ದೇನೆ. ಆ ಭರವಸೆಯನ್ನೂ ಕೂಡ ನಾನು ಇಟ್ಟುಕೊಂಡಿದ್ದೇನೆ. ಆದರೆ ಈ ಹರಿಜನರ ಅಭಿವೃದ್ಧಿ ಕಾರ್ಯಗಳನ್ನು ಒಂದು ನಿರ್ದಿಷ್ಟ ವ್ಯವಸ್ಥೆಯಲ್ಲಿ ನಡೆಸಿಕೊಂಡು ಬಾರದಿರುವುದು ಈ ಹರಿಜನರ ಒಂದು ದೌರ್ಭಾಗ್ಯ ವೆಂದು ಹೇಳುತ್ತೇನೆ.

ಅಧ್ಯಕ್ಷರು.—ತಾವು ಹೇಳುತ್ತಿರುವುದೇನು ಬಡ್ಜೆಟ್ಟಿನಲ್ಲಿ ಈ ಹರಿಜನಾಭಿವೃದ್ಧಿಗೆ ತೆಗೆದಿಟ್ಟಿರುವ ಹಣ ಸಾಲದೆಂತಲೇ?

ಶ್ರೀ ಜಿ. ಪುಟ್ಟಸ್ವಾಮಿ.—ಸ್ವಾಮಿ, ಇದು ನಿಮ್ಮ ವರ್ಗದವರ ಪ್ರಶ್ನೆ. ಬಹಳ ಪ್ರಾಮುಖ್ಯವಾದ ಪ್ರಶ್ನೆ. ಈ ದಿವಸ ದೇಶದ ಮುಂದೆ ಇರತಕ್ಕಂಥ ಅನೇಕ ಸಮಸ್ಯೆಗಳಲ್ಲಿ ಇದೇ ಒಂದು ಬಹಳ ದೊಡ್ಡ ಸಮಸ್ಯೆ. ಇದಕ್ಕಾಗಿ ಸಭೆಯವರೆಲ್ಲ ಇನ್ನೂ ಹೆಚ್ಚಿನ ಸಹಾನುಭೂತಿಯನ್ನು ತೋರಿಸಬೇಕಾಗಿದೆಯೆಂದು ನಾನು ಪ್ರಾರ್ಥಿಸಿಕೊಳ್ಳುತ್ತೇನೆ. ಇದಕ್ಕೆ ಸರ್ವರೂ ಒಂದು ಬೆಂಬಲ ನೀಡಬೇಕು. ಹೀಗೆ ಆಗದೆ ಹೋದರೆ ಸರ್ಕಾರ ಈ ಒಂದು ಕಾರ್ಯವನ್ನು ಯಾವ ಒಂದು ಘನ ಉದ್ದೇಶದಿಂದ ಕೈಗೊಂಡಿರುತ್ತದೆಯೋ ಅಂಥ ಉದ್ದೇಶ ಸಾಧನೆಯಾಗಲಾರದು. ಆದರೆ ಈವರೆಗೂ ಇಲ್ಲ ಹಾಗೆ ಒಂದು ನಿರ್ದಿಷ್ಟ ವ್ಯವಸ್ಥೆಯಿಂದ ಈ ಕಾರ್ಯಗಳು ನಡೆದಿರುವುದಿಲ್ಲ. ಈ ದಿವಸ ಬೊಂಬಾಯಿ ಸರ್ಕಾರದವರು ಈ ಕಾರ್ಯದಲ್ಲಿ ಬಹಳ ಮುಂದೆ ಸಾಗಿದ್ದಾರೆ. ಅವರು ನಮ್ಮ ಸರ್ಕಾರಕ್ಕಿಂತಲೂ ಹೆಚ್ಚಿನ ಅನೇಕ ಸುಧಾರಣೆಗಳನ್ನು ಕೈಗೊಂಡಿದ್ದಾರೆ. ಆದರೆ ಅವುಗಳನ್ನೆಲ್ಲಾ ವಿವರವಾಗಿ ತಿಳಿಸಲು ನನಗೀಗ ಕಾಲಾವಕಾಶವಿಲ್ಲ. ಆದರೆ ಹರಿಜನರ ಅಭಿವೃದ್ಧಿಗಾಗಿ ಅನೇಕ ಹಣವನ್ನು ಖರ್ಚು ಮಾಡುತ್ತೇವೆಂದು ನಮ್ಮ ಸರ್ಕಾರ ಹೇಳಬಹುದು. ಆದರೆ ಆ ಹಣವನ್ನು ಯಾವ ರೀತಿ ಖರ್ಚು ಮಾಡಿದರೆ ಹೆಚ್ಚಿನ ಅನುಕೂಲವಾಗುತ್ತದೆ ಎನ್ನುವುದನ್ನು ಸರ್ಕಾರ ನಿರ್ಧಾರವಾಡಿ ಆ ರೀ ಕಾರ್ಯಗಳನ್ನು ಕೈಗೊಂಡರೆ ಹೆಚ್ಚಿನ ಅನುಕೂಲವಾಗಲು ಸಾಧ್ಯವಾಗುತ್ತದೆ. ಈ ನಿಮ್ಮ ತರಗತಿಗಳ ಅಭಿವೃದ್ಧಿಗಾಗಿ ಹಣವನ್ನು ವರ್ಷದ ಕೊನೆಯಲ್ಲಿ ಒದಗಿಸದೆ, ವರ್ಷದ ಮೊದಲನಲ್ಲೇ ಒದಗಿಸಿದರೆ ಆ ಮೊಬಲಗು ಲ್ಯಾಪ್ಸ್ ಆಗದಂತೆ ಖರ್ಚು ಮಾಡುವುದಕ್ಕೆ ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಆ ಮೊಬಲಗೆಲ್ಲಾ ಖರ್ಚಾಗಲು ಸಾಧ್ಯವಿರುವುದಿಲ್ಲ. ಈ ಹರಿಜನಾಭಿವೃದ್ಧಿಯ ಕಾರ್ಯಗಳನ್ನು ನಾವು ನಿರೀಕ್ಷಣೆ ಮಾಡತಕ್ಕ ಮಟ್ಟದಲ್ಲಿ ನಡೆಯುವಂತೆ ಮಾಡಬೇಕಾದರೆ ಈ ಬಾಬುಗಳಲ್ಲಿ ಹೆಚ್ಚು ಹೆಚ್ಚು ಹಣವನ್ನು ಖರ್ಚುಮಾಡಬೇಕಾಗಿರುತ್ತದೆಂದು ಹೇಳುತ್ತೇನೆ.

ಶ್ರೀ ಜಿ ಎ. ತಿಮ್ಮಪ್ಪಗೌಡ (ಅರಕಲಗೂಡು).—ಈಗ ತಾವು ಬೊಂಬಾಯಿ ಸರ್ಕಾರದವರು ನಮ್ಮ ಸರ್ಕಾರಕ್ಕಿಂತಲೂ ಬಹಳ ಮುಂದೆ ಹೋಗಿದ್ದಾರೆ ಈ ಹರಿಜನಾಭಿವೃದ್ಧಿ ಕಾರ್ಯದಲ್ಲಿ ಎಂದು ಹೇಳಿದಿರಿ. ಆ ಬಗ್ಗೆ ಒಂದೆರಡು ನಿದರ್ಶನಗಳನ್ನೇನಾದರೂ ಕೊಡ ಬಲ್ಲಿರಾ?

ಶ್ರೀ ಜಿ. ಪುಟ್ಟಸ್ವಾಮಿ.—ಈ ಬಗ್ಗೆ ಅವರು ಅನೇಕ ಕಾರ್ಯಗಳನ್ನು ಕೈಗೊಂಡಿದ್ದಾರೆ. ಅದಕ್ಕಾಗಿ ಹೆಚ್ಚು ಹಣವನ್ನು ಬಡ್ಜೆಟ್ಟಿನಲ್ಲಿ ಒದಗಿಸಿರುತ್ತಾರೆ. ಹೆಚ್ಚು ಹೆಚ್ಚಾಗಿ ಹಣವನ್ನೂ ಕೂಡ ಖರ್ಚು ಮಾಡಿದ್ದಾರೆ. ಮೈಸೂರು ಸರ್ಕಾರ ಈ ಹರಿಜನಾಭಿವೃದ್ಧಿ ಕಾರ್ಯದಲ್ಲಿ ಬಹಳ ಶ್ರಮಿಸುತ್ತಿದೆ ಮತ್ತು ಅನೇಕ ಉಪಯುಕ್ತ ಕಾರ್ಯಗಳನ್ನು ನಡೆಸಿ ಒಂದು ಕೀರ್ತಿಯನ್ನು ಗಳಿಸಿಕೊಂಡಿರುವುದರಿಂದ ನಮ್ಮ ಮೈಸೂರು ಹಾಗೆ ಸಂಪಾದಿಸಿಕೊಂಡಿರತಕ್ಕಂಥ ಒಂದು ಧವಳ ಕೀರ್ತಿ ಉಳಿಯಲೆಂದೂ ಬೇರೆಯವರಿಗೆ ಅವಕಾಶ ನೀಡದಿರಲೆಂದೂ ನಾನೀಗ ಆ ಬೊಂಬಾಯಿ ಸಮಾಚಾರವನ್ನು ಉದಾಹರಣೆಗಾಗಿ ತಿಳಿಸಿದೆ. ಆದರೆ ಅವರು ಯಾವ ರೀತಿ ಈ ಹರಿಜನರ ಅಭಿವೃದ್ಧಿಗಾಗಿ ಹಣವನ್ನು ವಿನಿಯೋಗಮಾಡುತ್ತಿದ್ದಾರೆ ಎಷ್ಟರಮಟ್ಟಿಗೆ ಮಾಡುತ್ತಿದ್ದಾರೆ ಎಂಬುದರ ಬಗ್ಗೆ ಬೊಂಬಾಯಿ ಸರ್ಕಾರ ನಿಮ್ಮ ವರ್ಗದ ಅಭಿವೃದ್ಧಿಗೆ ತಯಾರಿಸಿರುವ ಯೋಜನೆ ಮತ್ತು ಅವರ ಬಡ್ಜೆಟ್ ಪುಸ್ತಕವನ್ನು ತರಿಸಿಕೊಂಡರೆ ಆಗ ಆ ವಿವರಗಳೆಲ್ಲಾ ತಮಗೇ ಗೊತ್ತಾಗುತ್ತವೆಂದು ಹೇಳಿದರೆ ಆಗ ಶ್ರೀ ಜಿ. ಎ. ತಿಮ್ಮಪ್ಪಗೌಡರು ಒಪ್ಪುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ನಮ್ಮಲ್ಲಿ ಹಾಗೆ ಮಾಡುತ್ತಿಲ್ಲ ಎಂದೇನೂ ನಾನು ಹೇಳಲಲ್ಲ. ಇಡೀ ಭಾರತಾದ್ಯಂತವೂ ಈ ಹರಿಜನರ ಸಮಸ್ಯೆಯನ್ನು ನಿವಾರಣೆ ಮಾಡತಕ್ಕ ಬಗ್ಗೆ ಬಹಳವಾಗಿ ಶ್ರಮಿಸುತ್ತಿದ್ದಾರೆಂದು ಒಂದು ಮಾತನ್ನು ಹೇಳಿದರೆ ಅದಕ್ಕೆ ತಾವು ಯಾರೂ ಭಿನ್ನಾಭಿಪ್ರಾಯಪಡುವುದಿಲ್ಲವೆಂದು ಹೇಳುತ್ತೇನೆ. ಈ ದಿವಸ ನಮ್ಮ ರಾಷ್ಟ್ರದ ಸಂಪತ್ತು ಸರ್ವತೋಮುಖವಾಗಿ ಹೆಚ್ಚಾಗಬೇಕಾಗಿದೆ. ನಮ್ಮ ದೇಶದ ಉತ್ಪನ್ನ ಜಾಸ್ತಿ ಆದರೆ ಆಗ ಈ ತೊಂದರೆಗಳೆಲ್ಲಾ ಒಂದೂ ಇರುವುದಿಲ್ಲ, ಎಲ್ಲವೂ ಸರಿಹೋಗುತ್ತದೆ. ಆದುದುರಿಂದ ನಾವೀಗ ನಮ್ಮ ಉತ್ಪತ್ತಿಯನ್ನು ಹೆಚ್ಚಿಸಿಕೊಳ್ಳಬೇಕಾಗಿದೆ. ಈ ಉತ್ಪನ್ನಗಳು ಜಾಸ್ತಿಯಾಗಿ ಆಗಬೇಕಾಗಿದ್ದರೆ ಹೆಚ್ಚು ಪ್ರಜಾನಂಖ್ಯೆಯುಳ್ಳ ನಿಮ್ಮ ವರ್ಗದವರಿಂದಲೂ ಆಗಬೇಕಾಗಿದೆ. ಈ ಜಾತಿ ಸಂಬಂಧವಾದಂಥ ಒಂದು ಸೋಕು ಇನ್ನೂ ಹೋಗಿಲ್ಲ. ಅದರಿಂದ ನಮಗೆಲ್ಲರಿಗೂ ಬಹಳ ನೋವುಂಟಾಗುತ್ತಿದೆ. ಆ ಒಂದು ನೋವು ಹೋಗಿದ್ದರೆ ನಾವು ಈ ಸಹಾಯಗಳಾವುವನ್ನೂ ಕೇಳುತ್ತಿರಲಿಲ್ಲ ಎಂದು ಹೇಳುತ್ತೇನೆ. ಈ ಜಾತಿ ಸೋಂಕಿನಿಂದ ಈ ದಿವಸ ಬಹಳ ಅನ್ಯಾಯವಾಗುತ್ತಿದೆ.

ಅಧ್ಯಕ್ಷರು.—ಈ ನಿರ್ಣಯಕ್ಕೆ ಸಂಬಂಧಪಟ್ಟಹಾಗೆ ಮಾತನಾಡಿ.

ಶ್ರೀ ಜಿ. ಪುಟ್ಟಸ್ವಾಮಿ.—ನಿಮ್ಮ ವರ್ಗದವರ ಅಭಿವೃದ್ಧಿ ಬಗ್ಗೆ ಒಂದು ನಿರ್ದಿಷ್ಟ ಕಾಲಾವಧಿಯನ್ನು ಗೊತ್ತುಮಾಡಿಕೊಂಡು, ಆ ಅವಧಿಯಲ್ಲಿ ಎಷ್ಟು ಹಣವನ್ನು ಖರ್ಚುಮಾಡಬೇಕೆಂಬುದನ್ನು ನಿರ್ಧಾರ ಮಾಡಿಕೊಂಡು, ಯಾವ ಯಾವ ಅಭಿವೃದ್ಧಿ ಕಾರ್ಯಗಳನು

ಕೈಗೊಳ್ಳಬೇಕೆಂಬ ಬಗ್ಗೆ ಒಂದು ತೀರ್ಮಾನ ಮಾಡಿಕೊಂಡು ಮಾಡಿದರೆ ಸ್ವಲ್ಪ ಅನುಕೂಲವಾಗುತ್ತದೆ.

ನಿಮ್ನವರ್ಗದವರ ವಿಚಾರದಲ್ಲಿ ರಾಜ್ಯಾಂಗದಲ್ಲಿ ನಮೂದಿಸಿರುವ ವಿಶೇಷ ರಿಯಾಯಿತಿಗಳನ್ನು ಉಪಯೋಗಿಸಿಕೊಳ್ಳುವಂತಾಗಬೇಕು. ರಾಜ್ಯಾಂಗ ತಯಾರಾಗಿ ಈಗಾಗಲೇ 5 ವರ್ಷಗಳು ಕಳೆಯುತ್ತ ಬಂದವು. ಇನ್ನು ಕೇವಲ 5-6 ವರ್ಷಗಳಿವೆ. ರಾಜ್ಯಾಂಗದ ಪ್ರಕಾರ, ಈ ರಾಜ್ಯಾಂಗದಲ್ಲಿ ಅವಕಾಶ ಕೊಟ್ಟಿರುವ ಅವಧಿಯೊಳಗೆ ಹರಿಜನರ ಅಭಿವೃದ್ಧಿ ಬೇರೆಯವರ ಮಟ್ಟಕ್ಕೆ ಬರಬೇಕು ಎಂದು ನಿರೀಕ್ಷಿಸುತ್ತಿರತಕ್ಕ ಪ್ರಜಾಕೋಟಿಗೆ ನ್ಯಾಯವಾದ ರೀತಿಯಲ್ಲಿ ಅವರ ಅಭ್ಯುದಯವನ್ನು ಸಾಧಿಸುವುದಕ್ಕೆ ಯೋಜನೆ ಕೈಗೊಳ್ಳದಿದ್ದರೆ ಅದು ಸರ್ಕಾರದ ತಪ್ಪಾಗುತ್ತದೆಯೇ ಹೊರತು ಪ್ರಜೆಗಳ ತಪ್ಪಾಗುವುದಿಲ್ಲ. ಬಹುಬೇಗ ಅವರ ಅಭ್ಯುದಯವನ್ನು ಸಾಧಿಸುವುದಕ್ಕೆ ಯೋಜನೆ ತಯಾರುಮಾಡುವ ಕಾಲದಲ್ಲಿ ನಿಮ್ನವರ್ಗದವರಿಗೆ ಆಗಿರತಕ್ಕಂಥ ಅನ್ಯಾಯಗಳು ಎಷ್ಟಿವೆ ಅಷ್ಟನ್ನೂ ಪರಿಗಣಿಸಬೇಕು. ಈಗಾಗಲೇ ಸರ್ಕಾರದವರು ಒಂದುಕಡೆ ಅಭಿವೃದ್ಧಿ ಕಾರ್ಯಗಳನ್ನು ಸಾಧಿಸುವಾಗ ಖಾಸಗೀ ಸಂಸ್ಥೆಗಳೂ ಸಹ ನೆರವು ನೀಡಿವೆ. ನಿಮ್ನ ವರ್ಗದವರಿಗೆ ಸಾರ್ವಜನಿಕರು ಸಹಾಯಮಾಡಲು ಸರ್ಕಾರದವರು ಸಾರ್ವಜನಿಕರಿಗೆ appeal ಮಾಡಿಕೊಳ್ಳಬೇಕು ಎಂದು ಕೇಳಿಕೊಳ್ಳುತ್ತೇನೆ. ಏಕೆಂದರೆ ಖಾಸಗಿ ಸಂಸ್ಥೆಗಳು ಅನೇಕವಿವೆ. ನಿಮ್ನವರ್ಗದವರಿಗೆ ಯಾವ ಸರ್ಕಾರಿ ಕಂಟ್ರಾಕ್ಟಿನಲ್ಲಿಯಾಗಲಿ ಇತರ ದೊಡ್ಡ ಉದ್ಯಮಗಳಲ್ಲಾಗಲಿ ಒಂದು ಖಾಸಗಿ ಸಂಸ್ಥೆಯಲ್ಲಾಗಲಿ ಸ್ಥಾನಮಾನಗಳಿಲ್ಲವೆಂದು ಹೇಳಿದರೆ ತಪ್ಪಾಗಲಾರದು. ಈಗ ಕಾರ್ಪೊರೇಷನ್ನಲ್ಲಿ Mayor ಹರಿಜನೇತರರಿದ್ದಾರೆ. B. T. C. Chairman ನಿಮ್ನವರ್ಗದವರಲ್ಲದವರಿದ್ದಾರೆ ಹೀಗೆ ಎಲ್ಲಾ ಕಡೆಯೂ ಹರಿಜನರಲ್ಲದವರು ಇರುವುದರಿಂದ ನಿಮ್ನವರ್ಗದವರಿಗೆ ಒಂದು ಸ್ಥಾನಮಾನಗಳಿಲ್ಲ. ಸರ್ಕಾರದಿಂದ ಒದಗತಕ್ಕ ಅನುಕೂಲಗಳನ್ನೂ ಒಂದು contract ಇದ್ದರೆ ಅದನ್ನೂ, ಲಾಭದಾಯಕವಾದ ಎಲ್ಲಾ ಉದ್ಯಮಗಳನ್ನೂ ಹರಿಜನರಲ್ಲದವರಿಗೆ ಕೊಟ್ಟು ಅವರ ಆರ್ಥಿಕಾಭಿವೃದ್ಧಿ ಮಾಡಿಕೊಳ್ಳಲು ಅವಕಾಶವಾಗಿದೆಯೇ ಹೊರತು ಹರಿಜನರ ಆರ್ಥಿಕಾಭಿವೃದ್ಧಿಯನ್ನು ಹೆಚ್ಚಿಸಲು ಸರ್ಕಾರ ಯಾವ ವ್ಯವಸ್ಥೆಯನ್ನು ಮಾಡಿದೆ ಎಂದು ಕೇಳುತ್ತೇನೆ.

Mr. SPEAKER.—The Hon'ble Member has not touched the Resolution at all.

ಶ್ರೀ ಜಿ. ಪುಟ್ಟಸ್ವಾಮಿ.—ಈಗ ನಾನು ಹೇಳುವುದಾದರೆ, ಬೊಂಬಾಯಿ ಸರ್ಕಾರದವರು. . . .

Sri G. SIVAPPA (Holalkere).—I move for closure, Sir.

ಅಧ್ಯಕ್ಷರು.—ನಿರ್ಣಯದಲ್ಲಿ 75 ಲಕ್ಷ ರೂಪಾಯಿಗಳನ್ನು ಕೊಡಿ ಎಂದಿದೆ. ಈ ವಿಷಯವನ್ನು ಕುರಿತು ನೀವು ಹೇಳಲಿಲ್ಲ. ನಿಮ್ಮ ಭಾಷಣದಲ್ಲಿ ಪೊದಲಸಿಂದ ಹರಿಜನಾಭಿವೃದ್ಧಿಯ ಕಾರ್ಯಗಳಿಗೆ ಏನೇನು ಮಾಡಬೇಕು ಎಂಬುದನ್ನು ಹೇಳಿದ್ದೀರಿ. ಈ ಸಭೆಯ ಕಾಲ ಬಹಳ ಅಮೂಲ್ಯವಾದದ್ದು. ಅದನ್ನು ಎಲ್ಲರೂ ಸದುಪಯೋಗಪಡಿಸಿಕೊಳ್ಳಬೇಕು. ಆದ್ದರಿಂದ ನಿಮ್ಮ ಭಾಷಣವನ್ನು ಮುಗಿಸಬೇಕಾಗಿದೆ.

ಶ್ರೀ ಜಿ. ಪುಟ್ಟಸ್ವಾಮಿ.—ಕೊನೆಯದಾಗಿ 75 ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಬೇಕೆಂದು ಈ ನಿರ್ಣಯವನ್ನು ಮಂಡಿಸಿರತಕ್ಕಂಥ ಮಾನ್ಯ ಸದಸ್ಯರಾದ ಶ್ರೀಮಾನ್ ಸಿ. ಟಿ. ಹನುಮಂತಯ್ಯನವರಿಗೆ ನನ್ನ ಹೃತ್ಪೂರ್ವಕವಾದ ವಂದನೆಗಳನ್ನು ಸಲ್ಲಿಸುತ್ತೇನೆ. ಈ ನಿರ್ಣಯವನ್ನು ಸರ್ಕಾರದವರು ಗಣನೆಗೆ ತೆಗೆದುಕೊಂಡು 75ಲಕ್ಷರೂಪಾಯಿಗಳನ್ನು ಮಂಜೂರು ಮಾಡತಕ್ಕದ್ದು ಸೂಕ್ತವಾಗಿದೆ, ಸಾಧುವಾಗಿದೆ. ಅದನ್ನು ದಯಪಿಟ್ಟು ಮಂಜೂರು ಮಾಡಬೇಕು ಎಂದು ಕೇಳಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

Mr. SPEAKER.—The Minister will reply.

ಶ್ರೀ ಟಿ. ಚನ್ನಯ್ಯ (ಜನಾರೋಗ್ಯ ಮತ್ತು ಸ್ಥಳೀಯ ಸಂಸ್ಥೆಗಳ ಮಂತ್ರಿಗಳು).— ಸ್ವಾಮಿ, ಈ ದಿವಸ ಶ್ರೀಮಾನ್ ಸಿ. ಟಿ. ಹನುಮಂತಯ್ಯನವರು ತಂದಿರತಕ್ಕ ನಿರ್ಣಯದ ವಿಷಯದಲ್ಲಿ ಕೆಲವು ವಿಷಯಗಳನ್ನು ಈ ಸಭೆಯಮುಂದೆ ಇಡಲು ನಾನು ಇಷ್ಟಪಡುತ್ತೇನೆ. ಹರಿಜನಾಭಿವೃದ್ಧಿಯ ವಿಷಯದಲ್ಲಿ ಅನೇಕ ಮಾನ್ಯ ಸದಸ್ಯರು ಹಲವಾರು ವಿಷಯಗಳನ್ನು ಈ ಸಭೆಯ ಮುಂದೆ ಇಟ್ಟಿದ್ದಾರೆ.

ಶ್ರೀ ಕೆ. ಪ್ರಭಾಕರ್ (ನೆಲಮಂಗಲ—ಅನುಸೂಚಿತ ಜಾತಿಗಳು).—Harijan upliftment portfolio ಇರುವ Chief Minister ಇಲ್ಲವೇ?

Mr. SPEAKER.—He has not come. Any member on behalf of Government can reply.

ಶ್ರೀ ಟಿ. ಚನ್ನಯ್ಯ.—ಶ್ರೀಮಾನ್ ಹನುಮಂತಯ್ಯನವರು ಈ ಸಾಲಿನಲ್ಲಿ ಕನಿಷ್ಠಪಕ್ಷ 75 ಲಕ್ಷ ರೂಪಾಯಿಗಳನ್ನು ಬಜೆಟ್ಟಿನಲ್ಲಿ ಒದಗಿಸಿಕೊಡಬೇಕು, ಹರಿಜನರ ಅಭಿವೃದ್ಧಿಯ ವಿಷಯದಲ್ಲಿ ತಕ್ಕ ಏರ್ಪಾಡನ್ನು ಮಾಡಬೇಕೆಂಬುದಾಗಿ ತಮ್ಮ ನಿರ್ಣಯದಲ್ಲಿ ಸೂಚನೆ ಮಾಡಿದ್ದಾರೆ.

ಹರಿಜನರ ಅಭಿವೃದ್ಧಿ ಕಾರ್ಯದ ವಿಷಯದಲ್ಲಿ ಸರ್ಕಾರದವರು ಏನೇನು ಮಾಡುತ್ತಿದ್ದಾರೆ, ಹಿಂದೆ ಏನು ಮಾಡಿದ್ದಾರೆ ಎಂಬ ವಿಷಯಗಳನ್ನು ಮಾನ್ಯ ಸದಸ್ಯರುಗಳಿಗೆ ಆಗಲೇ ಒದಗಿಸಿರತಕ್ಕಂಥ "Harijans on the march" ಎಂಬ ಪುಸ್ತಕದಲ್ಲಿ ವಿಶದವಾಗಿ ಕೊಟ್ಟಿದೆ. ಮುಖ್ಯವಾಗಿ eradication of untouchability ವಿಚಾರದಲ್ಲಿ ಮೈಸೂರು ಮತ್ತು ಕೇಂದ್ರ ಸರ್ಕಾರಗಳು ಎಷ್ಟು ಹಣವನ್ನು ಒದಗಿಸಿವೆ ಎಂಬುದನ್ನು ಕೂಡ ಇಲ್ಲಿ ಕಾಣಿಸಲಾಗಿದೆ. ಆಗಲೇ ಮಾನ್ಯ ಸದಸ್ಯರಾದ ಶ್ರೀಮಾನ್ ಬಿ. ರಾಚಯ್ಯನವರು 9 ಲಕ್ಷ ರೂಪಾಯಿ ಒದಗಿಸಿದ್ದಾರೆಂಬುದಾಗಿ ತಿಳಿಸಿದ್ದಾರೆ. ಆದರೆ ಈಗ 9 ಲಕ್ಷ ರೂಪಾಯಿ ಅನ್ಪೃಶ್ಯತಾ ನಿವಾರಣಾಕಾರ್ಯಕ್ಕೆ ಖರ್ಚುಮಾಡುತಕ್ಕದ್ದು ಸರಿಯಾದ ಮಾರ್ಗವಲ್ಲ, ಅದೇ ಹಣವನ್ನು ಹರಿಜನಾಭಿವೃದ್ಧಿಗೆ ತಕ್ಕಂಥ ಅಭಿವೃದ್ಧಿ ಕಾರ್ಯಗಳಿಗೆ ಉಪಯೋಗ ಮಾಡಬೇಕು.

Sri K. PRABHAKAR.—On a point of information, Sir. 'Harijans on the march'ನಲ್ಲಿ 9 ಲಕ್ಷ ರೂಪಾಯಿ ಒದಗಿಸಿದ್ದಾರೆ ಎಂದರೆ ಅದು resolutionಗೆ relevant ಆಗುತ್ತದೆಯೇ? ಐದಾರು ವರ್ಷಗಳಲ್ಲಿ ಎಷ್ಟು ಖರ್ಚಾಗಬೇಕು ಎಂದು ಹಾಕಿಕೊಂಡಿರುತ್ತಾರೆ. ಒಂದು ವರ್ಷಕ್ಕೆ ಎಷ್ಟು ದುಡ್ಡು ಬರುತ್ತದೆ? ಈ ವರ್ಷದ ಬಜೆಟ್ಟಿನಲ್ಲಿ 75 ಲಕ್ಷ ರೂಪಾಯಿ ಕೊಡಿ ಎಂದು ಕೇಳುತ್ತಿದ್ದೇವೆ. ಒಂದು ಕೋಟಿ ರೂಪಾಯಿ ಕೊಟ್ಟರೂ ಸಾಲದು. ಈ ವರ್ಷದ ಬಜೆಟ್ಟಿನಲ್ಲಿ ಮೈಸೂರು ಸರ್ಕಾರದವರು ಇದಕ್ಕೆ ಸಂಬಂಧಪಟ್ಟ ಹಾಗೆ ಎಷ್ಟು ಖರ್ಚು ಮಾಡಬಲ್ಲರು ಎಂದು ಹೇಳಿದರೆ ಅದು ಸರಿ.

ಅಧ್ಯಕ್ಷರು.—ತಾವು ಕೇಳುವುದು ಒಟ್ಟಿಗೆ ಎಷ್ಟು ದುದ್ದು ಖರ್ಚುಮಾಡುತ್ತಾರೆ ಎಂದು. ಅದನ್ನು ಕೊನೆಗೆ ಹೇಳಬಹುದು.

ಶ್ರೀ ಟಿ. ಚನ್ನಯ್ಯ.—ಹೇಳುತ್ತೇನೆ. Removal of untouchability ಸಂಬಂಧದಲ್ಲಿ 9 ಲಕ್ಷ ರೂಪಾಯಿ ಖರ್ಚು ಮಾಡಲಾಗುತ್ತದೆ. ಹರಿಜನರು ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಮತ್ತು ಮನೆಗಳ ನಿವೇಶನಗಳಿಗೆ sites acquire ಮಾಡಿಕೊಳ್ಳುವುದಕ್ಕೆ ಸುಮಾರು 17 ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆ. ಆದರೆ ಇಷ್ಟು ಹಣ ಸಾಲದೆಂದು ಮಾನ್ಯ ಸದಸ್ಯರು ಆಗಲೇ ತಿಳಿಸಿದ್ದಾರೆ.

ಶ್ರೀ ಆರ್. ಮುನಿಸ್ವಾಮಯ್ಯ (ಬೆಂಗಳೂರು ಉತ್ತರ—ಅನುಸೂಚಿತ ಜಾತಿಗಳು).—ಈ ವರ್ಷದ ಬಜೆಟ್‌ನಲ್ಲಿ 35 ಲಕ್ಷ ರೂಪಾಯಿ ಇದೆ; ಅದರಲ್ಲಿ 17 ಲಕ್ಷ ತಗ್ಗಿಸಲಾಗಿದೆಯೇ?

ಶ್ರೀ ಟಿ. ಚನ್ನಯ್ಯ.—17 ಲಕ್ಷ ರೂಪಾಯಿಗಳನ್ನು sites acquireಮಾಡಿಕೊಳ್ಳುವುದಕ್ಕೆ, ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ, ಗ್ರಾಂಟ್ಸ್ ಕೊಡುವುದಕ್ಕೆ ಒದಗಿಸಲಾಗಿದೆ. ಆದರೆ ಕಳೆದ ವರ್ಷದಲ್ಲಿ 19 ಲಕ್ಷ ರೂಪಾಯಿಗಳನ್ನು ಒದಗಿಸಲಾಗಿತ್ತು. ಸುಮಾರು 7 ಲಕ್ಷ ರೂಪಾಯಿಗಳನ್ನು ಕೆಲವು ಸ್ಥಳಗಳಲ್ಲಿ ಹಾಸ್ಟೆಲುಗಳನ್ನು ಕಟ್ಟಿಕೊಳ್ಳುವುದಕ್ಕೆ ಒದಗಿಸಲಾಗಿತ್ತು. Depressed Class Policy ಕಮಿಟಿಯವರು ತೀರ್ಮಾನ ಮಾಡಿ ಇದರ ಕೆಲವು ಭಾಗದ ಹಣವನ್ನು ಹಾಸ್ಟೆಲ್ ಕಟ್ಟುವುದಕ್ಕೆ ಮುಡುಪಾಗಿ ಇಡಬೇಕೆಂಬುದಾಗಿ ಮಾಡಿದರು. ಅದೇ ಪ್ರಕಾರ amelioration ಸಂಬಂಧದಲ್ಲಿ ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಮತ್ತು ಸ್ಟೂಟುಗಳನ್ನು ಅಕ್ಕೈರುಮಾಡಿಕೊಳ್ಳುವುದಕ್ಕೆ ಈ ಮೊಬಲಗಿನಲ್ಲಿ ಇಷ್ಟು ಹಣ ಖರ್ಚುಮಾಡಬೇಕೆಂದು ಪಾಲಸಿ ಕಮಿಟಿಯವರು ಒಂದು ತೀರ್ಮಾನ ತೆಗೆದು ಕೊಂಡದ್ದರ ಪರಿಣಾಮವಾಗಿ ಇಷ್ಟು ಹಣವನ್ನು ಈಗಾಗಲೇ ಖರ್ಚುಮಾಡಿ ಹಾಸ್ಟಲುಗಳನ್ನು ಕಟ್ಟಿಸುತ್ತಿದ್ದೇವೆ.

ಅಧ್ಯಕ್ಷರು.—ಆ ಕಮಿಟಿ ಮೆಂಬರುಗಳು ಇಲ್ಲಿದ್ದಾರೆಯೇ?

ಶ್ರೀ ಟಿ. ಚನ್ನಯ್ಯ.—ಹೌದು.

ಶ್ರೀ ಬಿ. ರಾಚಯ್ಯ.—ಪಾಲಸಿ ಕಮಿಟಿಯಲ್ಲಿ ಕೇಳಿದ 25 ಭಾಗ ಹರಿಜನರಿಗೆ amelioration grant ಕೊಡಬೇಕು, ಬಾಕಿ 75 ಭಾಗ General education fund ಆಗಿ ಕೊಡಬೇಕು ಎಂಬುದು ನಮ್ಮ ಅಭಿಪ್ರಾಯ. Housing Scheme ನಲ್ಲಿ ಇರುವ ಹಣವನ್ನೆಲ್ಲಾ ಹಾಸ್ಟೆಲುಗಳಿಗೆ ಕೊಟ್ಟು ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಹಣವಿಲ್ಲದಾಗಿದೆ. Education Department ನಿಂದ ಬರಬೇಕಾದ ಹಣ ಸಂದಾಯವಾಗುತ್ತಿಲ್ಲ. ಅದನ್ನೆಲ್ಲಾ Education Department ನಿಂದ ಕೊಡಬೇಕು.

ಶ್ರೀ ಟಿ. ಚನ್ನಯ್ಯ.—Education Department ನಿಂದ ಹಾಸ್ಟೆಲ್ ಕಟ್ಟಿಸುವುದಕ್ಕೆ ಒದಗಿಸಿರ ತಕ್ಕಂಥ grant ನಲ್ಲಿ ಸಾಕಾದಷ್ಟು ಕೊಡುವುದಕ್ಕೆ ಸಾಧ್ಯವಿಲ್ಲವೆಂಬುದನ್ನು ಯೋಚನೆಮಾಡಿ ಪಾಲಸಿ ಕಮಿಟಿಯಲ್ಲಿ ಒಂದು ಹಾಸ್ಟೆಲ್‌ಗೆ 1-1½ ಲಕ್ಷ ರೂಪಾಯಿಗಳನ್ನು ಒದಗಿಸಿಕೊಡಬೇಕಾಗುತ್ತದೆಂದು ತೀರ್ಮಾನಿಸಿದರು. ಆದ್ದರಿಂದ, Education Department Building Grants ನಿಂದ ಅಷ್ಟು ಹಣವನ್ನು ಹರಿಜನರ ಹಾಸ್ಟೆಲುಗಳಿಗೆ ಒದಗಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಅವರು 25 ಸಾವಿರ ರೂಪಾಯಿಗಳಷ್ಟು ಕೊಡಬಲ್ಲರು. ಆದರೆ ಸರ್ವೇಸಾಮಾನ್ಯವಾಗಿ ಒಂದೆರಡು ಲಕ್ಷ ರೂಪಾಯಿಗಳನ್ನು ಪ್ರತಿಯೊಂದು ಹಾಸ್ಟೆಲು ಕಟ್ಟುವುದಕ್ಕೂ ಕೊಡಲು ಸಾಧ್ಯವಾಗದೆ ಹೋದುದರ ದೆಸೆಯಿಂದ amelioration grant ನಲ್ಲಿ ಹಣವನ್ನು ಹೆಚ್ಚಾಗಿ ತೆಗೆದುಕೊಂಡು ಹರಿಜನ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸಕ್ಕೆ ಶಾಶ್ವತವಾದ ಏರ್ಪಾಡು ಮಾಡಿದರೆ ನಿಜವಾಗಿಯೂ ಅವರಿಗೆ ಅನುಕೂಲವಾಗುತ್ತದೆ ಎಂಬ ಉದ್ದೇಶದಿಂದ, ಹಾಸ್ಟೆಲುಗಳಿಗೆ ಹಣವನ್ನು ಒದಗಿಸಿದೆವು. ಈ ವರ್ಷ ಕೂಡ ಕೆಲವು ಹಾಸ್ಟೆಲುಗಳನ್ನು ಕಟ್ಟಬೇಕು, ಇದು ಬಹಳ ಮುಖ್ಯವಾದ ಕೆಲಸ. ಹರಿಜನರು ಮುಂದೆ ಬರಬೇಕಾದರೆ ವಿದ್ಯಾಭ್ಯಾಸದಲ್ಲಿ ಮುಂದುವರಿಯಬೇಕು. ಅದನ್ನು ಕೊಡಬೇಕಾದರೆ ಹಾಸ್ಟೆಲುಗಳಿದ್ದರೆ ಅನುಕೂಲವಾಗುತ್ತದೆ ಎಂದು ಯೋಚನೆ ಮಾಡಿದುದರ ದೆಸೆಯಿಂದಲೂ, ಮಾನ್ಯ ಸದಸ್ಯರು ಕೂಡ ಅದನ್ನು ಒಪ್ಪಿಕೊಂಡುದುದರ ಮೇಲೂ ಹಾಗೆ ಮಾಡುತ್ತಿದ್ದೇವೆ.

Mr. SPEAKER.—I want to know whether this fact has been endorsed by the Policy Committee.

Sri T. CHANNIAH.—That has been approved by the Policy Committee also. ಅವರ ಅನುಮತಿಯ ಪ್ರಕಾರ ಈಗಾಗಲೇ ಐದಾರು ಹಾಸ್ಟೆಲುಗಳನ್ನು ಕಟ್ಟಲು ಮಂಜೂರಾತಿಯನ್ನು ಕೊಡಲಾಗಿದೆ. ಸ್ವಲ್ಪ ಭಾಗದ ಹಣ ಖರ್ಚಾಗಿದೆ. ಇನ್ನು ಮುಂದೆ ಹಾಸ್ಟೆಲುಗಳನ್ನು ಪೂರೈಸುವುದಕ್ಕೆ ನರ್ಮಾರೆದವರು ಕಾರ್ಯಕ್ರಮ ತೆಗೆದುಕೊಳ್ಳುತ್ತಾರೆ. ಇನ್ನೂ ಕೆಲವು ಹಾಸ್ಟೆಲುಗಳನ್ನು District Headquarters ಮತ್ತು Taluk Headquartersಗಳಲ್ಲಿ ಕಟ್ಟಿಸಿ ಕೊಟ್ಟು ವಿದ್ಯಾಭ್ಯಾಸವನ್ನು ಮುಂದುವರಿಸಬೇಕೆಂಬ ಘನ ಉದ್ದೇಶ ಮಾಡಿಕೊಂಡಿದ್ದರ ದೆಸೆಯಿಂದ Amelioration ಫಂಡ್‌ನಿಂದ ಹೆಚ್ಚುಭಾಗ ತೆಗೆದು ಕೊಂಡು ಹಾಸ್ಟೆಲುಗಳನ್ನು ಕಟ್ಟಿಸುತ್ತಿದ್ದೇವೆ. ವಿದ್ಯಾಭ್ಯಾಸದ ಇಲಾಖೆಯಲ್ಲಿ ಒದಗಿಸಿರುವ building grants ನಿಂದ ಅಷ್ಟು ಹಣವನ್ನು ಒದಗಿಸುವುದಕ್ಕೆ ಸಾಧ್ಯವಿಲ್ಲದೆ ಇದ್ದುದರಿಂದ ಈ ರೀತಿ ತೀರ್ಮಾನವನ್ನು ತೆಗೆದುಕೊಂಡು ಮಾಡಲಾಯಿತು. ಆದರೆ ಎಲ್ಲೆಲ್ಲಿ ಈ ಹಾಸ್ಟೆಲುಗಳ ಖರ್ಚು ಕಡಿಮೆಯಾಗುತ್ತದೆಯೋ, 25 ಅಥವಾ 50 ಸಾವಿರ ರೂಪಾಯಿಗಳೊಳಗೆ ಆಗುತ್ತದೆಯೋ ಅಂಥ ಸ್ಥಳಗಳಲ್ಲಿ ವಿದ್ಯಾಭ್ಯಾಸ ಇಲಾಖೆಯಿಂದ ಈ ಹಾಸ್ಟೆಲುಗಳನ್ನು ಕಟ್ಟಬೇಕು, ಅದಕ್ಕೆ ಗ್ರಾಂಟನ್ನು ಕೊಡಬೇಕು, ಎಂದು ನಾವು ಕೇಳಿದ ಪಕ್ಷದಲ್ಲಿ ಆ ಇಲಾಖೆಯಿಂದ ಸ್ವಲ್ಪಭಾಗದ ಹಣವನ್ನು ಗ್ರಾಂಟ್ ರೂಪದಲ್ಲಿ ತೆಗೆದುಕೊಳ್ಳುವುದಕ್ಕೆ ಅವಕಾಶವಿದೆ. ಆ ರೀತಿ ಮಾಡುವುದರಲ್ಲಿ ಯಾವ ಅಡ್ಡಿಯೂ ಇಲ್ಲ. ಆ ಉದ್ದೇಶದಿಂದಲೇ ಈ ರೀತಿ ತೀರ್ಮಾನವನ್ನು ತೆಗೆದುಕೊಂಡಿರತಕ್ಕದ್ದು.

ಇನ್ನ ಕೆಲವು ಮಾನ್ಯ ಸದಸ್ಯರು scholarship amounts ಯೂನಿವರ್ಸಿಟಿಗೆ ಕೊಟ್ಟಿರುವುದು lapse ಆಗುತ್ತದೆ. ಆದ್ದರಿಂದ university ವಿದ್ಯಾರ್ಥಿಗಳಿಗೆ ಸ್ಕಾಲರ್‌ಷಿಪ್ಪಿಗಾಗಿ ಎಷ್ಟು allot ಆಗಿದೆಯೋ ಅಷ್ಟು ಮೊಬಲಗನ್ನೂ ಖರ್ಚು ಮಾಡಬೇಕೆಂದು ಮಾನ್ಯ ಸದಸ್ಯರು ಕೆಲವರು ಸೂಚನೆ ಕೊಟ್ಟರು. ಸರ್ಕಾರದವರು ಕಾಲೇಜುಗಳಲ್ಲಿ ಓದತಕ್ಕ ವಿದ್ಯಾರ್ಥಿಗಳಿಗೆಲ್ಲಾ ಹಣವನ್ನು scholarship ಮುಖಾಂತರ ಕೊಡಬೇಕೆಂಬುದಾಗಿ ಉದ್ದೇಶ ಮಾಡಿದರು. ಇಂಡಿಯಾ ಸರ್ಕಾರದವರೂ ಕೂಡ ಕಾಲೇಜುಗಳಲ್ಲಿ ಓದತಕ್ಕ ವಿದ್ಯಾರ್ಥಿಗಳಿಗೆ scholarships ಕೊಡುತ್ತಾರೆ, ಆದ್ದರಿಂದ ವಿದ್ಯಾರ್ಥಿಗಳು ಯೂನಿವರ್ಸಿಟಿಗೂ

scholarship ಕೊಡಬೇಕೆಂದು apply ಮಾಡಿದರು ಮತ್ತು ಇಂಡಿಯಾ ಸರ್ಕಾರಕ್ಕೂ ಸಹ ಅನೇಕ ಅರ್ಜಿಗಳನ್ನು ಕೊಟ್ಟರು. ಇಂಡಿಯಾ ಸರ್ಕಾರದವರು ಕೊಡತಕ್ಕ ವಿದ್ಯಾರ್ಥಿವೇತನ ಜಾಸ್ತಿಯಾಗಿರುವುದರಿಂದ ಬಹುಭಾಗ ಹುಡುಗರಿಗೆ ಅಲ್ಲಿನ ವಿದ್ಯಾರ್ಥಿವೇತನ ಸಿಕ್ಕಿತು. ಅಲ್ಲಿ ಯಾರಿಗೆ ಕೊಟಿದ್ದಾರೆಯೋ ಅಂಥವರಿಗೆಲ್ಲಾ ಮೈಸೂರು ಸರ್ಕಾರದವರು ಕೊಡುವುದಿಲ್ಲ. ಅಲ್ಲಿ ಕೊಡತಕ್ಕ ಮೊಬಲಗು ಹೆಚ್ಚಾಗಿರುವುದರಿಂದ ಮೈಸೂರು ಯೂನಿವರ್ಸಿಟಿಯವರು ಪುನಃ ಎರಡನೆಯ ಬಾರಿ ವಿದ್ಯಾರ್ಥಿವೇತನ ಕೊಡುವುದಿಲ್ಲ. ಈ ರೀತಿ ಅಲ್ಲಿ ಹೆಚ್ಚುಭಾಗ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಒದಗುವುದರ ದೆಸೆಯಿಂದ ಇಲ್ಲಿ ಅವರಿಗೆ scholarship ಕೊಡದೆ ನಿಲ್ಲಿಸಬೇಕಾಗಿ ಬಂತು. ಹೀಗಾಗಿ ಕೆಲವು ಭಾಗ ಹಣ ಉಳಿತಾಯವಾಯಿತು. ಆದರೆ ಆರೀತಿ ಉಳಿತಾಯವಾದ ಹಣವನ್ನು ಕಾಲೇಜಿನಲ್ಲಿ ಓದುವವನೆ ಹರಿಜನ ವಿದ್ಯಾರ್ಥಿಗಳಿಗೆ ಕೊಡಬೇಕೆಂಬುದಾಗಿ ಅನೇಕವೇಳೆ ನೂಚನೆ ಮಾಡಿದ್ದಾರೆ.

ಶ್ರೀ ಆರ್. ಮುನಿಸ್ವಾಮಯ್ಯ.—ಕಾಲೇಜುಗಳಲ್ಲಿ ಓದುವವರಿಗೆ ಕೊಡಿ ಎಂದು ಹೇಳಲಿಲ್ಲ. ಉಳಿತಾಯವಾದ ಹಣವನ್ನು ಹಾಸ್ಟೆಲು ಕಟ್ಟಿಸುವುದಕ್ಕೆ ಕೊಡಿ, ಅದು ಸಾಧ್ಯವಾಗದೆ ಹೋದರೆ ಹೈಸ್ಕೂಲಿನಲ್ಲಿ ಓದತಕ್ಕ ವಿದ್ಯಾರ್ಥಿಗಳಿಗೆ ಕೊಡಿ ಎಂದು ಹೇಳಿದೆವು.

ಶ್ರೀ ಟಿ. ಚನ್ನಯ್ಯ.—ಆ ರೀತಿ ಕೂಡ ಸೂಚನೆ ಕೊಟ್ಟಿದ್ದಾರೆ. ಯೂನಿವರ್ಸಿಟಿಯಲ್ಲಿ allocate ಮಾಡಿರತಕ್ಕ scholarship ಹಣವನ್ನು ಹೈಸ್ಕೂಲು ವಿದ್ಯಾರ್ಥಿಗಳಿಗೆ ಕೊಡಬೇಕೆಂಬುದಾಗಿ ಅನೇಕ ಮಾನ್ಯ ಸದಸ್ಯರು ಕೇಳಿದ್ದಾರೆ.

11-30 A.M.

ಅದರ ವಿಷಯದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಜವಾಬು ಕೊಟ್ಟಿದ್ದಾರೆ. ಯೂನಿವರ್ಸಿಟಿಗೆ ಅಲಾಟ್ ಮಾಡಿದ ಪೊಲಿಟಿಗಿನಲ್ಲಿ, ಎಜುಕೇಷನ್ ಡಿಪಾರ್ಟ್‌ಮೆಂಟಿಗೆ ಸಂಬಂಧಪಟ್ಟ ಹೈಸ್ಕೂಲುಗಳಲ್ಲಿ ಓದತಕ್ಕ ವಿದ್ಯಾರ್ಥಿಗಳಿಗೆ ಕೊಡಲಿಕ್ಕೆ ಕೆಲವು ಟಿಕ್ನಿಕಲ್ ಡಿಫಿಕಲ್ಟೀಸ್ ಇವೆ. ಅದು ಸಾಧ್ಯವಾಗುವುದಿಲ್ಲ, ಆಡಿಟ್ ಅಬ್ಜೆಕ್ಷನ್ ಆಗುತ್ತದೆ, ಎ. ಜಿ. ಒಪ್ಪಲಾರರು ಎಂದು ಹೇಳಿ ಆಗಲೇ ತಿಳಿಸಿದ್ದಾರೆ. ಯೂನಿವರ್ಸಿಟಿನಲ್ಲಿ ಈಗಾಗಲೇ ಹೆಚ್ಚು ಹಣ ಖರ್ಚು ಮಾಡುತ್ತಾ ಇದ್ದೇವೆ ಅದರಲ್ಲಿ ಸ್ವಲ್ಪ ಹಣವನ್ನು ಉಳಿತಾಯ ಮಾಡಬೇಕು. ಈಗಾಗಲೇ ಡಿಫಿಸಿಟ್ ಬಜೆಟ್ ಮುಂತಾದುವುಗಳೆಲ್ಲಾ ಆಗುತ್ತಾ ಇವೆ. ಆದ್ದರಿಂದ ಎಲ್ಲೆಲ್ಲಿ ಸಾಧ್ಯವೋ ಅಲ್ಲೆಲ್ಲಾ ಹಣ ಉಳಿತಾಯ ಮಾಡಬೇಕೆಂಬ ಉದ್ದೇಶದಿಂದ ತಿಳಿಸಿದ್ದಾರೆ. ಆದ್ದರಿಂದ ಈ ಹಣವನ್ನು ತೆಗೆದುಕೊಂಡು ಹೈಸ್ಕೂಲು ವಿದ್ಯಾರ್ಥಿಗಳಿಗೆ ಸ್ಕಾಲರ್‌ಷಿಪ್‌ಗಾಗಿ ಕೊಡಲಿಕ್ಕೆ ಸಾಧ್ಯವಿಲ್ಲ ಎಂದು ಹೇಳುತ್ತೇನೆ.

ಶ್ರೀ ಬಿ. ರಾಚಯ್ಯ.—ಈ ಹಣವನ್ನು ಕಾಲೇಜು ಹಾಸ್ಟಲುಗಳ ಕಟ್ಟಡ ಕಟ್ಟುವ ಅವಶ್ಯಕತೆ ಇರುವುದರಿಂದ ಅದಕ್ಕಾದರೂ ಕೊಡಿ ಅಥವಾ ಪರದೇಶಗಳಿಗೆ ಹೋಗಲು ಅರ್ಹರಾಗಿರುವ ವಿದ್ಯಾರ್ಥಿಗಳು ಇದ್ದರೆ ಅವರಿಗಾದರೂ ಸ್ಕಾಲರ್‌ಷಿಪ್ ಕೊಟ್ಟು ಕಳುಹಿಸಿ ಎಂದರೆ ಅದನ್ನೂ ಮಾಡುತ್ತಿಲ್ಲ. ನಮ್ಮನೆ ಹಣ ಲ್ಯಾಪ್ಸು ಆಗುತ್ತಾ ಇದೆ.

ಶ್ರೀ ಟಿ. ಚನ್ನಯ್ಯ.—ಈಗ ಯೂನಿವರ್ಸಿಟಿಯಲ್ಲಿ ಲ್ಯಾಪ್ಸ್ ಆಗತಕ್ಕ ಹಣವನ್ನು ಹಾಸ್ಟೆಲುಗಳನ್ನು ಕಟ್ಟಿಸಲಿಕ್ಕಾಗಲಿ ವಿದ್ಯಾರ್ಥಿಗಳಿಗೆ ವೇತನ ಕೊಡುವುದಕ್ಕಾಗಲಿ ಕೊಡಿಸಿದರೆ ಉತ್ತಮ ಎಂಬ ವಿಷಯವನ್ನು ಶ್ರೀಮಾನ್ ರಾಚಯ್ಯನವರು ತಿಳಿಸಿದರು. ಹಾಸ್ಟೆಲುಗಳನ್ನು ಕಟ್ಟಿಸತಕ್ಕ ವಿಷಯದಲ್ಲಿ, ಅಮೀಲಯೋರೇಷನ್ ಫಂಡ್‌ನಿಂದ ಕೊಡಬೇಕೆಂದು ಪಾಲಸಿ ಕಮಿಟಿಯವರು ಹಿಂದೆ ತೀರ್ಮಾನ ತೆಗೆದುಕೊಂಡಿದ್ದಾರೆ. ಸಾಮಾನ್ಯವಾಗಿ ಯೂನಿವರ್ಸಿಟಿಯಲ್ಲಿ ಸ್ಕಾಲರ್‌ಷಿಪ್‌ಗಾಗಿ ಪ್ರೊವೈಡ್ ಮಾಡಿರುವ 80 ಸಾವಿರ ರೂಪಾಯಿಗಳಲ್ಲಿ ಅರ್ಧಭಾಗದ ಜನರಿಗೆ ಕೊಟ್ಟಮೇಲೆ 30 ಸಾವಿರ ರೂಪಾಯಿ ಉಳಿಯಬಹುದು. ಇಂಡಿಯಾ ಸರ್ಕಾರದವರು ಸ್ಕಾಲರ್‌ಷಿಪ್‌ಗಾಗಿ ಹಣ ಅಲಾಟ್ ಮಾಡುವುದರಿಂದ ಸ್ವಲ್ಪ ಉಳಿಯುತ್ತದೆ. ಒಟ್ಟಿನಲ್ಲಿ 40 ಸಾವಿರ ರೂಪಾಯಿ ಉಳಿದರೆ ಹಾಸ್ಟೆಲುಗಳನ್ನು ಕಟ್ಟುವುದಕ್ಕೆ ಸಾಧ್ಯವಾಗುತ್ತದೆಯೇ? ಇಲ್ಲ. ಹಾಸ್ಟೆಲುಗಳನ್ನು ಕಟ್ಟುವುದಕ್ಕೆ ಸಾಧ್ಯವಾಗದೆ ಇರುವುದರಿಂದ ಅದನ್ನು ಏನು ಮಾಡಬೇಕೆಂಬ ವಿಷಯದಲ್ಲಿ ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ಸಮಂಜಸವಾದ ಉತ್ತರ ಕೊಟ್ಟಿರುವುದರಿಂದ ನಾನು ಹೆಚ್ಚಿಗೆ ಹೇಳಲು ಇಚ್ಛಿಸುವುದಿಲ್ಲ.

ಮತ್ತೊಂದು ವಿಷಯ ಏನೆಂದರೆ, ಈ ಹರಿಜನರ ಅಭಿವೃದ್ಧಿ ವಿಚಾರದಲ್ಲಿ ಅದರಲ್ಲೂ ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟ ವಿಷಯದಲ್ಲಿ ಸರ್ಕಾರದವರು ಯಾವ ಯಾವ ಅನುಕೂಲಗಳನ್ನು ಮಾಡಿಕೊಟ್ಟಿದ್ದಾರೆ, ಎಷ್ಟು ಮಟ್ಟಿಗೆ ಹೆಚ್ಚು ಹಣ ಒದಗಿಸಿ ಸಹಾಯ ಮಾಡಿದ್ದಾರೆ, ಎಂಬುದನ್ನು ಈ ಸಭೆಯಲ್ಲಿ ತಿಳಿಸಬೇಕೆಂಬುದಾಗಿ ನನ್ನ ಇಚ್ಛೆಯಿದೆ. ಮಿಡ್ಲ್ ಸ್ಕೂಲುಗಳಲ್ಲಿ ಹೈಸ್ಕೂಲುಗಳಲ್ಲಿ ಓದತಕ್ಕ ವಿದ್ಯಾರ್ಥಿಗಳಿಗೆ ಸ್ಕಾಲರ್‌ಷಿಪ್‌ಗಾಗಿ ಪ್ರತಿ ವರ್ಷವೂ ಕೂಡ ಸುಮಾರು 75 ಸಾವಿರ ರೂಪಾಯಿಗಳಿಗೆ ಕಡಿಮೆ ಇಲ್ಲದಂತೆ ಕೊಡುತ್ತಾ ಇದ್ದಾರೆ. ತಮಗೆ ಕೊಟ್ಟಿರತಕ್ಕ ಪುಸ್ತಕದ ಹಿನ್ನೊಂದನೆಯ ಪುಟದಲ್ಲಿ ನೋಡಿದರೆ 1947ನೇ ಇಸವಿಯಿಂದ 1953ರ ವರೆಗೂ ಈ ಮೊಬಲಗು 45 ಸಾವಿರ ರೂಪಾಯಿಗಳಿಂದ 78 ಸಾವಿರ ರೂಪಾಯಿಗಳಿಗೆ ಏರಿದೆ. ಪ್ರತಿ ವರ್ಷವೂ ಕೂಡ ಸ್ಕಾಲರ್‌ಷಿಪ್ ಮೊಬಲಗು ಜಾಸ್ತಿ ಆಗುತ್ತಾ ಇದೆ. 1953 ರಲ್ಲಿ 78 ಸಾವಿರ ರೂಪಾಯಿಗಳನ್ನು ಬಡ್ಜೆಟ್‌ನಲ್ಲಿ ಒದಗಿಸಲಾಗಿದೆ. ಈ ಸಾರಿಯೂ ಕೂಡ ಅದಕ್ಕಿಂತ ಕಡಿಮೆ ಏನೂ ಒದಗಿಸಿಲ್ಲ. ಅದೂ ಅಲ್ಲದೆ ಹರಿಜನ ವಿದ್ಯಾರ್ಥಿಗಳಿಗೆ ಮೈಸೂರು ಸಂಸ್ಥಾನದಲ್ಲಿ ಸುಮಾರು 60-65 ಹಾಸ್ಟೆಲುಗಳು ಇವೆ. Aided Hostels, ಸರ್ಕಾರಿ ಹಾಸ್ಟೆಲುಗಳು ಮತ್ತು ಯೂನಿವರ್ಸಿಟಿ ಹಾಸ್ಟೆಲುಗಳು ಇವೆಲ್ಲಾ ಇವೆ. ಈ ಹಾಸ್ಟೆಲುಗಳನ್ನು maintain ಮಾಡುವುದಕ್ಕೆ ಬೇಕಾದಷ್ಟು ರೂಪಾಯಿಗಳನ್ನು ಸರ್ಕಾರದವರು ಖರ್ಚುಮಾಡುತ್ತಾ ಇದ್ದಾರೆ. Maintenance Charges ಮತ್ತು Recurring Expenditure ಈ ಬಾಬುಗಳಿಗಾಗಿ ಹಾಸ್ಟೆಲುಗಳಿಗೆ ಕೊಡತಕ್ಕ ಹಣದ ಲೆಕ್ಕಾಚಾರ ಹಾಕಿದರೆ ಪ್ರತಿಯೊಬ್ಬ ವಿದ್ಯಾರ್ಥಿಗೂ ಕೂಡ Aided Hostel ನಲ್ಲಿ 12 ರೂಪಾಯಿ, ಸರ್ಕಾರಿ ಹಾಸ್ಟೆಲಿನಲ್ಲಿ 6 ರೂಪಾಯಿ ಕೊಡುತ್ತಾ ಇದ್ದಾರೆ. ಒಟ್ಟಿನಲ್ಲಿ ಹೇಳುವುದಾದರೆ ಸರ್ಕಾರಿ ಹಾಸ್ಟೆಲುಗಳಲ್ಲಿ ಸರ್ಕಾರದವರು ಅವರಿಗೆ ಊಟ, ಬಟ್ಟೆ, ಪುಸ್ತಕ, ಇವೆಲ್ಲವನ್ನು ಕೂಡ ಉಚಿತವಾಗಿ ಕೊಡುತ್ತಾ ಇದ್ದಾರೆ.

ಶ್ರೀ ಬಿ. ರಾಚಯ್ಯ.—ತಾವು ಕೊಡುತ್ತಾ ಇರುವ 6 ರೂಪಾಯಿಗಳು ಊಟಕ್ಕೇ ಸಾಲುವುದಿಲ್ಲ 1913ನೆಯ ಇಸವಿಯಲ್ಲಿ ಮುಂಜೂರಾದ ಆ ಮೊಬಲಗನ್ನೇ ಇನ್ನೂ ಮುಂದುವರಿಸಿಕೊಂಡು ಬರುತ್ತಾ ಇದ್ದೀರಿ. Free Boarding Home ಇದೆ ಎಂದು ಹೇಳಿ ಬಂದ ವಿದ್ಯಾ

(ಶ್ರೀ ಬಿ. ರಾಚಯ್ಯ.)

ರ್ಥಿಗಳು ಅನೇಕರು ಹೊಟ್ಟೆಗೆ ಹಿಟ್ಟು ಇಲ್ಲದೆ ವಾಪಸು ಹೋಗುತ್ತಾ ಇದ್ದಾರೆ.

ಶ್ರೀ ಟಿ. ಚನ್ನಯ್ಯ.—ಶ್ರೀಮಾನ್ ರಾಚಯ್ಯನವರು ಹೇಳಿದ ವಿಷಯ ಅರ್ಥವಾಯಿತು. ಸರ್ಕಾರಿ ಹಾಸ್ಟೆಲುಗಳಲ್ಲಿ ಓದತಕ್ಕ ವಿದ್ಯಾರ್ಥಿಗಳ ಕಡೆಯಿಂದಾಗಲಿ ಅಥವಾ ಅವುಗಳನ್ನು ನಡೆಸತಕ್ಕವರ ಕಡೆಯಿಂದಾಗಲಿ ಅಥವಾ ಇಲಾಖಾ ಮುಖ್ಯಾಧಿಕಾರಿಗಳಿಂದಾಗಲಿ ಈಗ ಬೋರ್ಡರುಗಳಿಗೆ ಖರ್ಚು ಮಾಡುವುದಕ್ಕೆ ಹಣ ಒದಗಿಸಿರುವುದು ಸಾಲದು ಎಂಬ ವಿಷಯ ಸರ್ಕಾರದವರ ಗಮನಕ್ಕೆ ಬಂದ ಪಕ್ಷದಲ್ಲಿ ಅದನ್ನು ಸರ್ಕಾರದವರು ಧಾರಳವಾಗಿ ಪರಿಶೀಲನೆ ಮಾಡುತ್ತೇವೆ.

ಇಷ್ಟೆ ಅಲ್ಲ. ಮೊದಲೇ ತಿಳಿಸಿದಹಾಗೆ, ಡಿಪ್ರೆಸ್ಡ್ ಕ್ಲಾಸ್ ಹಾಸ್ಟೆಲುಗಳು 11 ಇವೆ. ಇವುಗಳಿಗೆ ಪ್ರತಿ ವರ್ಷವೂ 1 ಲಕ್ಷ ರೂಪಾಯಿಗಳಿಗೆ ಮೇಲ್ಪಟ್ಟು ಖರ್ಚು ಮಾಡುತ್ತಾ ಇದ್ದಾರೆ. ಮತ್ತು ಗ್ರಾಂಟ್ ಇನ್ ಏಡ್ ಹಾಸ್ಟೆಲುಗಳಿಗೆ 67-68 ಸಾವಿರ ರೂಪಾಯಿಗಳಿದ್ದದ್ದು ಈಗ 1,90,976 ರೂಪಾಯಿಗಳವರೆಗೂ ಖರ್ಚು ಮಾಡುತ್ತಾ ಇದ್ದೇವೆ. ಈ ರೀತಿ ವಿದ್ಯಾಭ್ಯಾಸಕ್ಕೆ ಸಂಬಂಧ ಪಟ್ಟ ವಿಷಯದಲ್ಲಿ ಅದರಲ್ಲೂ ಈ ಹಾಸ್ಟೆಲುಗಳಿಗಾಗಿ ಮತ್ತು ವಿದ್ಯಾರ್ಥಿವೇತನಗಳಿಗಾಗಿ ಎಷ್ಟು ಮಟ್ಟಿಗೆ ಸರ್ಕಾರದವರು ಸಹಾಯ ಮಾಡುತ್ತಾ ಇದ್ದಾರೆ ಎಂಬುದನ್ನು ಈ ಪುಸ್ತಕದಲ್ಲೇ ಕೊಟ್ಟಿದ್ದಾರೆ, ತಾವು ತಿಳಿದುಕೊಳ್ಳಬಹುದು.

ಮತ್ತೊಂದು ಏನೆಂದರೆ, ಹರಿಜನರಿಗೆ ಈಗಾಗಲೇ ತಿಳಿಸಿದಹಾಗೆ ಏಳು ಲಕ್ಷ ಚಿಲ್ಲರೆ ರೂಪಾಯಿಗಳನ್ನು ಸರ್ಕಾರದವರು ಪಾಲಿಸಿ ಕಮಿಟಿಯ ಒತಾಯದ ಮೇಲೆ ಹಾಸ್ಟೆಲುಗಳನ್ನು ಕಟ್ಟಿಸಲಿಕ್ಕೆ ಒದಗಿಸಿದ್ದಾರೆ. ಹರಿಜನ ವಿದ್ಯಾರ್ಥಿಗಳಿಗೆ ಪ್ರೈಮರಿ ಸ್ಕೂಲಿನಲ್ಲಿ ಓದತಕ್ಕವರಿಗೆ ಸ್ವಲ್ಪ ಹಣ ಒದಗಿಸಿ ಸ್ಲೇಟು, ಪುಸ್ತಕ, ಮುಂತಾದುವುಗಳನ್ನು ಕೊಂಡುಕೊಳ್ಳಲಿಕ್ಕೂ ಕೂಡ ಸಹಾಯ ಮಾಡಲಾಗಿದೆ. ಅಷ್ಟೇ ಅಲ್ಲ, ಹರಿಜನ ವಿದ್ಯಾರ್ಥಿಗಳು ಯೂನಿವರ್ಸಿಟಿಯಲ್ಲಿ ಓದತಕ್ಕವರಾಗಲಿ, ಇತರ ಸ್ಕೂಲುಗಳಲ್ಲಿ ಓದತಕ್ಕವರಾಗಲಿ ತಮಗೆಲ್ಲರಿಗೂ ಗೊತ್ತಿರುವಹಾಗೆ ಅವರಿಗೆ tuition fee ಮತ್ತು examination fee ಇಲ್ಲ, ಉಚಿತ. ಅವರಿಂದ ಫೀಜು ವಸೂಲು ಮಾಡುವುದಿಲ್ಲ. ಅಲ್ಲೂಕೂಡ ರಿಯಾಯಿತಿ ತೋರಿಸಿದ್ದಾರೆ. ಯೂನಿವರ್ಸಿಟಿ ಸ್ಕಾಲರ್‌ಷಿಪ್ ಕೂಡ 1947 ರಲ್ಲಿ 28 ಸಾವಿರ ರೂಪಾಯಿಗಳು ಇದ್ದದ್ದು ಈಗ 80 ಸಾವಿರ ರೂಪಾಯಿ ಆಗಿದೆ. ಇದರಲ್ಲಿ ಸ್ವಲ್ಪಭಾಗದ ಹಣ ಉಳಿದಿದೆ, ಎಂದರೆ, ಇಂಡಿಯಾ ಸರ್ಕಾರದವರು ಕೊಡುವ ಅಷ್ಟು ಹಣ ಉಳಿಯುತ್ತಾ ಇದೆ. ಒಟ್ಟಿನಲ್ಲಿ ನಾನು ಹೇಳುವುದು ಏನೆಂದರೆ, ಅನೇಕ ಜನ ಸದಸ್ಯರು ಹರಿಜನರಿಗೆ ಸರ್ಕಾರದವರು ಕೊಡುತ್ತಾ ಇರತಕ್ಕ ಸಹಾಯ ಸಾಲದು ಮತ್ತು ಅವರಿಗೆ ಸಾಕಾದಷ್ಟು ಹಣ ಒದಗಿಸಿಲ್ಲ ಎಂದು ಹೇಳಿದ್ದಾರೆ. ಮತ್ತೆ ಕೆಲವರು ಈ ನಮ್ಮ ಕಾಂಗ್ರೆಸ್ ಸರ್ಕಾರ ಬಂದನಂತರ ಹರಿಜನರ ಅಭಿವೃದ್ಧಿಯ ವಿಚಾರದಲ್ಲಿ ಹೆಚ್ಚಿನ ಕೆಲಸ ಆಗುತ್ತಿಲ್ಲ, ಹಿಂದೆ ಕಾಂಗ್ರೆಸ್ ಸರ್ಕಾರ ಬರುವುದಕ್ಕೆ ಮುಂಚೆ ಅವರು ಅನೇಕ ರೀತಿಯಲ್ಲಿ ಸಹಾಯ ಮಾಡುತ್ತಿದ್ದರು ಎಂದು ಹೇಳಿದ್ದಾರೆ. ಶ್ರೀಮಾನ್ ಸಿ. ಟಿ. ಹನುಮಂತಯ್ಯನವರೂ ಕೂಡ ಈ ವಿಷಯವನ್ನು ಪುನರ್ವಿಚಾರ ಮಾಡಿದ್ದಾರೆ.

ಅಧ್ಯಕ್ಷರು.—ಆಗ ಎಷ್ಟಿತ್ತೋ ಅಷ್ಟೇ ಇದೆ, ಜಾಸ್ತಿ ಆಗಿಲ್ಲ ಎಂದು ಹೇಳಿದರು.

ಶ್ರೀ ಟಿ. ಚನ್ನಯ್ಯ.—ಹೇಗಾದರೂ ಅರ್ಥ ಒಂದೇ. ಸುಮಾರು 20-25 ವರ್ಷಗಳಿಂದ ಹರಿಜನರಿಗೆ ಯಾವ ರೀತಿ ಸರ್ಕಾರದವರು ಸಹಾಯ ಮಾಡುತ್ತಾ ಇದ್ದಾರೆ, ಯಾವರೀತಿ ಅನುಕೂಲಗಳನ್ನು ಮಾಡಿ ಕೊಟ್ಟಿದ್ದಾರೆ ಎಂಬುದನ್ನೂ ಮತ್ತು ಈಗ ಏನುಮಾಡುತ್ತಾ ಇದ್ದಾರೆ ಎಂಬುದನ್ನೂ ಹೋಲಿಕೆಮಾಡಿ ನೋಡಿದರೆ ಈ ದಿವಸ ಈ ಮಾನ್ಯ ಸಭೆಯಲ್ಲಿರತಕ್ಕ ಮಾನ್ಯ ಸದಸ್ಯರನೇಕರಿಗೆ ಗೊತ್ತಿದೆ. ಅದನ್ನು ಹೆಚ್ಚಿಗೆ ಹೇಳಬೇಕಾದದ್ದು ಅನಾವಶ್ಯಕ—ಒಂದಕ್ಕೆ 10ರಷ್ಟು 15ರಷ್ಟು ಜಾಸ್ತಿಯಾಗಿದೆಯೇ ಹೊರತು ಕಡಿಮೆಯಾಗಿಲ್ಲ. ಹಿಂದೆ ಸಾಕಾದಷ್ಟು ಹಣ ಇಲ್ಲದೆ ಇದ್ದುದರ ದೆಶೆಯಿಂದ ಇಷ್ಟೊಂದು ಒದಗಿಸಿರಲಿಲ್ಲ ಮತ್ತು ಹರಿಜನರ ಕೋಮಿನಲ್ಲೂ ಕೂಡ ಜನ ಜಾಗೃತಿ ಹೊಂದದೆ, ಅನುಕೂಲ ಪಡೆದುಕೊಳ್ಳಬೇಕು ಎಂಬ ಉತ್ಸಾಹವೂ ಕೂಡ ಕಂಡುಬರಲಿಲ್ಲ. ಆದ್ದರಿಂದ ಅದು ಕಡಿಮೆಯಾಗಿತ್ತು. ಈಗ ಕೇಳತಕ್ಕವರ ಮತ್ತು ಸಹಾಯವನ್ನು ಹೊಂದತಕ್ಕವರ ಸಂಖ್ಯೆ ಜಾಸ್ತಿ ಆಗಿದೆ. ಅದಕ್ಕೆ ಸರ್ಕಾರದವರು ಸಾಧ್ಯವಾದಷ್ಟು ಮಟ್ಟಿಗೂ ಹಣ ಒದಗಿಸಿ ಖರ್ಚು ಮಾಡುತ್ತಾ ಇದ್ದಾರೆ. ಆ ವಿವರಗಳೆಲ್ಲಾ ಮಾನ್ಯ ಸದಸ್ಯರಿಗೆ ತೆನ್ನಾಗಿ ಗೊತ್ತಿದೆ. ಮಾನ್ಯ ಸದಸ್ಯರು ಶ್ರೀಮಾನ್ ರಾಚಯ್ಯನವರು 'ಇವರಿಗಾಗಿ ಮೀಸಲಾಗಿಟ್ಟಿರುವ ಹಣ ಖರ್ಚಾಗದೆ ಇದ್ದರೆ ಡಿಪ್ರೆಸ್ಡ್‌ಕ್ಲಾಸ್ ಫಂಡಿಗೆ ಜಮಾ ಮಾಡಿಸಬೇಕೆಂದು ಡಿಪ್ರೆಸ್ಡ್‌ಕ್ಲಾಸ್ ಕಮೀಷನರು ಸಲಹೆ ಕೊಟ್ಟಿದ್ದಾರೆ, ಅದನ್ನು implement ಮಾಡಿಲ್ಲ' ಎಂದು ಹೇಳಿದರು. ಸರ್ಕಾರದವರು ಇದರ ವಿಷಯದಲ್ಲಿ ಒಪ್ಪಿಗೆ ಕೊಟ್ಟಿದ್ದಾರೆ. ಅಮೀಲಯೋರೇಷನ್ ಗ್ರಾಂಟ್ ಎಷ್ಟು ಒದಗಿಸುತ್ತೇವೆಯೋ ಅಷ್ಟು ಹಣ ಖರ್ಚಾಗದೆ ಉಳಿತಾಯವಾದರೆ ಖಂಡಿತವಾಗಿಯೂ ಅಮೀಲಿಯೋರೇಷನ್ ಫಂಡಿಗೆ ಸೇರಿಸಬೇಕೆಂಬುದಾಗಿ ಒಪ್ಪಿಕೊಂಡಿದ್ದೇವೆ. ಆದರೆ ಪ್ರತಿವರ್ಷವೂ ಕೂಡ ವರ್ಷದ ಆಖ್ಯಿರಿನೊಳಗೆ ಎಲ್ಲಾ ಹಣ ಖರ್ಚಾಗುತ್ತಾ ಇರುವುದರಿಂದ ಆ ಫಂಡಿಗೆ ಸೇರಿಸಲಿಕ್ಕೆ ಅವಕಾಶವಾಗಲಿಲ್ಲ.

ಶ್ರೀ ಕೆ. ಪ್ರಭಾಕರ್.—Removal of untouchabilityಗೆ ಎಷ್ಟು ಹಣ ಕೊಡುತ್ತಾರೆಯೋ ಅಷ್ಟನ್ನೂ ಕೂಡ ಮೈಸೂರು ಸರ್ಕಾರದವರು ಖರ್ಚು ಮಾಡಬೇಕು. ಆ ದುಡ್ಡು ಲ್ಯಾಪ್ಸ್ ಆಗುವ ಸಂದರ್ಭದಲ್ಲಿ ಅದನ್ನು ಅಮೀಲಿಯೋರೇಷನ್ ಫಂಡಿಗೆ ಹಾಕುತ್ತೇವೆ ಎಂದರೆ ಅದಕ್ಕೆ ಇಂಡಿಯಾ ಸರ್ಕಾರದವರು ಒಪ್ಪುವುದಿಲ್ಲ. ಈ ನಲ ಆ ರೀತಿ ಬಹಳ ಹಣ ಲ್ಯಾಪ್ಸ್ ಆಗಿರುವುದು ಶೋಚನೀಯವಲ್ಲವೇ ?

ಶ್ರೀ ಟಿ. ಚನ್ನಯ್ಯ.—ಇಂಡಿಯಾ ಸರ್ಕಾರದವರು ವರ್ಷದ ಆಖ್ಯಿರಿನಲ್ಲಿ 3-4 ತಿಂಗಳು ಇದ್ದಹಾಗೆ ಹಣ ಒದಗಿಸಿದ ಪಕ್ಷದಲ್ಲಿ ಅಷ್ಟನ್ನೂ ಜಾಗ್ರತೆಯಾಗಿ ಖರ್ಚು ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ; ಸುಮ್ಮನೆ ಒಂದು ಊಹೆಯಮೇಲೆ ಲೆಕ್ಕಕೊಟ್ಟ ಖರ್ಚಾಯಿತು ಎಂದು ಮಾಡಬೇಕೇ ಹೊರತು ನಿಜವಾಗಿಯೂ ಖರ್ಚುಮಾಡಲಿಕ್ಕೆ ಬಹಳ ಕಷ್ಟವಾಗುತ್ತದೆ; ಅಲ್ಪಸ್ವಲ್ಪ ಹಣ ಉಳಿಯತ್ತದೆ; ಅದು ಲ್ಯಾಪ್ಸ್ ಆಗಲೇ ಬೇಕಾಗುತ್ತದೆ, ಏನೂ ಮಾಡುವುದಕ್ಕೆ ಸಾಧ್ಯವಿಲ್ಲ.

ಶ್ರೀ ಕೆ. ಪ್ರಭಾಕರ್.—ಸರ್ಕಾರದವರು ಪ್ರಪೋಸಲ್ ಕಳುಹಿಸಿದ್ದು ತಡವಾದದ್ದರಿಂದ ಅದು ತಮ್ಮ ಜವಾಬ್ದಾರಿ ಅಲ್ಲವೇ ?

ಶ್ರೀ ಟಿ. ಚನ್ನಯ್ಯ.—ಪ್ರಪೋಸಲ್ಸ್ ಮುಂಚೆಯೇ ಕಳುಹಿಸಿದ್ದೆವು; ಆದರೆ ಅಲ್ಲಿಂದ ಬರುವುದಕ್ಕೆ ನಿಧಾನ

ವಾಗಿದೆ. ನಾವೇನೂ ನಿಧಾನ ಮಾಡಿಲ್ಲ. ಶ್ರೀಮಾನ್ ಸಿ. ಟಿ. ಹನುಮಂತಯ್ಯನವರು ಡಿಪ್ರೆಸ್ಡ್ ಕ್ಲಾಸ್ ಅಮೀಲಿಯೋರೇಷನ್ ಗ್ರಾಂಟ್‌ನಿಂದ ಮನೆಕಟ್ಟಿಕೊಳ್ಳಲಕ್ಕೆ ಸುಮಾರು 300 ರೂಪಾಯಿ ಕೊಡುತ್ತ ಇರುವುದು ಸರಿಯಾದ ರೀತಿಯಲ್ಲಿ ಖರ್ಚಾಗುತ್ತಾ ಇಲ್ಲ; ಅದು ಅವರಿಗೆ ತಲುಪುತ್ತಾ ಇಲ್ಲ; ಬಹುಭಾಗದ ಹಣ ಮಧ್ಯದಲ್ಲೇ ಖರ್ಚಾಗುತ್ತಾ ಇದೆ ಎಂದು ಹೇಳಿದರು.

ಆದರೆ ಕೆಲವು ಸಂದರ್ಭಗಳಲ್ಲಿ ಹಾಗಾಗತಕ್ಕದ್ದು ವಾಸ್ತವ. ನಾವೂ ಕೂಡ ಅನೇಕ ಸಂದರ್ಭಗಳಲ್ಲಿ ಕೆಲವು ಜಿಲ್ಲೆಗಳಿಗೆ ಪ್ರಯಾಣ ಬೆಳೆಸಿದಾಗ ಅನೇಕರು ತಿಳಿಸಿದ್ದಾರೆ. ಆದರೆ ಅದನ್ನು ತಡೆಗಟ್ಟಲು ಮಾನ್ಯ ಸದಸ್ಯರು ಆಯಾ ತಾಲ್ಲೂಕುಗಳಲ್ಲಿ ಈ ತರಹ ನಡೆಯುವುದನ್ನು ಅಧಿಕಾರಿಗಳಿಗೆ ತಿಳಿಸಿದರೆ ಅವರು ಹೋಗಿ ಖುದ್ದಾಗಿ ನೋಡಿ ವಿಮರ್ಶೆಮಾಡಿ ತಿಳಿದುಕೊಂಡು ಸರ್ಕಾರದ ಗಮನಕ್ಕೆ ತಂದರೆ ಸಂಬಂಧಪಟ್ಟವರ ಮೇಲೆ ತಕ್ಕ ಕಾರ್ಯಕ್ರಮ ತೆಗೆದುಕೊಂಡು ಶಿಕ್ಷೆಮಾಡ ಬಹುದು. ಗಮನಕ್ಕೆ ತರದೆಹೋದರೆ ಕ್ರಮಕ್ಕೆಗೊಳ್ಳುವುದಕ್ಕೆ ಕಷ್ಟವಾಗುತ್ತದೆ. ಎಲ್ಲವನ್ನೂ ಕಾನೂನು ಪ್ರಕಾರ ಮಾಡಬೇಕೇ ಹೊರತು ಅಧಿಕಾರವಿದೆಯೆಂದು ಆರ್ಬಿಟ್ರೇರಿಯಾಗಿ ಅದನ್ನು ಚಲಾಯಿಸುವುದಕ್ಕಾಗುವುದಿಲ್ಲ; ಹಾಗೆ ಮಾಡಲು ಕಾನೂನಿನ ಪ್ರತಿಬಂಧಕ ವಿದೆ. ಕೆಲವು ಕಡೆ ಗ್ರಾಮಾಂತರಗಳಲ್ಲಿ ಹರಿಜನರು ಗೋಡೆ ಹಾಕಿ ತಾಲ್ಲೂಕು ಅಮಲ್ದಾರರಿಗೆ ಅಥವಾ ಸಂಬಂಧಪಟ್ಟ ಅಧಿಕಾರಿಗಳಿಗೆ ಅರ್ಜಿ ಹಾಕಿ ಬಾಗಿಲು ಕಿಟಿಕಿ ಮತ್ತು ಬೇಕಾದ ಸಾಮಾನುಗಳನ್ನು ಕೊಡಬೇಕೆಂದು ಕೇಳಿಕೊಳ್ಳುತ್ತಾರೆ. ಆದರೆ ಏಕ್‌ದಂ ಗೋಡೆ ಕಟ್ಟುತ್ತಲೇ ಮನೆ ಕಟ್ಟಿದೆಯೆಂದು ಅರ್ಜಿ ಹಾಕುತ್ತಾರೆ. ಅಮಲ್ದಾರರು 300 ರೂಪಾಯಿಗಳನ್ನು ಒಂದೇಸಲ ಪೂರ್ಣವಾಗಿ ಕೊಡುವುದಿಲ್ಲ. ಮೂರು ಅಥವಾ ನಾಲ್ಕು ಕಂತುಗಳಲ್ಲಿ ಒಂದು ಸಲಕ್ಕೆ ಸುಮಾರು 100 ರೂಪಾಯಿಗಳಂತೆ ಪಾವತಿಮಾಡುತ್ತಾರೆ; ಒಂದೇಸಲ ಕೊಟ್ಟರೆ ಖರ್ಚುಮಾಡಿ ಬಿಡುತ್ತಾರೆ, ಮನೆ ಕಟ್ಟುವುದಿಲ್ಲ, ಎಂದು ಕೆಲಸ ಮುಂದುವರಿದ ಹಾಗೆಲ್ಲಾ ನೋಡಿ ಹಣ ಕೊಡುತ್ತಾರೆ. ಸಾಮಾನ್ಯವಾಗಿ 11 ಸಾವಿರ ರೂಪಾಯಿ ಅಮೀಲಿಯೋರೇಷನ್ ಗ್ರಾಂಟನ್ನು ಹಂಚುತ್ತಾರೆ. ಅದಕ್ಕೆ 100-200 ಅರ್ಜಿಗಳು ಬರುತ್ತವೆ. ಎಲ್ಲರೂ ಅರ್ಜಿ ಹಾಕುತ್ತಾರೆ. ಮೊದಲು ಎಲ್ಲರಿಗೂ 100 ರೂಪಾಯಿಗಳನ್ನು ಕೊಡುತ್ತಾರೆ. ಹೆಚ್ಚು ಜನರಿಗೆ ಅವಕಾಶ ಕೊಡುವುದಕ್ಕಾಗಿ ಹಾಗೆ ಕಡಿಮೆ ಹಣ ಪಾವತಿ ಮಾಡುತ್ತಾರೆ. ಮುಂದಿನಸಲ ಬಾಕಿಯಾದುದನ್ನು ಕೊಡ ಬಹುದೆಂದು ಆ ರೀತಿ ಮಾಡಬಹುದು. ಈ ವರ್ಷ ಸ್ವಲ್ಪಕೊಟ್ಟು ಸಾಲದೇ ಹೋದರೆ ಬಾಕಿಯಾದುದನ್ನು ಮುಂದಿನವರ್ಷ ಕೊಡುತ್ತಾರೆ. ಹರಿಜನರನ್ನೇಕರಿಗೆ ಕಟ್ಟುವ ವಿಧಾನ ಗೊತ್ತಿಲ್ಲ. ಸಾಮಾನ್ಯವಾಗಿ ಹರಿಜನರ ಅಡ್ವೈಜರಿ ಕಮಿಟಿಗಳೇ ಅಲಾಟ್ ಮಾಡುತ್ತವೆ. ಒಟ್ಟು ಕೊಡುವ 300 ರೂಪಾಯಿಗಳು ಕೈಗೆ ಬರುವುದಿಲ್ಲವೆಂದು ಅನೇಕ ದೂರುಗಳು ಬಂದಿವೆ. ಮಧ್ಯದಲ್ಲಿ ಕೆಲವು ಅಧಿಕಾರಿಗಳಿಗೆ ಮತ್ತು ಇತರರಿಗೆ ಕೊಡಲು 1/3 ಭಾಗ ಖರ್ಚಾಗುತ್ತದೆ, ಪೂರ್ಣವಾಗಿ ಸಿಕ್ಕುವುದಿಲ್ಲ ಎಂದು ಹೇಳುವುದನ್ನು ಕೇಳಿದ್ದೇವೆ. ಹಾಗೆ ಗಮನಕ್ಕೆ ಬಂದಿರುವ ಕಡೆ ಸಂಬಂಧಪಟ್ಟ ಅಧಿಕಾರಿಗಳಿಂದ ವರದಿ ಬಂದರೆ ತಪ್ಪಿಸ್ಥರ ಮೇಲೆ ಕ್ರಮ ತೆಗೆದುಕೊಂಡು ಶಿಕ್ಷೆ ಮಾಡುತ್ತೇವೆ. ಅನೇಕ ಸ್ಥಳಗಳಲ್ಲಿ ಮಾನ್ಯ ಸದಸ್ಯರಿಗೆ ನಡೆಯುವ ವಿಚಾರ ಗೊತ್ತಿದ್ದರೂ ನಮಗೇಕೆ ಎಂದು ಅಧಿಕಾರಿಗಳಿಗೆ ತಿಳಿಸದೆ ಸುಮ್ಮನಿರುತ್ತಾರೆ. ಹೀಗಾಗಿ ಅನೇಕರಿಗೆ ಪೂರ್ಣವಾಗಿ ಹಣ ತಲಪದೆ ಮಧ್ಯದಲ್ಲಿರುವ ಸಣ್ಣಪುಟ್ಟ ಅಧೀನರುಗಳೂ ಮತ್ತು ಗ್ರಾಂಟು ಕೊಡಿಸಲು ಸಿಫಾರಸು ಮಾಡುವವರೂ ಕೆಲವು ಸಾರಿ ಹಣ ತಿಂದುಹಾಕುತ್ತಾರೆ. ಈ ರೀತಿ ನಡೆಯುವುದನ್ನು ಸಿ.ಐ.ಡಿ. ಕೆಲಸಮಾಡಿ ತಿಳಿದು ಕೊಂಡು ಸ್ಥಳೀಯ ಅಧಿಕಾರಿಗಳಿಗೆ ತಿಳಿಸಿದರೆ ಅವರು ವಿಚಾರಮಾಡಿ ಸರ್ಕಾರಕ್ಕೆ ವರದಿ ಮಾಡುತ್ತಾರೆ. ಅದರಮೇಲೆ ಸೂಕ್ತ ಕ್ರಮ ಕೈಗೊಳ್ಳಬಹುದು. ಹಾಗೆ ಮಾಡದಿದ್ದರೆ ಈ ಕಷ್ಟ ಬರುತ್ತದೆ. ಯಾರೋ ಕೊಡಿಸುತ್ತಾರೆಂದು ಅವರಹಿಂದೆ ಅರು ತಿಂಗಳು ತಿರುಗಿ ಎಷ್ಟೋ ಹಣ ವ್ಯರ್ಥಾ ಖರ್ಚು ಮಾಡಲು ಅವಕಾಶ ಮಾಡಿ ಕೊಳ್ಳುತ್ತಾರೆ. ಇದರಿಂದ ಕೈಗೆ ಬರುವುದು ಕಡಿಮೆ. ಆದ್ದರಿಂದ ಖಾನಗಿ ಮನುಷ್ಯರು ಯಾರು ಕೊಡಿಸುವುದಾಗಿ ಬರುತ್ತಾರೋ ಅವರನ್ನು ಮೊದಲು ದೂರ ಮಾಡಬೇಕು. ಎರಡನೆಯದಾಗಿ ಸರ್ಕಾರಿ ಅಧಿಕಾರಿಗಳು ಕೆಲವರು ಹಣ ಕೊಡುವಾಗ ಅಲ್ಪಸ್ವಲ್ಪ ಹಣವನ್ನು 20-30 ರೂಪಾಯಿಗಳವರೆಗೆ ತಿಂದು ಹಾಕುತ್ತಾರೆಂದು ದೂರುಗಳು ಬಂದಿವೆ.

ಶ್ರೀ ಎ. ಮುನಿಯಪ್ಪ (ಶಿಡ್ಲಘಟ್ಟ-ಚಿಕ್ಕಬಳ್ಳಾಪುರ—ಅನುಸೂಚಿತ ಜಾತಿಗಳು).—ಎಂಟು ವರ್ಷದ ಹಿಂದೆ ಚಿಕ್ಕಬಳ್ಳಾಪುರ ತಾಲ್ಲೂಕು ಅಕ್ಕಲಕುಡಿಕೆ ಗ್ರಾಮದಲ್ಲಿ ಪಾರ್ಟಿಗೆ 70 ರೂಪಾಯಿ ಮಾತ್ರ ಪಾವತಿ ಆಗಿದೆಯೆಂದೂ, ಗೋರಿಬಿದನೂರು ತಾಲ್ಲೂಕು ಹುದಗೂರಿನಲ್ಲಿ 9 ವರ್ಷಗಳ ಹಿಂದೆ ಪಾರ್ಟಿಗೆ 50 ರೂಪಾಯಿ ಮಾತ್ರ ತಲಪಿದೆಯೆಂದೂ ಸರ್ಕಾರದ ಗಮನಕ್ಕೆ ಹಿಂದೆಯೇ ತಂದರೂ ಪ್ರಯೋಜನವಾಗಿಲ್ಲ.

ಶ್ರೀ ಟಿ. ಚನ್ನಯ್ಯ.—ದುರುಪಯೋಗವಾಗುವುದನ್ನು ಸರ್ಕಾರ ಊಹೆ ಮಾಡುವುದು ಸಾಧ್ಯವೇ! ನೇರವಾಗಿ ನೋಡಲು ಅವಕಾಶವಿಲ್ಲ. ಮಾನ್ಯ ಸದಸ್ಯರು ಮತ್ತು ಅಡ್ವೈಜರಿ ಕಮಿಟಿ ಮೆಂಬರುಗಳು, ಇಂಥ ವಿಷಯಗಳನ್ನು ಜನ ಸಾಮಾನ್ಯರಿಂದ ತಿಳಿದು ಕೊಂಡು ಮೇಲಿನ ಅಧಿಕಾರಿಗಳಿಗೆ ತಿಳಿಸಿದರೆ, ಕಾನೂನು ಪ್ರಕಾರ ಅದು ರುಜುವಾತಾದರೆ ತಪ್ಪಿತಸ್ಥರಿಗೆ ಶಿಕ್ಷೆಮಾಡಲು ಅವಕಾಶವಾಗುತ್ತದೆ. ಆದಕ್ಕಾಗಿ ತಾವು ಸಹಾಯಕರಾಗಿ ನಿಲ್ಲಬೇಕೆಂದು ಕೋರುತ್ತೇನೆ. ಉಚಿತವಾಗಿ ಗ್ರಾಂಟು ಕೊಡುತ್ತಾರೆಂದು ಹರಿಜನರು ತಪ್ಪುದಾರಿಯಲ್ಲಿ ಹೋಗುವುದರಿಂದ ಅನಾನುಕೂಲವಾಗುತ್ತದೆ. ಮಧ್ಯಸ್ಥಗಾರರಿಗೆ ಏಕೆ ಹಣ ಕೊಡಬೇಕು? ತಾಲ್ಲೂಕು ಆಫೀಸುಗಳಿಗೆ ನೇರವಾಗಿ ಅರ್ಜಿಹಾಕಿ ಗ್ರಾಂಟನ್ನು ಕೇಳುವುದು ಒಳ್ಳೆಯದು. ಎರಡನೆಯದಾಗಿ ರೆವಿನ್ಯೂ ಇನ್‌ಸ್ಪೆಕ್ಟರಿಗಾಗಲಿ ಸ್ಪೆಷಲ್ ಆಫೀಸರಿಗಾಗಲಿ ದರಖಾನ್ತು ಗುಮಾಸ್ತೆಗೆ ಅಥವಾ ಸಣ್ಣಪುಟ್ಟ ಅಧಿಕಾರಿಗಳಿಗಾಗಲಿ ಹಣ ಏಕೆ ಕೊಡಬೇಕು? ಅದಕ್ಕೆಲ್ಲಾ ಅವರೇಕೆ ಕೊಡಬೇಕು? 300 ರೂಪಾಯಿಗಳನ್ನು ಉಚಿತವಾಗಿ ಹೇಗೂ ಕೊಡುತ್ತಾರೆ, 100 ರೂಪಾಯಿ ಹೋದರೂ ಹೋಗಲಿ ಎಂದು ಕೊಡುವುದಕ್ಕೆ ಹೋಗುವುದು ಇವರ ತಪ್ಪು. ತಪ್ಪುಮಾಡುವವರು ಇವರು.

12 NOON

ಶ್ರೀ ಆರ್. ಮುನಿಸ್ವಾಮಯ್ಯ.—ತಾಲ್ಲೂಕಾಫೀಸಿಗೆ ತಿರುಗಿ ತಿರುಗಿ ಸಾಕಾಗಿ ದುಡ್ಡು ಕೊಚ್ಚೇ ಕೊಡಬೇಕಾಗುತ್ತದೆ.

ಶ್ರೀ ಟಿ. ಚನ್ನಯ್ಯ.—300 ರೂಪಾಯಿಗಳು ಹೇಗಿದ್ದರೂ ಬರುತ್ತದೆ, 100 ರೂಪಾಯಿ ಹೋದರೂ 200 ರೂಪಾಯಿಗಳಾದರೂ ಬರಲಿ ಎಂದು ಇವರೇ ಕೊಡುವುದಕ್ಕೆ ಹೋಗುತ್ತಾರೆ. ಅದು ಇವರ ತಪ್ಪು. ಇನ್ನೂ ಒಂದು ವಿಷಯ ನನ್ನ ಗಮನಕ್ಕೆ ಬಂದಿದೆ.

(ಶ್ರೀ ಟಿ. ಚನ್ನಯ್ಯ.)

ಕೈಗಾರಿಕೆಗಳನ್ನು ಪ್ರಾರಂಭವಾಡುವುದಕ್ಕೆ ಸರ್ಕಾರದವರು ಹಣ ಒದಗಿಸಿಕೊಡಬೇಕೆಂದು ಮಾನ್ಯ ಸದಸ್ಯರು ಕೆಲವರ ಹೇಳಿದರು. ನಾವು ಕಳೆದ ವರ್ಷ ಅನೇಕ ಬಡ ಹರಿಜನರಿಗೆ ಎತ್ತುಗಳನ್ನು ಕೊಂಡುಕೊಳ್ಳುವುದಕ್ಕೆ, ಕುರಿಮಂದೆಗಳನ್ನು ಸಾಕುವುದಕ್ಕೆ ಮತ್ತು ಕೋಳಿಫಾರಂ ಇಡುವುದಕ್ಕೆಂದು, ಮತ್ತು ಇನ್ನೂ ಇತರ ಸಣ್ಣ ಕೈಗಾರಿಕೆಗಳನ್ನು ಮಾಡಿಕೊಳ್ಳುವುದಕ್ಕೆಂದು ಹಣ ಕೊಟ್ಟರೆ ಅದರಂತೆ ಅವರು ಮಾಡಬೇಡವೇ? ನಾವು ಕೊಟ್ಟ ಉದ್ದೇಶಗಳಿಗಾಗಿ ಆ ಹಣವನ್ನು ಉಪಯೋಗಿಸದೆ ಬೇರೆಬೇರೆ ಕೆಲಸಗಳಿಗೆ ಉಪಯೋಗಿಸಿಕೊಂಡಿರುವುದು ನನ್ನ ಗಮನಕ್ಕೆ ಬಂದಿದೆ. ಕೋಲಾರ ತಾಲ್ಲೂಕಿನಲ್ಲಿ. ನಾನು ನೋಡಿದ ಹಾಗೆ, ನಾವು ಹೇಳಿದಹಾಗೆ ಎತ್ತುಗಳನ್ನೂ ತೆಗೆದುಕೊಳ್ಳಲಿಲ್ಲ, ಕೋಳಿಗಳನ್ನೂ ತೆಗೆದುಕೊಳ್ಳಲಿಲ್ಲ; ಖರ್ಚುಮಾಡಿದ ಉದ್ದೇಶವೇ ಬೇರೆ. ಅದರ ಮೇಲೆ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿದ್ದೇವೆ. ನಾವು ¼ ಭಾಗವನ್ನು ಉಚಿತವಾಗಿ ಕೊಡುತ್ತಿದ್ದೇವೆ; ಉಳಿದ ¾ ಭಾಗವನ್ನು ಸಾಲದ ರೂಪವಾಗಿ ಕೊಡುತ್ತಿದ್ದೇವೆ. ಆದ್ದರಿಂದ ಕೊಟ್ಟ ಉದ್ದೇಶಕ್ಕಾಗಿ ಖರ್ಚು ಮಾಡದೆ ಬೇರೆ ರೀತಿಯಲ್ಲಿ ಖರ್ಚುಮಾಡಿಕೊಂಡಿದ್ದರೆ ಅಂಥದನ್ನು ಆಯಾ ಸ್ಥಳದ ಮಾನ್ಯ ಸದಸ್ಯರು ಕಂಡು ಹಿಡಿದು ಅವರಿಗೆ ಬುದ್ಧಿವಾದ ಹೇಳಬೇಕೇ ಹೊರತು, ನಮ್ಮಲ್ಲೇ ತಪ್ಪಿಟ್ಟುಕೊಂಡು ಅಧಿಕಾರಿಗಳನ್ನು ದೂರುವುದು ಸರಿಯಲ್ಲವೆಂದು ಹೇಳುತ್ತೇನೆ.

ಇನ್ನು ಕೆಲವು ವಿಷಯಗಳನ್ನು ಮಾನ್ಯ ಸದಸ್ಯರು ನನ್ನ ಗಮನಕ್ಕೆ ತಂದಿದ್ದಾರೆ. ಅದಕ್ಕೆಲ್ಲಾ ಉತ್ತರ ಹೇಳುವುದಕ್ಕೆ ನನಗೆ ಕಾಲಾವಕಾಶವಿಲ್ಲ.

ಶ್ರೀ ಕೆ. ಪ್ರಭಾಕರ್.—ಮಾನ್ಯ ನಟಿವರು ಹೇಳುವ ಈ ಅಭಿಪ್ರಾಯ ಸರ್ಕಾರಕ್ಕೆ ಒಳ್ಳೆಯದಲ್ಲ. ನಮ್ಮಲ್ಲೇ ತಪ್ಪಿದ್ದವೆಮೇಲೆ ಅಧಿಕಾರಿಗಳನ್ನೇನು ಮಾಡುವುದು ಎಂದು ಹೇಳಿದರು. ಈ ಮಾತು ತಪ್ಪುಮಾಡುವ ಅಧಿಕಾರಿಗಳಿಗೆ ಇನ್ನಷ್ಟು ಧೈರ್ಯಕೊಟ್ಟಂತಾಗುತ್ತದೆ.

ಶ್ರೀ ಟಿ. ಚನ್ನಯ್ಯ.—ಮುಖ್ಯವಾಗಿ ಮಾನ್ಯ ಮಿತ್ರರು ಒಂದಂಶವನ್ನು ಒತ್ತಾಯ ಮಾಡಿದರು. ಹರಿಜನರಿಗೆ ಒದಗಿಸುತ್ತಿರುವ ಹಣ ಸಾಲದು, ಇನ್ನೂ ಹೆಚ್ಚಿಗೆ ಕೊಡಬೇಕೆಂದು ಅವರು ಹೇಳಿದ ತತ್ವವನ್ನು ನಾನು ಒಪ್ಪುತ್ತೇನೆ. ಹರಿಜನರಿಗೆ ಹೆಚ್ಚುಹಣ ಒದಗಿಸಿದಷ್ಟೂ ಅವರಿಗೆ ಉಪಯೋಗವಾಗುತ್ತದೆಂಬುದನ್ನೂ ನಾನು ಒಪ್ಪುತ್ತೇನೆ. ಆದರೆ ಅಷ್ಟು ಹಣವನ್ನೂ ಈ ಸಾಲನ ನಲ್ಲೇ ಒದಗಿಸಬೇಕೆಂದು ಹೇಳಿದರೆ ಬಹಳ ಕಷ್ಟವಾಗುತ್ತದೆ. ಏಕೆಂದರೆ, ಈಗಾಗಲೇ ಡಿಫಿಸಿಟ್ ಬಡ್ಜೆಟ್ ಇದ್ದು ಹೆಚ್ಚಿಗೆ ಹಣ ಒದಗಿಸಬೇಕಾದರೆ ಎಷ್ಟು ತೊಂದರೆಯಿದೆಯೆಂಬುದು ಮಾನ್ಯ ಸದಸ್ಯರಿಗೆ ಗೊತ್ತೇಯಿದೆ. ಆದ್ದರಿಂದ ಮುಂದಿನ ಸಾಲಿನಲ್ಲಿ ಮತ್ತು ಇನ್ನೂ ಅನೇಕ ರೂಪಗಳಲ್ಲಿ ಹೆಚ್ಚಾಗಿ ಹಣವನ್ನು ಒದಗಿಸತಕ್ಕ ವ್ಯವಸ್ಥೆಯನ್ನು ಸರ್ಕಾರದವರು ಗಮನದಲ್ಲಿಟ್ಟುಕೊಂಡಿದ್ದಾರೆಂದು ನಾನು ಹೇಳಬಯಸುತ್ತೇನೆ.

ಕಡೆಯದಾಗಿ ಒಂದು ಮಾತು ಹೇಳಿ ಮುಗಿಸುತ್ತೇನೆ. ಮಾನ್ಯ ಸದಸ್ಯರು ಈ ಸಂದರ್ಭದಲ್ಲಿ ಪಂಚವಾರ್ಷಿಕ ಯೋಜನೆಯ ವಿಷಯವನ್ನೂ ಎತ್ತಿದ್ದಾರೆ. ಕಾಲಾವಕಾಶವಿಲ್ಲದ ದೆಸೆಯಿಂದ ಅದನ್ನು ಪ್ರಸ್ತಾಪ ಮಾಡಲು ಹೋಗುವುದಿಲ್ಲ. ಮುಖ್ಯವಾಗಿ ನಮ್ಮ ಹರಿಜನ ಮಿತ್ರರಲ್ಲಿ ನನ್ನ ಕೋರಿಕೆ ಇಷ್ಟೆ. ಹರಿಜನ ಕೋಮಿನವರು ಬಹಳ ಹಿಂದುಳಿದಿರುವವರು. ಆರ್ಥಿಕ ಸ್ಥಿತಿಯಲ್ಲಿ, ವಿದ್ಯಾಭ್ಯಾಸದಲ್ಲಿ, ಸಾಮಾಜಿಕಸ್ಥಿತಿಯಲ್ಲಿ ಇನ್ನೂ ಅನೇಕ ಭಾಗಗಳಲ್ಲಿ ಹಿಂದುಳಿದಿರತಕ್ಕ ವಿಷಯ ಎಲ್ಲರಿಗೂ ಗೊತ್ತೇ ಇದೆ. ಈ ಮಾನ್ಯ ಸಭೆಯೂ ಅದನ್ನು ತಿಳಿದಿದೆ. ಉತ್ತಮ ವರ್ಗದವರೂ ಮತ್ತು ಸರ್ಕಾರದವರೂ ಸಾಧ್ಯವಾದ ಪ್ರಯತ್ನಗಳನ್ನೆಲ್ಲಾ ಮಾಡಿ ಸಹಕಾರ ಕೊಟ್ಟು ಇವರನ್ನು ಮುಂದಕ್ಕೆ ತರಬೇಕೆಂದು ಸರ್ವಪ್ರಯತ್ನ ಮಾಡುತ್ತಲೂ ಇದ್ದಾರೆ. ಈ ಮಾನ್ಯ ಸಭೆಯ ಸದಸ್ಯರೂ ಕೂಡ ಆಗಾಗ್ಗೆ ಹರಿಜನರ ವಿಷಯದಲ್ಲಿ ಉದಾರವಾಗಿ ಒತ್ತಾಸೆ ಬೆಂಬಲಗಳನ್ನು ಕೊಟ್ಟು ಮಾತನಾಡಿರುವುದು ಸಂತೋಷದ ವಿಷಯ. ಆದರೂ ಕೂಡ ನಮ್ಮ ಹರಿಜನರ ಕೋಮಿನವರೂ ಸಾಮಾನ್ಯವಾಗಿ ಯಾವಾಗಲೂ ಬೇಡತಕ್ಕಂಥ ಮನೋಭಾವವನ್ನಿಟ್ಟುಕೊಂಡು ಯಾಚನೆ ಮಾಡತಕ್ಕ ನೀತಿಯನ್ನು ಅನುಸರಿಸಿಕೊಂಡು ಹೋಗುವುದನ್ನು ಕಡಿಮೆ ಮಾಡಬೇಕು. ಬುಡು ಬುಡುಕ ಕೋಮಿನವರನ್ನು ಕೇಳಿದರೆ ಅವರು ಅವೇ ತಮ್ಮ ಕಸಬು ಎನ್ನುತ್ತಾರೆ. ಅಂಥ ಮನೋಭಾವ ಹೋಗಬೇಕು.

ಶ್ರೀ ಟಿ. ಹನುಮಯ್ಯ (ಹಿರಿಯೂರು—ಅನುಸೂಚಿತ ಜಾತಿಗಳು).—ಸಾವಿರಾರು ವರ್ಷಗಳಿಂದ ನಮ್ಮ ನಹೋದರರು ನಮ್ಮ ವಿಷಯದಲ್ಲಿ ಮಾಡಿದ ತಪ್ಪಿಗೆ ಈಗ ನಾವು ಹಾಗೆ ಹೋಗುತ್ತಿದ್ದೇವೆಯೆ ಹೊರತು ನಾವು ಯಾಚನೆ ಮಾಡಬೇಕೆಂದು ಹೋಗುತ್ತಿಲ್ಲ. ಆದ್ದರಿಂದ ಯಾಚನೆ ಮಾಡುವುದಕ್ಕೆ ಹೋಗುತ್ತಿದ್ದಾರೆಂದು ನಮ್ಮ ಕೋಮಿನವರನ್ನೆಲ್ಲಾ depress ಮಾಡುವುದು ಸರಿಯಲ್ಲ.

ಶ್ರೀ ಟಿ. ಚನ್ನಯ್ಯ.—ಸರ್ಕಾರದವರು ಮಾಡುವ ಸಹಾಯದ ಜೊತೆಗೆ ನಮ್ಮ ಪ್ರಯತ್ನವೂ ಇರಬೇಕೆಂಬ ಉದ್ದೇಶದಿಂದ ನಾನು ಹೇಳುತ್ತಿದ್ದೇನೆಯೆ ಹೊರತು ಬೇರಾವಭಾವನೆಯಿಂದಲೂ ಅಲ್ಲ. ಯಾವಾಗಲೂ ಸರ್ಕಾರದ ಸಹಾಯವನ್ನೇ ಬೇಡಿಕೊಂಡಿದ್ದರೆ ನಾವು ಮುಂದಕ್ಕೆ ಬರುವುದಿಲ್ಲವೆಂದು ಹೇಳಿದೆ, ಅಷ್ಟೆ. ನಮ್ಮ ಕೋಮಿನವರ ವಿಷಯದಲ್ಲಿ ನಾನೂ ಬಹಳ ಗೌರವವನ್ನಿಟ್ಟುಕೊಂಡಿದ್ದೇನೆ. ಅವರ ಅಭಿವೃದ್ಧಿಯ ವಿಚಾರದಲ್ಲಿ ನನ್ನ ಅಭಿಲಾಷೆ ಯಾವರೀತಿಯಲ್ಲೂ ಕಡಿಮೆ ಇಲ್ಲ. ಆದ್ದರಿಂದ ನಾನು ಹೇಳಿದ್ದನ್ನು ಯಾರೂ ತಪ್ಪುತಿಳಿದುಕೊಳ್ಳಬಾರದು. ನಮ್ಮ ಕೋಮಿನವರಿಗೆ ಅವರು ಮುಂದಕ್ಕೆ ಬರಬೇಕಾದರೆ ಹೆಚ್ಚುಹೆಚ್ಚಿಗೆ ವಿದ್ಯಾಭ್ಯಾಸವಾಗಬೇಕು. ಅವರಿಗೆ ಆರ್ಥಿಕ ಸ್ವಾತಂತ್ರ್ಯ ಬರಬೇಕು. ಅವರ ಆರ್ಥಿಕಸ್ಥಿತಿ ಉತ್ತಮಗೊಳ್ಳಬೇಕು. ಅಸ್ಪೃಶ್ಯತೆಯೇ ಮುಂತಾದ ಅನೇಕ ಕುಂದುಕೊರತೆಗಳು ಅವರಿಗೆ ಅಡಚಣೆಗಳಾಗಿವೆ. ಆದರೂ ಅವೆಲ್ಲಾ ಹೋಗಬೇಕಾದರೆ ಮುಖ್ಯವಾಗಿ ನಾವು ಕಷ್ಟಪಡಬೇಕು. ಸರ್ಕಾರದ ಸಹಾಯದಿಂದ ಮಾತ್ರ ಎಲ್ಲಾ ಸರಿಹೋಗುವುದಿಲ್ಲ. ಭಗವದ್ಗೀತೆಯಲ್ಲಿ ಶ್ರೀಕೃಷ್ಣನು ಪ್ರತಿಪಾದನೆಮಾಡಿರುವಂತೆ ಪ್ರತಿಯೊಬ್ಬನೂ ಕೆಲಸ ಮಾಡಬೇಕು. ಅದರಂತೆ ಹರಿಜನರೂ ಕಷ್ಟಪಟ್ಟು ಕೆಲಸಮಾಡಿದರೆ ವ್ಯಾಪಾರದಲ್ಲೋ ವ್ಯವಸಾಯದಲ್ಲೋ ಮುಂದುವರಿಯಬಹುದೆಂದು ಹೇಳುತ್ತೇನೆ.

ಶ್ರೀ ಆರ್. ಚೆನ್ನಿಗರಾಮಯ್ಯ (ಪಾವಗಡ-ಮಧುಗಿರಿ—ಅನುಸೂಚಿತ ಜಾತಿಗಳು).—ಅವರು ಹೇಳತಕ್ಕದ್ದೆಲ್ಲಾ ಸರಿಯೇ. ಆದರೆ ಈ ನೀತಿಬೋಧೆಯೆಲ್ಲಾ ಹರಿಜನ ಕಾರ್ಪೊರೇಷನ್‌ಗಳಲ್ಲಿ ಹೇಳಿದರೆ ಚೆನ್ನಾಗಿರುತ್ತದೆ. ಇಲ್ಲಿ ನಮಗೆ ಬೇಕಾಗಿರುವುದು ಈ ನಿರ್ಣಯಕ್ಕೆ ಸಂಬಂಧಪಟ್ಟಂತೆ ಹಣವನ್ನು ಕೊಡುವುದಕ್ಕಾಗುತ್ತದೆಯೇ ಇಲ್ಲವೇ ಎಂಬುದೇ ಹೊರತು ನೀತಿಚಿಂತಾಮಣಿಯ ಬೋಧೆಗಳಲ್ಲ.

ಶ್ರೀ ಟಿ. ಚನ್ನಯ್ಯ.—ನೀತಿ ಚಿಂತಾಮಣಿಯನ್ನು ನಾನು ಬೋಧಿಸುತ್ತಿಲ್ಲ. Relevant ಆಗಿ, ಈ ನಿರ್ಣಯದಲ್ಲಿ ಆಶಿಸಿರುವಂತೆ ಹರಿಜನರು ಮುಂದು ವರಿಯಬೇಕಾದರೆ ಏನುಮಾಡಬೇಕೆಂಬುದನ್ನು ಹೇಳು ತ್ತಿದ್ದೇನೆ. ಮುಖ್ಯವಾಗಿ ಅವರಿಗಾಗಿ ನಾವು ಏನೇ ಅಭಿವೃದ್ಧಿ ಕಾರ್ಯಗಳನ್ನು ಮಾಡಿದರೂ, ಅವರ ಆರ್ಥಿಕ ಸ್ಥಿತಿ ಉತ್ತಮಗೊಳ್ಳಬೇಕಾದರೆ ಅವರು ಕಷ್ಟಪಟ್ಟು ಕೆಲಸಮಾಡುವುದರಿಂದ ಸಾಧ್ಯವೇ ಹೊರತು, ಈ ರೀತಿ ಯಾವಾಗಲೂ ಸರ್ಕಾರದಮೇಲೆ ಅವಲಂಬನೆ ಮಾಡು ತ್ತಿದ್ದರೆ ಸಾಧ್ಯವಾಗುವುದಿಲ್ಲ. ಆದ್ದರಿಂದ ಸ್ವಪ್ರಯತ್ನ ಮುಖ್ಯ ಎಂಬ ಅಂಶವನ್ನು ನಾನು ಅವರಿಗೆ ಹೇಳು ತ್ತಿದ್ದೇನೆ ಅಷ್ಟೆ.

ಶ್ರೀ ಬಿ. ರಾಚಯ್ಯ.—ಹರಿಜನರು ಮಾತ್ರ ಸರ್ಕಾರ ವನ್ನು ಬೇಡುತ್ತಿಲ್ಲ. ಬೇರೆಯವರಿಗೂ ಸರ್ಕಾರದ ಹಣ ಸಲ್ಲುತ್ತಿದೆಯೆಂಬುದನ್ನು ಮಾನ್ಯಮಂತ್ರಿಗಳು ಅರಿತುಕೊಂಡಿಲ್ಲವೆಂದು ಕಾಣುತ್ತದೆ.

ಶ್ರೀ ಸಿ. ಟಿ. ಹನುಮಂತಯ್ಯ.—ಈ ನಿರ್ಣಯಕ್ಕೆ ಬೆಂಬಲ ಕೊಟ್ಟಿರತಕ್ಕ ಎಲ್ಲ ಮಹನೀಯರಿಗೂ ವಂದಿಸಿ ಸರ್ಕಾರದವರು ಕೊಟ್ಟಿರತಕ್ಕ ಭರವಸೆಯ ಮೇಲೆ ಈ ನಿರ್ಣಯವನ್ನು ಪಾಪಸು ತೆಗೆದುಕೊಳ್ಳುತ್ತೇನೆ.

The resolution was, by leave, withdrawn.

No. 2. Grant of Relief to Political Sufferers.

* ಶ್ರೀಮತಿ ಬಳ್ಳಾರಿ ಸಿದ್ದಮ್ಮ (ದಾವಣಗೆರೆ).—ಅಧ್ಯಕ್ಷರೇ,

> "ರಾಜಕೀಯದಲ್ಲಿ ನೊಂದವರಿಗೆ, ನ್ಯಾಯಾ ಸ್ಥಾನಗಳಲ್ಲಿರುವ ದಾಖಲೆಗಳನ್ನು ವಿಮರ್ಶಿಸಿ, ಪರಿಹಾರ ಕೊಡುವುದನ್ನು ತೀರ್ಮಾನಿಸಬೇಕೆಂದು ಈ ಸಭೆಯವರು ಅಭಿಪ್ರಾಯ ಪಡುತ್ತಾರೆ"

ಎಂಬ ನಿರ್ಣಯವನ್ನು ನಾನು ಕಳುಹಿಸಿದ್ದೇನೆ; ಅದನ್ನು ಈಗ ಮಂಡಿಸುತ್ತೇನೆ. ಇದರ ಉದ್ದೇಶ ಇಷ್ಟೆ. ರಾಜಕೀಯದಲ್ಲಿ ನೊಂದವರಿಗೆ ಜಮೀನು ಕೊಡಬೇಕೆಂದು ನಮ್ಮ ದೇಶದಲ್ಲಿ ಒಂದು ಕಾನೂನು ಮಾಡಿದ್ದಾರೆ. ಎಲ್ಲ ಕಡೆಯಲ್ಲೂ ಅದೇ ರೀತಿ ಕೊಟ್ಟುಕೊಂಡು ಬಂದಿದ್ದಾರೆ. ಆದರೆ ಈ ವಿಚಾರ ದಲ್ಲಿ ನಮ್ಮ ದೇಶದಲ್ಲಿ ಬಹಳ ಅನ್ಯಾಯಗಳು ನಡೆಯು ತ್ತಿವೆಯೆಂದು, ನಾನೂ ಆ ಕಮಿಟಿಯಲ್ಲಿರುವುದರಿಂದ, ಗೊತ್ತಾಗಿದೆ. ಇದನ್ನು ತಪ್ಪಿಸುವುದಕ್ಕೆ ಯಾವ ಮಾರ್ಗವೂ ಇಲ್ಲವೆಂದು ತಿಳಿದಿದ್ದೇನೆ. ಡಿಸ್ಟ್ರಿಕ್ಟಿನಲ್ಲಿ ಒಂದು ಅಪ್ಲಿಕೇಷ್ಟ ಕೊಡಬೇಕು, ಅದರಮೇರೆ ಜಮೀನು ಕೊಡಬೇಕೆಂದು ನಿಗದಿಮಾಡಿದ್ದಾರೆ. ಆದರೆ ಪ್ರತಿಯೊಂದು ಅಪ್ಲಿಕೇಷನ್ನನ್ನೂ ಅವರು ಯಾವ ರೀತಿ ಎಷ್ಟರಮಟ್ಟಿಗೆ ತ್ಯಾಗಮಾಡಿದ್ದಾರೆಂಬುದನ್ನೂ ಪರಿ ಶೀಲನೆ ಮಾಡುವುದಕ್ಕೆ ಸಾಧ್ಯವಿಲ್ಲವೆಂದು ತಿಳಿದು ಬಂದಿದೆ. ಇವುಗಳನ್ನು ಬೇಕಾದರೆ ಕೋರ್ಟು ಕಛೇರಿ ಗಳಿಂದ ತಿಳಿದುಕೊಳ್ಳಬಹುದೆಂದು ಗೊತ್ತಾಗುತ್ತದೆ. ಆದ್ದರಿಂದ ಇಂಥ ಅರ್ಜಿಗಳು ಬಂದರೆ ಮೊದಲು ಕೋರ್ಟುಗಳಲ್ಲಿ ವಿಚಾರಮಾಡಿಸಿ, ಅನಂತರ ವಿಮರ್ಶೆ ಮಾಡಿದರೆ ನ್ಯಾಯ ದೊರಕಿಸುವುದಕ್ಕೆ ಸಾಧ್ಯವಾಗುತ್ತದೆಂಬ ಉದ್ದೇಶದಿಂದ ನಾನು ಈ ನಿರ್ಣಯವನ್ನು ಸಭೆಯ ಮುಂದಿಡುತ್ತೇನೆ.

Mr. SPEAKER.—Resolution moved:

> "This Assembly is of opinion that the grant of relief to Political sufferers be decided by reviewing the record in courts."

* ಶ್ರೀ ಎಂ. ಚಿಕ್ಕಲಿಂಗಯ್ಯ (ಮಳವಳ್ಳಿ—ಅನುಸೂಚಿತ ಜಾತಿಗಳು).—ಅಧ್ಯಕ್ಷರೇ, ಇದೇ ವಿಷಯದ ಮೇಲೆ ನಾನೂ ಒಂದು ನಿರ್ಣಯವನ್ನು ಕಳುಹಿಸಿ ದ್ದೇನೆ. ಈ ನಿರ್ಣಯವನ್ನು ಸಂಪೂರ್ಣವಾಗಿ ವಿರೋ ಧಿಸಬೇಕೆಂಬುದೇ ನನ್ನ ಉದ್ದೇಶ. ಈಗ ನಿರ್ಣಯ ವನ್ನು ಮಂಡಿಸುತ್ತಾ ಶ್ರೀಮತಿ ಸಿದ್ದಮ್ಮನವರೇನೋ ಈ ವಿಚಾರದಲ್ಲಿ ಎಲ್ಲಾ ವಿಷಯಗಳನ್ನೂ ಸರಿಯಾಗಿ ಹೇಳಿದರು. ಬಹಳ ವಿಶಾಲದೃಷ್ಟಿಯಿಂದ ಅವರು ಈ ನಿರ್ಣಯವನ್ನು ತಂದಿದ್ದಾರೆಂದು ಅರ್ಥವಾಗುತ್ತದೆ. ಆದರೆ ಕಾರ್ಯತಃ ಯಾವ ರೀತಿಯಾಗುತ್ತದೆಂಬುದನ್ನು ನೋಡಬೇಕು. ರೆವಿನ್ಯೂ ಮಂತ್ರಿಗಳವರೇನೋ ಈ ವಿಷಯದಲ್ಲಿ ಬಹಳ. . . .

ಶ್ರೀ ಕಡಿದಾಳ್ ಮಂಜಪ್ಪ (ರೆವೆನ್ಯೂ ಮತ್ತು ಮರಾಮತ್ತು ಶಾಖೆಗಳ ಮಂತ್ರಿಗಳು).—ಬಹಳ ಸಹಾನುಭೂತಿಯುಳ್ಳವರಾಗಿದ್ದಾರೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಸಹಾನುಭೂತಿ ಯುಳ್ಳವರಾಗಿದ್ದಾರೆಂಬುದನ್ನು ಒಪ್ಪುತ್ತೇನೆ. ಆದರೆ ಆ ಸಹಾನುಭೂತಿ ಸರಿಯಾದ ರೀತಿಯಲ್ಲಿ ವಿನಿಯೋಗ ವಾಗುತ್ತಿಲ್ಲ. ಇದೇ ವಿಚಾರವಾಗಿ ಶ್ರೀ ನಾಗರಾಜ ಮೂರ್ತಿಯವರು ಕೂಡ ಎಲ್ಲ ವಿಷಯಗಳನ್ನು ತಿಳಿಸಿ ದ್ದಾರೆ. 30 ನೆಯ ನಿರ್ಣಯದಲ್ಲಿ ಹೇಳಿರುವಂತೆ ಇನಾಂತಿಗಳನ್ನು ರದ್ದುಮಾಡಬೇಕೆಂದು ಹೇಳಿ ಕೊಡಗಿ ಇನಾಂ, ಸರ್ವಿಸ್ ಇನಾಂ ಮುಂತಾದುವುಗಳೆಲ್ಲ ವನ್ನೂ ವಜಾಮಾಡಿ ಈಗ ಮತ್ತೊಮ್ಮೆ ಪೊಲಿಟಿಕಲ್ ಸಫರರುಗಳಿಗೆಂಬ ಹೆಸರಿನಲ್ಲಿ ಹಿಂದೆ ರಾಜ ಮಹಾ ರಾಜರುಗಳು ಕೊಡುತ್ತಿದ್ದ ರೀತಿಯಲ್ಲಿ ಇನ್ನೊಂದು ತರದ ಇನಾಂತಿಗಳನ್ನು ಈ ಪ್ರಜಾಪ್ರಭುತ್ವ ಯುಗದಲ್ಲಿ ಸ್ಥಾಪನೆಮಾಡುವುದೆಂಬ ಸರ್ಕಾರದ ಉದ್ದೇಶ ನ್ಯಾಯವೇ? ಒಂದುವೇಳೆ ಕಾಂಗ್ರೆಸ್ ಪಾರ್ಟಿ ಯವರು suffer ಮಾಡಿರಬಹುದು; ಆದರೆ, ಅವರೇಕೆ suffer ಮಾಡಿದರು? ಅವರೊಬ್ಬರೇ ಮಾಡಿದರೇ? ಇನ್ನಾರೂ ಮಾಡಲಿಲ್ಲವೇ? ಎಷ್ಟೋ ಹೆಂಗಸರು, ವಿದ್ಯಾರ್ಥಿಗಳು, ಮಿಲ್ ಕೂಲಿಗಾರರು, ಕಡೆಗೆ ಝಾಡಮಾಲಿಗಳು ಪ್ರಾಣ ಕೊಡಲಿಲ್ಲವೇ? ಅವರು ಏತಕ್ಕಾಗಿ ತ್ಯಾಗಮಾಡಿದರು? ದೇಶದ ದಾಸ್ಯತ್ವ ವನ್ನು ತಪ್ಪಿಸಿ, ಸ್ವತಂತ್ರರಾಗಿ ನಾವು ತಲೆಯೆತ್ತಿ ಪ್ರಪಂಚದಲ್ಲಿ ಬಾಳಬೇಕೆಂದಲ್ಲವೇ? ಹೀಗಿರುವಾಗ ಸ್ವರಾಜ್ಯ ಬಂತೆಂದು ಎಲ್ಲರೂ ಕೇಳಿದರೆ ಹೇಗೆ? ನಾನು ಕೆಲವು ಸನ್ನಿವೇಶಗಳನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಜೈಲಿಗೆ ಹೋಗಿದ್ದರೇನೆ, ನಿಜವಾಗಿಯೂ ಕೆಲಸಮಾಡಿದವರು ಹೋಗಿದ್ದಾರೆಂದು ಭಾವಿಸುವುದ ಕ್ಕಾಗುತ್ತದೆಯೇ? ಆಯಾ ದಿವಸ 144 ನೆಯ ಸೆಕ್ಷನ್ನನ್ನೋ ಅಥವಾ ಇನ್ನೊಂದನ್ನೋ ಉಲ್ಲಂಘಿಸಿದ ರೆಂದು ಹೇಳಿ ಸುಮ್ಮನೆ ಜೈಲಿಗೆ ಅನೇಕರು ಹೋಗಿ ದ್ದಾರೆ. ಎಳನೀರು ಕೊಚ್ಚಿದ್ದಕ್ಕೆ ಕೆಲವರು ಜೈಲಿಗೆ ಹೋಗಿದ್ದಾರೆ. ಅಂಥವರಿಗೆಲ್ಲಾ ಜಮೀನು ಕೊಡ ಬೇಕೆನ್ನುವುದು ಸರಿಯೇ? ಇಂಡಿಯಾ ಸರ್ಕಾರದವರು ಯಾವ ರೀತಿ ಮಾಡಿದ್ದಾರೆ? ಅವರು ಯಾರನ್ನಾದರೂ certify ಮಾಡಿದ್ದಾರೆಯೇ, ನಿಜವಾದ ಪೊಲಿಟಿಕಲ್ ಸಫರರುಗಳು ಎಂದು? ಆ ರೀತಿ ಏನಾದರೂ ನಿಗದಿ

(ಶ್ರೀ ಎಂ. ಚಿಕ್ಕಲಿಂಗಯ್ಯ.)

ಮಾಡಿದ್ದರೆ ನೀವೂ ಕೊಡಿ, ನಾನು ಬೇಡಪ್ಪನ್ನುವುದಿಲ್ಲ. Political Sufferer ಗಳಿಗೆ ಜಮೀನುಗಳನ್ನು ಕೊಡ ಬೇಕೆಂದು ಯಾವ ಸರ್ಕಾರಿ ಹುಕುಂ ಕೂಡ ಆಗಿಲ್ಲ. ನಾನು ಕೇಳಿರತಕ್ಕ ರೀತಿಯಲ್ಲಿ ಇಂಡಿಯಾ ಸರ್ಕಾರದವರು ಯಾವ ರೀತಿಯಲ್ಲಿ ಈ ಕೋರ್ಟು ಸರ್ಟಿಫಿಕೇಟುಗಳನ್ನು ಕೇಳಿದ್ದಾರೆಂಬುದು ನನಗೆ ಗೊತ್ತಿದೆ. ಅವರು ಕೇಳಿರತಕ್ಕದ್ದು ನಿಜವಿರಬಹುದು. ಆದರೆ ಅದು ಈ ಉದ್ದೇಶಕ್ಕಲ್ಲ. ಆದರೆ ಹಾಗೆ ಯಾರಾರು ಪೊಲಿಟಿಕಲ್ ಸಫರರ್ಸ್‌ಗಳು ಅನ್ನುವುದನ್ನು ತಾವು ಕಂಡುಹಿಡಿಯತಕ್ಕ ಬಗ್ಗೆ ನಾನೇನೂ ಬೇಡ ಎಂದು ಹೇಳುವುದಿಲ್ಲ. ಆದರೆ ಹೀಗೇನೂ ಒಂದನ್ನು ಆ ಇಂಡಿಯಾ ಸರ್ಕಾರದವರು ಆರ್ಡರ್ ಮಾಡಿಲ್ಲ. ಆದರೆ ಈ ಸ್ವಾತಂತ್ರ್ಯ ಸಂಪಾದನೆಗಾಗಿ ಅನೇಕ ಮಹನೀಯರು ಅನೇಕ ರೀತಿಯಲ್ಲಿ ತಮ್ಮ ಸಹಾನುಭೂತಿಯನ್ನು ವ್ಯಕ್ತಪಡಿಸಿಕೊಂಡು ಬಂದಿದ್ದಾರೆ.

ಇನ್ನು ಎರಡನೆಯದಾಗಿ, ಸರ್ಕಾರದವರು ಈ ದಿವಸ ಈ ಜಮೀನಾಗಳನ್ನು ಯಾರು ಯಾರು ಪೊಲಿಟಿಕಲ್ ಸಫರರ್ಸಗಳೆಂದು ಅವರಿಗೆ ಕೊಡುತ್ತಿದ್ದಾರೋ ಅಂಥ ವರ ಜಮೀನುಗಳು ಈಗ ಸರ್ಕಾರದವರಿನ್ನೂ ಅವರಿಗೆ ಸ್ಯಾಂಕ್ಷನ್ ಮಾಡುವುದಕ್ಕೇ ಇಲ್ಲ ಆಗಲೆ ಅವು ವಿಕ್ರಯಕ್ಕೆ ಸಿದ್ಧವಾಗಿರುತ್ತವೆ. ಹೀಗಾಗಿ ಈ ದಿವಸ ಹಾಸನ ಜಿಲ್ಲೆಯಲ್ಲಿ ಅನೇಕರು ತಕರಾರುಗಳನ್ನು ಹಾಕಿದ್ದಾರೆ. ಅಲ್ಲಿ ಹತ್ತು ಜನರು ಇನ್ನೂ ಆ ಸಾಗುವಳಿ ಚೀಟಿಯನ್ನು ತರುವುದಕ್ಕೇ ಇಲ್ಲ ಆಗಲೇ ಆ ಜಮೀನುಗಳನ್ನು ಮಾರಾಟ ಮಾಡಿಬಿಟ್ಟಿದ್ದಾರೆ. ಆದರೆ ತಾವು ಇತ್ತೀಚೆಗೆ ಆವಡಿ ಅಧಿವೇಶನವಾದ ತರುವಾಯ ದೇಶಾದ್ಯಂತವೂ ಸೋಷಿಯಲಿಸ್ಟಿಕ್ ಪ್ಯಾಟ್ರನ್ ಸೊಸೈಟಿಯನ್ನು ಬೇರೆ ಜಾರಿಗೆ ತರುವುದಾಗಿ ಒಂದು ಮಾತನ್ನು ಎತ್ತಿದ್ದೀರಿ. ಆದರೆ ಈ ಮಧ್ಯೆ ದೇಶದಲ್ಲಿ ಈ ದಿವಸ ಮೇಣಿ ಹಿಡಿಯತಕ್ಕವನೇ ಭೂಮಿಗೆ ಮಾಲೀಕನಾಗಬೇಕು, ಬೋನಾಫೈಡಿ ಜಮೀನ್ದಾರರಿಗೇ ಜಮೀನು ಹೋಗಬೇಕು, ಯಾರು ಕಷ್ಟಪಟ್ಟು ಜಮೀನು ಮಾಡುತ್ತಾನೋ ಅಂಥವನಿಗೆ ಜಮೀನು ಕೊಡಬೇಕು, ಆ ಜಮೀನನ್ನು ಆತನು ಬೇರೆಯವರಿಗೆ ಹರಭಾರೆ ಮಾಡಕೂಡದೆಂದು ತಾವು ತತ್ವಗಳನ್ನು ಬಾಯಲ್ಲಿ ಹೇಳುತ್ತ ಹೀಗೆಲ್ಲಾ ಆಚರಣೆಯಲ್ಲಿ ನಡೆಸುತ್ತಿರುವುದರ ಅರ್ಥವೇನೆಂಬುದೇ ನನಗೆ ಗೊತ್ತಾಗುತ್ತಿಲ್ಲ. ಈ ದಿವಸ ತಾವು ಉತ್ತಮ ವಾದಂಥ ಈಚಲು ವನ, ಕೆರೆ ಅಂಗಳ, ಇತ್ಯಾದಿ ಜಮೀನುಗಳನ್ನೆಲ್ಲಾ ಈ ಪೊಲಿಟಿಕಲ್ ಸಫರರ್ಸಗಳೆಂದು ಕೊಡುತ್ತಾ ಹೋಗುತ್ತಿದ್ದೀರಿ. ಬಡವನಿಗೆ ಜಮೀನಿಲ್ಲ ಎಂದು ಹೇಳುತ್ತಿದ್ದೀರಿ. ಈ ಪೊಲಿಟಿಕಲ್ ಸಫರರ್ಸಗಳೆಂಬ ನೆಪದಲ್ಲಿ ಅವರು ದೊಡ್ಡ ದೊಡ್ಡ ಜಮೀನ್ದಾರರಾಗಿದ್ದರೂ ಪುನಃ ಅವರಿಗೇನೇ 15-20 ಎಕರೆಗಳಂತೆ ಜಮೀನು ಕೊಡುತ್ತಾ, ಬಡವರಿಗೆ ಒಂದು-ಎರಡು ಎಕರೆ ಜಮೀನು ಸಹ ತಾವು ಉಳಿಸಿರುವುದಿಲ್ಲ. ಹೀಗೆಲ್ಲಾ ಮಾಡತಕ್ಕದ್ದು ಸರ್ಕಾರದ ನೀತಿಯಾಗಿರಬಾರದು. ಆದಕಾರಣ ನಾನೀಗ ತಾವು ಈ ನೀತಿಯನ್ನು ಅನುಸರಿಸುವುದರಿಂದ ಅನೇಕ ತೊಂದರೆಗಳಾಗುತ್ತವೆಯೆಂದು ಹೇಳದೆ ವಿಧಿಯಿಲ್ಲ.

ಇನ್ನು ಮೂರನೆಯದಾಗಿ ಆದಿಕರ್ಣಾಟಕರಿಗೆ ಈ ಜಮೀನು ಇಲ್ಲದಂಥವರಿಗೆ ಬೇರೆ ಉದ್ಯೋಗವಿಲ್ಲದಂಥ ವರಿಗೆ ವ್ಯವಸಾಯಮಾಡಲು ಒಂದೆರಡು ಎಕರೆ ಜಮೀನು ಕೊಡಿ ಎಂದು ಕೇಳಿದರೆ ಅದನ್ನು ತಾವು ಮನಸ್ಸಿಗೆ ಹಾಕಿಕೊಳ್ಳುತ್ತಿಲ್ಲ. ಎಲ್ಲ ಆದಿಕರ್ಣಾಟಕರಿಗೆ ತಾವು ಜಮೀನಿಲ್ಲವೆಂದು ಹೇಳುತ್ತಿದ್ದೀರೋ ಅಲ್ಲೇ ಈ ಪೊಲಿಟಿಕಲ್ ಸಫರರ್ಸಿಗೆ ತಾವು ಜಮೀನುಗಳನ್ನು ಕೊಡುತ್ತಿದ್ದೀರಿ. ಕಾರ್ಕಳಹಳ್ಳಿ ತಾಲ್ಲೂಕಿನಲ್ಲಿ ಈ ರೀತಿ ಮಾಡಿದ್ದಾರೆ. ಹೀಗೆ ವಿವೇಕರಹಿತವಾದ ರೀತಿಯಲ್ಲಿ ನಡೆಯುತ್ತಿರುವುದನ್ನು ಸರ್ಕಾರದವರು ಕಡ್ಡಾಯವಾದ ರೀತಿಯಲ್ಲಿ ತಡೆಗಟ್ಟಬೇಕೆಂದು ಹೇಳುತ್ತೇನೆ. ಈಗ ತಾವು ಇಲ್ಲಿಯವರೆಗೂ ಇದ್ದಂಥ ಜಹಗೀರ್‌ದಾರುಗಳನ್ನೆಲ್ಲಾ ರದ್ದುಪಡಿಸಿದ ನಂತರ ಈ ಒಂದು ವರ್ಗಕ್ಕೆ ಹೆಚ್ಚು ಹೆಚ್ಚಾಗಿ ಜಮೀನಾನುಗಳನ್ನು ಕೊಟ್ಟು ಇದನ್ನೊಂದು ರೀತಿಯಲ್ಲಿ ಈ ಪರ್ಸನಲ್ ಸರ್ವಿಸ್ ಇನಾಂ ತರಗತಿಯನ್ನು ಜಾರಿಗೆ ತರತಕ್ಕದ್ದು ಖಂಡಿತ ಸರಿಯಾದದ್ದಲ್ಲ, ಮತ್ತು ತಾವು ಹೇಳುತ್ತಿರುವ ಆ ಸೋಷಿಯಲ್ ಸರ್ವಿಸ್ ಪ್ಯಾಟ್ರನ್ಶಿಗೂ ಕೂಡ ಇದು ಬಹಳ ವಿರೋಧವಾಗುತ್ತದೆ. ಆದರೆ ತಾವೀಗ ಈ ಪೊಲಿಟಿಕಲ್ ಸಫರರ್ಸಿಗೆ ಈ ಜಮೀನುಗಳನ್ನೆಲ್ಲಾ ಹೀಗೆ ಸೂರೆ ಕೊಡುತ್ತಿರುವುದು ತಪ್ಪು. ಆದರೆ ತಾವು ಈಗ ಅವರಿಗೆ ಕೆಲವರಿಗೆ ಈ ಕೈಗಾರಿಕಾ ಸಾಲಗಳನ್ನು ಕೊಟ್ಟಿದ್ದೀರಿ. ಅದನ್ನು ನಾನು ಬೇಡ ಎಂದು ಹೇಳುವುದಿಲ್ಲ. ಹಾಗೆ ಬೇಕಾದರೆ ಸಹಾಯ ನೀಡಿ. ಆದರೆ ಹಾಗೆ ತಾವು ಇಲ್ಲಿಯವರೆಗೂ ಕೊಟ್ಟಿರತಕ್ಕ ಸಾಲದ ಬಗ್ಗೆ ಒಂದು ಪೈಸೆ ಕೂಡ ವಸೂಲಾಗಿಲ್ಲ. ಇಂಥ ನೀತಿಯನ್ನೆಲ್ಲಾ ನಾನು ಸಂಪೂರ್ಣವಾಗಿ ವಿರೋಧಿಸುತ್ತೇನೆ. ಈ ವಿಧವಾದ ನೀತಿಗಳು ಖಂಡಿತ ತರವಾದುವುಗಳಲ್ಲ. ನಾನು ಈ ನಿರ್ಣಯವನ್ನು ಸಂಪೂರ್ಣವಾಗಿ ವಿರೋಧಿಸುತ್ತೇನೆ.

ಶ್ರೀ ಬಿ. ಎಸ್. ಬೋರಣ್ಣಗೌಡ (ಬೇಲೂರು).—ಸ್ಪೀಮ್, ಈಗತಾನೇ ಶ್ರೀಮತಿ ಬಳ್ಳಾರಿ ಸಿದ್ಧಮ್ಮನವರು ಸಭೆಯ ಮುಂದೆ ಮಂಡಿಸಿರತಕ್ಕಂಥ ನಿರ್ಣಯದ ಬಗ್ಗೆ ಭಾಷಣ ಮಾಡುತ್ತ ಶ್ರೀ ಎಂ. ಚಿಕ್ಕಲಿಂಗಯ್ಯನವರು ಇದನ್ನು ವಿರೋಧಿಸಿ ಮಾತನಾಡಿದ್ದನ್ನು ನೋಡಿದರೆ ಅವರಿಗೆ ಈ ಜನತೆಯ ಕಷ್ಟ ಸುಖಗಳೇ ನೆಂಬುದು ಅಷ್ಟಾಗಿ ಗೊತ್ತಿಲ್ಲವೆಂದು ಕಾಣುತ್ತದೆ. ಆದುದರಿಂದ ಅವರು ಹೀಗೆ ಹೇಳಿದ್ದರೂ ಹೇಳಿರಬಹುದು. ಆದರೆ ಹಾಗೆಲ್ಲಾ ಹೇಳುವುದು ಸೂಕ್ತವಲ್ಲ.

ಶ್ರೀ ಎಂ. ಚಿಕ್ಕಲಿಂಗಯ್ಯ.—ನಾನು 300-400 ರೂಪಾಯಿ ಸಂಬಳ ಬಿಟ್ಟು ದೇಶಸೇವೆಗೋಸ್ಕರ ನಿಂತಿದ್ದೇನೆ.

ಶ್ರೀ ಬಿ. ಎಸ್. ಬೋರಣ್ಣಗೌಡ.—ಕಷ್ಟ ಸುಖಗಳನ್ನು ತಿಳಿಯದೆ ಇರುವವರು ಗವರ್ನ ಕೊಡಬೇಕಾಗಿಲ್ಲ. ಬಂಜೆಗೆ ಮಕ್ಕಳನ್ನು ಹೆರುವ ನುಖ ಏನುಗೊತ್ತು ಎಂದು ಒಂದು ಗಾದೆ ಹೇಳುತ್ತಾರೆ. ಬಂಜೆಯಾಗಿರುವವಳಿಗೆ ಆ ಕಷ್ಟ ಗೊತ್ತಿಲ್ಲ. ನಾನು ಹೇಳುವುದೇನೆಂದರೆ, ಯಾರು ರಾಜಕೀಯದಲ್ಲಿ ಬಿದ್ದು ತೊಂದರೆ ಅನುಭವಿಸಿ, ಕಷ್ಟಗಳನ್ನು ಅನುಭವಿಸಿ, ಜೀವನ ಮಾಡುವುದಕ್ಕೆ ಒಂದು employment ಕೂಡ ಇಲ್ಲದೆ ತೊಂದರೆಯಲ್ಲಿರುವವರಿಗೆ ಜಮೀನು ಕೊಡಬೇಕು ಎಂದು ನಮ್ಮ ಸರ್ಕಾರದಲ್ಲಾ ಮತ್ತು ಕೇಂದ್ರ ಸರ್ಕಾರದಲ್ಲಿ ನಿರ್ಧಾರ ಮಾಡಿದ್ದಾರೆ. ಜೊತೆಗೆ political sufferers ಏನಾದರೂ ತೊಂದರೆಯಲ್ಲಿರತಕ್ಕವರಿಗೆ lumpsum grant ಕೊಡಬೇಕು ಎಂದು ಕೇಂದ್ರ ಸರ್ಕಾರದಿಂದಲೂ ಬಂದಿದೆ. ಮೈನೂರು ದೇಶದಲ್ಲಿ ಸಾಹುಕಾರರಾಗಿರುವವರು, ಅಸೆಂಬ್ಲಿ ಮೆಂಬರಾಗಿರುವವರು ಅಥವಾ ದೊಡ್ಡ ದೊಡ್ಡ ಪದವಿಯಲ್ಲಿರುವವರು ಇಂಥವರಿಗೆಲ್ಲ ಕೊಡಿ ಎಂದು ಹೇಳುವುದಿಲ್ಲ. ಶ್ರೀಮತಿ ಬಳ್ಳಾರಿ ಸಿದ್ಧಮ್ಮನವರ ಅಭಿಪ್ರಾಯ ಇದಲ್ಲ. ಸ್ವಾತಂತ್ರ್ಯಕ್ಕಾಗಿ ಹೋರಾಡಿ ನೊಂದು, ಕಷ್ಟದಲ್ಲಿರತಕ್ಕವರಿಗೆ, ಜೀವನ ಮಾಡುವುದಕ್ಕೆ

ತೊಂದರೆಯಾಗಿರತಕ್ಕವರಿಗೆ, ಅಂಥವರು ಯಾರಾದರೂ ಅರ್ಜಿ ಹಾಕಿಕೊಂಡ ಪಕ್ಷದಲ್ಲಿ, ಅಂಥವರಿಗೆ ಮಾತ್ರ ಕೊಡಿ ಎಂದು ಹೇಳಿದರು. ಇವೊತ್ತು ಜಹಗೀರಿ ಹೋಯಿತು, ಜೋಡಿ ಹೋಯಿತು, ಎಲ್ಲರಿಗೂ ತೆಗೆದುಬಿಟ್ಟರಿ, ಈಗ ಪುನಃ ಜಹಗೀರಿ ಕೊಡುತ್ತೀರಿ ಎಂದು ಶ್ರೀಮಾನ್ ಚಿಕ್ಕಲಿಂಗಯ್ಯನವರು ಆಪಾದನೆ ಮಾಡಿದರು. ದುಡ್ಡು ಕೊಡುವುದಕ್ಕೆ ಶಕ್ತಿ ಇಲ್ಲದೆ ಇರುವವರು, ನಿರ್ಗತಿಕರಿಗೆ 5-10 ಎಕರೆ ಜಮೀನು ಕೊಡಿ, ಅದಕ್ಕೆ ತಕ್ಕಷ್ಟು ಕಂದಾಯ ಕೊಡುತ್ತಾರೆ ಎಂದು ಹೇಳುತ್ತೇನೆ. ಜಮೀನನ್ನು ಮುಫತ್ತಾಗಿ ಕೊಡಿ ಎಂದು ಹೇಳುತ್ತಿದ್ದೇವೆಯೇ ಹೊರತು ಕಂದಾಯವನ್ನು ಮಾಫಿ ಮಾಡಬೇಕು ಎಂದು ಹೇಳುವುದಿಲ್ಲ. ಜೀವನಕ್ಕೆ ವ್ಯವಸಾಯ ವೃತ್ತಿಯನ್ನವಲಂಬಿಸುವುದಕ್ಕಾಗಿ ಜಮೀನು ಕೊಡಿ ಎಂದು ಕೇಳುತ್ತೇವೆಯೇ ಹೊರತು ಜಹಗೀರು ಕೊಡಿ ಎಂದು ಕೇಳುವುದಿಲ್ಲ. ಈಗ ಕಷ್ಟದಲ್ಲಿರುವವರು ಕೆಲವರು ಕೆಲವರಿಂದ ಇರತಕ್ಕಂಥ ಜಮೀನನ್ನು ಮಾರಿಕೊಂಡಿದ್ದಾರೆ ಮತ್ತು ಸಾಗುವಳಿ ಚೀಟಿ ಬರುತ್ತಿದ್ದ ಹಾಗೆಯೇ ಕೊಟ್ಟುಬಿಡುತ್ತಿದ್ದಾರೆಂದು ಹೇಳಿದರು. ಇಂಥಾದ್ದು ಒಂದೆರಡು ನಿದರ್ಶನಗಳಿರಬಹುದು. ಪ್ರಪಂಚವೆಂದಮೇಲೆ ಒಳ್ಳೆಯವರೂ ಮತ್ತು ಕೆಟ್ಟವರೂ ಇದ್ದೇ ಇರುತ್ತಾರೆ. ಇದನ್ನೇ ಪ್ರಾಧಾನ್ಯವಾಗಿಟ್ಟುಕೊಂಡು ಯಾರಿಗೂ ಜಮೀನು ಕೊಡಬಾರದು ಎಂದು ಹೇಳತಕ್ಕ ವಾದವನ್ನು ಒಪ್ಪುವುದಕ್ಕೆ ಆಗುವುದಿಲ್ಲ. ಆದರೆ ನ್ಯಾಯವಾಗಿ ಇರತಕ್ಕವರು, ಜೀವನ ಮಾಡುವುದಕ್ಕೆ ತೊಂದರೆ ಇರತಕ್ಕವರು ಒಂದೆರಡು ಎಕರೆ ಜಮೀನು ಅಥವಾ ಒಂದು ಗುಂಟೆ ಜಮೀನು ಸಹ ಇಲ್ಲದೆ ಇರತಕ್ಕವರು ಜಮೀನನ್ನು ಅವಲಂಬಿಸಿಕೊಂಡಿರಬೇಕು ಎನ್ನುವ political sufferers ಯಾರಾರು ಇರುತ್ತಾರೆಯೋ ಅಂಥವರಿಗೆ ಖಂಡಿತವಾಗಿ ಜಮೀನು ಕೊಡತಕ್ಕದ್ದು ಸಾಧುವಾದದ್ದು ಮತ್ತು ನ್ಯಾಯವಾದದ್ದು. ಇದಕ್ಕೆ ಸರ್ಕಾರದವರು ಒಳ್ಳೆಯವರೆಂದು ಕಂಡುಬಂದ ಪಕ್ಷದಲ್ಲಿ ಜಮೀನು ಕೊಡುವುದು ನ್ಯಾಯವಾಗಿದೆ. ಈಗಲೂ ಕೂಡ ಅಂಥವರ ವಿಚಾರದಲ್ಲಿ ಯಾವ ಪುಕಾರೂ ಬರಕೂಡದೆಂಬುದೇ ನಮ್ಮ ಆಸೆ. ಮಾನ್ಯ ಚಿಕ್ಕಲಿಂಗಯ್ಯನವರು ಹಾನನ ಜಿಲ್ಲೆಯಲ್ಲಿ ಯಾರೋ ಇಂತಹ political sufferers ಕೊಟ್ಟಿದ್ದ ಜಮೀನನ್ನು ಮಾರಿಕೊಂಡಿದ್ದಾರೆಂದು ಹೇಳಿದರು. ನನಗೆ ಆ ವಿಚಾರ ಗೊತ್ತಿಲ್ಲ. ಮಾನ್ಯ ಮಿತ್ರರು ಹೇಳಿದರೆ ಯಾರೆಂದು ಹೇಳುತ್ತೇನೆ.

Sri S. SRINIVASA IYENGAR (T.-Narasipur).—On a point of order. ಶ್ರೀಮತಿ ಬಳ್ಳಾರಿ ಸಿದ್ದಮ್ಮನವರು ತಂದಿರುವ ನಿರ್ಣಯ political sufferers ಯಾರು ಎಂದು ಕಂಡುಹಿಡಿಯಬೇಕು ಎನ್ನುವ ವಿಷಯವೇ ವಿನಾ ರಾಜಕೀಯದಲ್ಲಿ ನೊಂದವರಿಗೆ ಜಮೀನು ಕೊಡುವ ವಿಷಯ ಅವರು ಹೇಳಲಿಲ್ಲ. Political sufferers ಯಾರು ಎನ್ನುವುದನ್ನು ಪರಿಗಣಿಸುವುದಕ್ಕೆ ಒಂದು ಕ್ವಾಲಿಫಿಕೇಷನ್ mention ಮಾಡಿದ್ದಾರೆ. ಕೋರ್ಟಿನಲ್ಲಿನ ನಡವಳಿಕೆಗಳನ್ನು ನೋಡಿ political sufferers ಯಾರೆಂದು ಕಂಡುಹಿಡಿಯಬೇಕು ಎಂದು ಹೇಳಿದ್ದಾರೆ. ರಾಜಕೀಯದಲ್ಲಿ ನೊಂದವರಿಗೆ ಜಮೀನು ಕೊಡುವುದು, ಅದನ್ನು ಮಾರುವುದು ಆ ವಿಷಯ ಈಗ ಉದ್ಭವಿಸುವುದಿಲ್ಲ. Political sufferers ಯಾರು ಎಂದು determine ಮಾಡಿ ವಿಮರ್ಶೆ ಮಾಡುವುದು ಮೊದಲನೆಯದು. ಜಮೀನು ಕೊಡುವ ವಿಷಯ ಎರಡನೆಯದು.

Mr. SPEAKER.—You are correct.

ಶ್ರೀ ಬಿ. ಎಸ್. ಜೋರಣ್ಣಗೌಡ.—ರಾಜಕೀಯದಲ್ಲಿ ನೊಂದವರಿಗೆ ಎರಡು ಕ್ವಾಲಿಫಿಕೇಷನ್ ಇದೆ. ಜೈಲು ಶಿಕ್ಷೆ ಅನುಭವಿಸುವುದು, ಕೋರ್ಟಿನಲ್ಲಿದ್ದು conviction ಅನುಭವಿಸುವುದು. ಐದು ವರ್ಷ ಶಿಕ್ಷೆ ಕೊಡಬಹುದು ಅಥವಾ ಐದು ಸಾವಿರ ರೂಪಾಯಿ ಜುಲ್ಮಾನೆ ಹಾಕಬಹುದು. ಇಂಥವರು ಯಾರಾರು ಎನ್ನುವುದನ್ನು ಕೋರ್ಟು ರಿಕಾರ್ಡುಗಳಿಂದ ತಿಳಿದುಕೊಳ್ಳಬಹುದು.

ಇವೊತ್ತು ನಾನಾಗಿದೆ ಪರಿಸ್ಥಿತಿ ಎಂಬುದನ್ನು ಮಾನ್ಯ ಮಿತ್ರರು ಹೇಳಿದರು. ಇತ್ತೀಚೆಗೆ ಕೆಲವು ದಿವಸಗಳಿಂದ ಕೆಲಸ ಮಾಡುತ್ತಾ ಇದ್ದು ನನಗೂ ಸಹ ಈ ಸೌಲಭ್ಯ ಕೊಡಿ ಎಂದು ಅನೇಕರು ಅರ್ಜಿ ಹಾಕಿಕೊಂಡಿದ್ದಾರೆ. ಅಂಥವರಿಗೆ ಖಂಡಿತವಾಗಿಯೂ ದೊರಕಕೂಡದು. ಎಷ್ಟು ಮಟ್ಟಿಗೆ ಕಷ್ಟನಷ್ಟಗಳನ್ನು ಅನುಭವಿಸಿದ್ದಾರೆ, ಎಷ್ಟು ಕೊರತೆಗೆ ಒಳಗಾಗಿದ್ದಾರೆ ಎಂಬುದನ್ನೆಲ್ಲಾ ಕೂಲಂಕಷವಾಗಿ ವಿಮರ್ಶೆ ಮಾಡಿ ಪರಿಹಾರ ಕೊಡಬೇಕೇ ವಿನಾ ಸ್ವಾರ್ಥ ಸಾಧನೆಗಾಗಿ ಯಾರಾರು ಈ ಕಾರ್ಯದಲ್ಲಿ ನಿರತರಾಗಿದ್ದಾರೋ ಅಂತಹವರಿಗೆ ಖಂಡಿತವಾಗಿಯೂ ಕೊಡಕೂಡದು ಎಂದು ಹೇಳುತ್ತೇನೆ. ಆದ್ದರಿಂದ ಸರ್ಕಾರದವರು ಇದನ್ನು ಕೂಲಂಕಷವಾಗಿ ಪರಿಶೀಲನೆ ಮಾಡಿ ಜಾಗ್ರತೆ ಒಂದು ಪಟ್ಟಿ ತರಿಸಿಕೊಂಡು ಏನೇನು ಪರಿಹಾರಗಳನ್ನು ಕೊಡುವುದು ನೂಕ್ತವೋ ಅವನ್ನೆಲ್ಲಾ ಕೊಟ್ಟು ಮತ್ತೊಂದು ಸಾರಿ ಈ ಪ್ರಶ್ನೆ ಈ ಸಭೆಯಲ್ಲಿ ಬರದಂತೆ ಶ್ರಮ ತೆಗೆದುಕೊಳ್ಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಕಡಿದಾಳ್ ಮಂಜಪ್ಪ (ರೆವಿನ್ಯೂ ಮತ್ತು ಮರಾಮತ್ತು ಶಾಖೆಗಳ ಮಂತ್ರಿಗಳು).—ಸ್ವಾಮಿ, ಶ್ರೀಮಾನ್ ಚಿಕ್ಕಲಿಂಗಯ್ಯನವರು ಅಪ್ಪಣೆ ಕೊಡಿಸಿದ ಹಾಗೆ ರಾಜಕೀಯದಲ್ಲಿ ನೊಂದವರ ವಿಚಾರದಲ್ಲಿ ನನಗೆ ಸಹಾನುಭೂತಿ ಇರತಕ್ಕದ್ದು ಸ್ವಾಭಾವಿಕ ಮತ್ತು ನಿಜ. ಸ್ವಾತಂತ್ರ್ಯಕ್ಕೆ ಹೋರಾಟ ಪ್ರಾರಂಭವಾದಾಗ ಆ ಹೋರಾಟದಲ್ಲಿ ಭಾಗವಹಿಸಿದವರಿಗೆ ಇಷ್ಟು ಜಾಗ್ರತೆಯಾಗಿ ಸ್ವರಾಜ್ಯ ಬರುತ್ತದೆ, ಸ್ವರಾಜ್ಯ ಬಂದ ನಂತರ ನಮಗೆ ಜಮೀನು ಸಿಕ್ಕುತ್ತದೆ ಅಥವಾ ಜಹಗೀರಿ, ಇನಾಂ ಸಿಕ್ಕುತ್ತದೆ ಅಥವಾ ಶಾಸನ ಸಭೆಯ ಸದಸ್ಯನಾಗುತ್ತೇನೆ ಅಥವಾ ಮಂತ್ರಿಯಾಗುತ್ತೇನೆ ಎಂದು ಯಾರೂ ಖಂಡಿತವಾಗಿಯೂ ತಿಳಿದಿರಲಿಲ್ಲ. ಅವರು ಯಾವ ಸ್ವಾರ್ಥದ ಮನೋಭಾವನೆಯೂ ಇಲ್ಲದೆ ಸ್ವರಾಜ್ಯದ ಚಳವಳಿಯಲ್ಲಿ ಭಾಗವಹಿಸಿದರು. ದೈವಕೃಪೆಯಿಂದ ಸ್ವರಾಜ್ಯ ಲಭಿಸಿತು. ಸ್ವರಾಜ್ಯ ಬಂದ ನಂತರ, ನಿಸ್ವಾರ್ಥತೆಯಿಂದ ಸ್ವರಾಜ್ಯದ ಹೋರಾಟದಲ್ಲಿ ಧುಮುಕಿ ಕಷ್ಟಪಟ್ಟವರಿಗೆ, ಅವರು ನಿರ್ಗತಿಕರಾಗಿದ್ದರೆ, ಬಹಳ ಬಡವರಾಗಿದ್ದರೆ, ಅಂಥವರಿಗೆ ಸಹಾಯ ಮಾಡತಕ್ಕದ್ದು ಸರ್ಕಾರದ ಕರ್ತವ್ಯ ಎಂಬ ಭಾವನೆಯಿಂದ ಸರ್ಕಾರದವರು ರಾಜಕೀಯದಲ್ಲಿ ನೊಂದವರಿಗೆ ಜಮೀನನ್ನು ಮುಫತ್ತಾಗಿ ಕೊಡಬೇಕು ಎಂಬುದಾಗಿ 3-4 ವರ್ಷದ ಕೆಳಗೆ ತೀರ್ಮಾನ ಮಾಡಿದರು. ಈ ಸಂಬಂಧ ಎರಡು ಸರ್ಕಾರದ ಆಜ್ಞೆಗಳು ಆಗಿದೆ. ಒಂದು ಸರ್ಕಾರಿ ಆಜ್ಞೆಯಲ್ಲಿ 10 ಎಕರೆ ಖುಷ್ಕಿ ಅಥವಾ 5 ಎಕರೆ ತರೀ ಜಮೀನನ್ನು ಮುಫತ್ತಾಗಿ ರಾಜಕೀಯದಲ್ಲಿ ನೊಂದವರಿಗೆ ಕೊಡತಕ್ಕದ್ದು ಎಂದಿದೆ. ಅದರಲ್ಲೂ ರಾಜಕೀಯದಲ್ಲಿ ನಿಜವಾಗಿಯೂ ನೊಂದವರಿಗೆ ಮತ್ತು ಬಡವರಾದವರಿಗೆ ಕೊಡತಕ್ಕದ್ದು ಎಂದು ಇತ್ತೀಚೆಗೆ ಪುನಃ ಅದೇ ಸರ್ಕಾರಿ ಆಜ್ಞೆಗೆ ಸಂಬಂಧಪಟ್ಟಂತೆ ಇನ್ನೊಂದು ಆಜ್ಞೆಯನ್ನು ಮಾಡಲಾಗಿದೆ.

12-30 P.M.

(ಶ್ರೀ ಕಡಿದಾಳ್ ಮಂಜಪ್ಪ.)

ರಾಜಕೀಯದಲ್ಲಿ ಭಾಗವಹಿಸಿ ಕಷ್ಟಪಟ್ಟಿರುವ ಅನೇಕರಿಗೆ ಸಹಾಯ ನೀಡಿದೆ. ಈಗಿರತಕ್ಕಂಥ ಕ್ರಮದ ಪ್ರಕಾರ ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷರು ಅಥವಾ ಕಾರ್ಯದರ್ಶಿಯವರು ಶಿಫಾರಸು ಮಾಡಿದರೂ ಅದರ ಆಧಾರದ ಮೇಲೂ ಜಮೀನನ್ನು ಕೊಡುತ್ತಿದ್ದೇವೆ.

Sri M. PALANIYAPPAN (Ulsoor).—Some petitions were given to the Revenue Officer. Those petitions have not seen the light of the day yet.

ಶ್ರೀ ಕಡಿದಾಳ್ ಮಂಜಪ್ಪ.—ಯಾವ ಸಂದರ್ಭದಲ್ಲಾದರೂ ಕೂಡ ಒಬ್ಬ ವ್ಯಕ್ತಿ ರಾಜಕೀಯದಲ್ಲಿ ನೊಂದವನು ಅಥವಾ ಬಡವ ಎಂಬ ವಿಚಾರದಲ್ಲಿ ಅನುಮಾನ ಬಂದಾಗ ಸಂಬಂಧಪಟ್ಟ ಅಧಿಕಾರಿಗಳು ಸೂಕ್ತ ತನಿಖೆ ನಡೆಸಿ ತೀರ್ಮಾನ ಕೈಗೊಳ್ಳುವುದಕ್ಕೆ ಕೂಡ ಅವಕಾಶ ಕಲ್ಪಿಸಲಾಗಿದೆ. ಶ್ರೀಮತಿ ಸಿದ್ದಮ್ಮನವರು ತಂದಿರುವ ನಿರ್ಣಯದಲ್ಲಿ ರಾಜಕೀಯದಲ್ಲಿ ನೊಂದವರಿಗೆ ಜಮೀನು ಕೊಡುವಾಗ ಕೋರ್ಟುಗಳಲ್ಲಿ ದರಖಾಸ್ತುದಾರನ ವಿಚಾರದಲ್ಲಿ ಏನು ವ್ಯವಹಾರ ನಡೆದಿದೆಯೋ ಅದನ್ನೆಲ್ಲಾ ವಿಮರ್ಶಿಸಿ ತೀರ್ಮಾನ ಮಾಡಬೇಕೆಂದು ಹೇಳಿದ್ದಾರೆ. ಈ ಸಲಹೆ ಸೂಕ್ತವಾದರೂ ಕಾರ್ಯಗತ ಮಾಡುವುದಕ್ಕೆ ಬಹಳ ಕಷ್ಟವಾಗುತ್ತದೆ. ಯಾವ ಯಾವ ದರಖಾಸ್ತುದಾರ ಯಾವ ಇಸವಿಯಲ್ಲಿ ಜೈಲಿಗೆ ಹೋಗಿದ್ದ ಅಥವಾ ಎಷ್ಟು ರೂಪಾಯಿ ಜುಲ್ಮಾನೆ ಕೊಟ್ಟಿದ್ದ ಎಂದು ಕಂಡು ಹಿಡಿಯುವುದಕ್ಕೆ ಕಷ್ಟವಾಗುತ್ತದೆ. ನಾವು ಜಿಲ್ಲೆಯಲ್ಲಿರುವ ಅಧಿಕಾರಿಗಳನ್ನು ಮತ್ತು ರಾಜಕೀಯ ಮುಂದಾಳುಗಳನ್ನು ಇಂಥ ವಿಚಾರದಲ್ಲಿ ನಂಬಲೇ ಬೇಕಾಗುತ್ತದೆ. ಕೆಲವು ಸಂದರ್ಭಗಳಲ್ಲಿ ಶ್ರೀಮಾಣಿಕ್ಯಲಿಂಗಯ್ಯನವರು ಮತ್ತು ಇತರರು ಹೇಳಿರುವ ಹಾಗೆ ಅಪಾತ್ರರಿಗೆ ಜಮೀನು ಸಿಕ್ಕಿರುವುದು ಗಮನಕ್ಕೆ ಬಂದಿದೆ. ಆದರೆ ಯಾರೋ ಮೂವರು.ನಾಲ್ಕರು ಅರ್ಹತೆಯಿಲ್ಲದ ಜನರಿಗೆ ಅಚಾತುರ್ಯದಿಂದ ಸಿಕ್ಕಿದೆ ಎಂಬ ಕಾರಣದ ಮೇಲೆ ರಾಜಕೀಯದಲ್ಲಿ ನೊಂದವರಿಗೆ ಜಮೀನೇ ಕೊಡಕೂಡದೆಂದು ಹೇಳುವ ವಾದ ಸರಿಯಲ್ಲ. ಇಡೀ ಸಂಸ್ಥಾನದಲ್ಲಿ 1,000 ಎಕರೆಯವರೆಗೆ ಇದುವರೆಗೆ ನೊಂದವರಿಗಾಗಿ ಕೊಟ್ಟಿದ್ದೇವೆ. ನನ್ನ ಅಧಿಕಾರದ ಅವಧಿಯಲ್ಲಿ 10-12 ಎಕರೆಗಳಿಗಿಂತ ಹೆಚ್ಚಾಗಿ ಕುಷ್ಕಿ ಜಮೀನನ್ನು ಮತ್ತು 5-6 ಎಕರೆಗಳಿಗಿಂತ ಹೆಚ್ಚಾಗಿ ತರೀ ಜಮೀನನ್ನು ಯಾರಿಗೂ ಕೊಟ್ಟಿಲ್ಲ. ನಿಮ್ಮನ್ನವರ್ಗದವರಿಗೆ ಸಂಬಂಧಪಟ್ಟ ದರಖಾಸ್ತು ನಿಯಮಗಳ ಪ್ರಕಾರ ಕೊಟ್ಟಿರುವುದನ್ನು ಮತ್ತು ಅರ್ಡಿನರಿ ರೂಲ್ಸು ಪ್ರಕಾರ ಕೊಟ್ಟಿರುವುದನ್ನೂ ಕೆಲವರು ಮಾರಿದ್ದಾರೆ.

ಶ್ರೀ ಬಿ. ರಾಚಯ್ಯ (ಎಳಂದೂರು—ಅನುಸೂಚಿತ ಜಾತಿಗಳು).—20 ವರ್ಷಗಳವರೆಗೆ ಪರಭಾರೆ ಮಾಡ ಕೂಡದೆಂದು ಕಂಡೀಷ್ನ್ ಇದೆ.

Sri Kadidal MANJAPPA.—In spite of conditions, lands have been alienated; such instances have come to my notice. ರಾಜಕೀಯದಲ್ಲಿ ನೊಂದವರಿಗೆ ಪರಿಹಾರ ರೂಪದಲ್ಲಿ ಜಮೀನನ್ನು ಕೊಟ್ಟಿದ್ದೇವೆ, ಇನಾಂ ಹಾಕಿ ಕೊಟ್ಟಿಲ್ಲ. ತೆಗೆದು ಕೊಂಡವರು ಕಂದಾಯ ಕೊಡುವುದಕ್ಕೆ ಬದ್ಧರಾಗಿರುತ್ತಾರೆ. ಕೆಲವು ಕಡೆ ಜಮೀನು ಪರಭಾರೆ ಮಾಡಿರಬಹುದು. ಅದರಿಂದ ಲಾಭ ಬಂದಿರಬಹುದು. ಪರಿಹಾರ ರೂಪವಾಗಿ ಕೊಡುವುದರಿಂದ ಆ ವಿಚಾರದಲ್ಲಿ ಇಷ್ಟು ಆಕ್ಷೇಪಣೆ ಬೇಡವೆಂದು ಅರಿಕೆ ಮಾಡುತ್ತೇನೆ. ಎರಡನೆಯದಾಗಿ ಅವರು ಕೊಟ್ಟರೂ ತೆಗೆದುಕೊಂಡವರು ದೇಶ ಭಕ್ತರಲ್ಲ.

ಇನ್ನೊಂದು ಅಂಶವನ್ನು ಮಾನ್ಯ ಸದಸ್ಯರ ಗಮನಕ್ಕೆ ತರಬೇಕಾಗಿದೆ. ಬರೀ ಕಾಂಗ್ರೆಸ್ ಸಂಸ್ಥೆಗೇ ಸೇರಿದ ವ್ಯಕ್ತಿಗಳಿಗೇ ಕೊಡಬೇಕೆಂದು ಸರ್ಕಾರದ ಉದ್ದೇಶವಲ್ಲ. ಕೆಲವು ಸಂದರ್ಭಗಳಲ್ಲಿ ಇತರರಿಗೂ ಕೊಟ್ಟಿದೆ. ಈಗಲೂ ನೊಂದವರಿದ್ದರೆ ಬಡವರಾಗಿದ್ದರೆ ಕೊಡಲು ಸಿದ್ಧರಾಗಿದ್ದೇವೆ. ಇಷ್ಟು ಎವರಗಳನ್ನು ಕೊಟ್ಟ ಮೇಲೆ ಶ್ರೀಮತಿ ಸಿದ್ದಮ್ಮನವರು ತಮ್ಮ ನಿರ್ಣಯವನ್ನು ವಾಪಸ್ಸುಪಡೆಯಬೇಕೆಂದು ಪ್ರಾರ್ಥಿಸುತ್ತೇನೆ.

ಶ್ರೀಮತಿ ಬಳ್ಳಾರಿ ಸಿದ್ದಮ್ಮ.—ಸ್ವಾಮಿ, ನೊಂದವರಿಗೆ ನ್ಯಾಯ ದೊರಕಿಸಿಕೊಡುವುದಾಗಿ ಭರವಸೆ ಕೊಟ್ಟಿದ್ದರಿಂದ ನನ್ನ ನಿರ್ಣಯವನ್ನು ವಾಪಸ್ಸು ತೆಗೆದು ಕೊಳ್ಳಲು ಅಪ್ಪಣೆ ಬೇಡುತ್ತೇನೆ.

The resolution was, by leave, withdrawn.

Mr. SPEAKER.—The House will now adjourn and meet on Monday at Twelve of the Clock.

The House adjourned at Thirty-five Minutes past Twelve of the Clock to meet again on Monday, the 4th April 1955 at Twelve of the Clock.

WD 4508—GPB—550—16-9-55